ಗೋಪಾಲಕೃಷ್ಣ ಪೈಯವರ 'ಸ್ವಪ್ನ ಸಾರಸ್ವತ' ಕಾದಂಬರಿಯಲ್ಲಿ ವಲಸೆ ಪ್ರಕ್ರಿಯೆ

ಹಂಪಿ, ಕನ್ನಡ ವಿಶ್ವವಿದ್ಯಾಲಯದ ಭಾಷಾನಿಕಾಯದಿಂದ
ಎಂ. ಫಿಲ್. ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ
ಶಿವಕುಮಾರ್ ಎಂ. ಕೆ.

ಮಾರ್ಗದರ್ಶಕರು
ಡಾ॥ ಗಿರೀಶ್ ಭಟ್ ಎ.

೨೦೧೨

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು.

ಗೋಪಾಲಕೃಷ್ಣ ಪೈಯವರ 'ಸ್ವಪ್ನ ಸಾರಸ್ವತ' ಕಾದಂಬರಿಯಲ್ಲಿ ವಲಸೆ ಪ್ರಕ್ರಿಯೆ

ಹಂಪಿ, ಕನ್ನಡ ವಿಶ್ವವಿದ್ಯಾಲಯದ ಭಾಷಾನಿಕಾಯದಿಂದ

ಎಂ. ಫಿಲ್. ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ

ಶಿವಕುಮಾರ್ ಎಂ. ಕೆ.

ಮಾರ್ಗದರ್ಶಕರು

ಡಾ॥ ಗಿರೀಶ್ ಭಟ್ ಎ.

೨೦೧೨

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ. ಫಿಲ್. ಪದವಿಗಾಗಿ ಸಾದರಪಡಿಸಿದ ಗೋಪಾಲ ಕೃಷ್ಣ ಪೈಯವರ 'ಸ್ವಪ್ನ ಸಾರಸ್ವತ' ಕಾದಂಬರಿಯಲ್ಲಿ ವಲಸೆ ಪ್ರಕ್ರಿಯೆ ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಈ ಸಂಶೋಧಕರ ಸ್ವತಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ॥ ಗಿರೀಶ್ ಭಟ್ ಎ. ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

ಶಿವಕುಮಾರ್ ಎಂ. ಕೆ.

ಯೋಗ್ಯತಾ ಪತ್ರ

ಶಿವಕುಮಾರ್ ಎಂ. ಕೆ. ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಗೋಪಾಲಕೃಷ್ಣ ಪೈಯವರ 'ಸ್ವಪ್ನ ಸಾರಸ್ವತ' ಕಾದಂಬರಿಯಲ್ಲಿ ವಲಸೆ ಪ್ರಕ್ರಿಯೆ ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ. ಫಿಲ್. ಪದವಿ ಪ್ರಾಪ್ತಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ಅಭಿಪ್ರಾಯ ಸಂಗ್ರಹ, ಬೋಧನೆ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲ.

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

ಡಾ|| ಗಿರೀಶ್ ಭಟ್ ಎ.
ಸಂಶೋಧನಾ ಮಾರ್ಗದರ್ಶಕರು

ಗೋಪಾಲಕೃಷ್ಣ ಪೈಯವರ 'ಸ್ವಪ್ನ ಸಾರಸ್ವತ' ಕಾದಂಬರಿಯಲ್ಲಿ ವಲಸೆ ಪ್ರಕ್ರಿಯೆ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧ ಪ್ರಸ್ತಾವನೆ

೧.೨ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೩ ಅಧ್ಯಯನದ ಸ್ವರೂಪ

೧.೪ ಈವರೆಗಿನ ಸಮೀಕ್ಷೆ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧ ಪ್ರಸ್ತಾವನೆ

ಜಗತ್ತು ತೀವ್ರವಾಗಿ ಆಧುನಿಕರಣಕ್ಕೆ ಒಳಗಾಗುತ್ತಿರುವ ಈ ಕಾಲಘಟ್ಟದಲ್ಲಿ ಜನರ ಸ್ಥಳಾಂತರ ಎಂಬುದು ನಿತ್ಯದ ಪ್ರಕ್ರಿಯೆ ಆಗಿದೆ. ಅಭಿವೃದ್ಧಿಗೆ ಅಥವಾ ಪ್ರಗತಿ ಎಂಬುದನ್ನು ಆಧುನಿಕ ಮನಸ್ಸುಗಳು ಹಾಗೂ ಪ್ರಭುತ್ವಗಳು, ಕೈಗಾರೀಕರಣ, ಬೃಹತ್ ಉದ್ದಿಮೆ, ಬೃಹತ್ ಅಣೆಕಟ್ಟು, ಇತ್ಯಾದಿ ಮಾನದಂಡಗಳ ಮೂಲಕ ಅಳೆಯುತ್ತವೆ. ಇಂಥ ಯೋಜನೆಗಳಿಂದಾಗಿ ಒಂದು ಪ್ರದೇಶದಲ್ಲಿ ತಮ್ಮಷ್ಟಕ್ಕೆ ತಾವೇ ವಾಸಿಸುತ್ತಿದ್ದ ಜನರು, ವಿವಿಧ ಒತ್ತಡಗಳಿಗೆ ಒಳಗಾಗಿ ತಮ್ಮ ಊರು, ಹೊಲ ಮನೆಗಳನ್ನು ಬಿಟ್ಟು ಹೋಗಬೇಕಾಗುತ್ತದೆ. ಹೀಗೆ ಒತ್ತಡಕ್ಕೆ ಒಳಗಾಗಿ ವಲಸೆ ಹೋಗುವವರು, ತೀವ್ರವಾದ ಸಂಕಟವನ್ನು ಅನುಭವಿಸುವುದು ಸಹಜವೇ ಆಗಿದೆ. ಜನರನ್ನು ಒಂದೆಡೆಯಿಂದ ಒಕ್ಕಲೆಬ್ಬಿಸುವುದೆಂದರೆ ಅದು ಕೇವಲ ಆರ್ಥಿಕತೆಗೆ ಅಥವಾ ಅವರ ಉತ್ಪಾದನಾ ವಿಧಾನಕ್ಕೆ ಸಂಬಂಧಿಸಿದ ಪ್ರಶ್ನೆಯಲ್ಲ. ಅದು ಜನರನ್ನು ಸಾಂಸ್ಕೃತಿಕವಾಗಿಯೂ ಅತಂತ್ರರನ್ನಾಗಿಸುತ್ತದೆ. ಈ ರೀತಿಯ ಸ್ಥಳಾಂತರ ಪ್ರಕ್ರಿಯೆಗಳು ಉಂಟು ಮಾಡುವ ತೊಳಲಾಟಗಳನ್ನು ಕುರಿತಾಗಿ ಮಾನವ ಹಕ್ಕುಗಳ ಹೋರಾಟಗಾರರು, ಪರಿಸರವಾದಿಗಳು ಮೊದಲಾದವರು ಇತ್ತೀಚಿನ ವರ್ಷಗಳಲ್ಲಿ ದನಿ ಎತ್ತುತ್ತಾ ಬಂದಿದ್ದಾರೆ. ಮುಂದೆ ಅದೇ ರೀತಿ ಸಾಹಿತ್ಯ ಕೃತಿಗಳು ಕೂಡಾ ಧ್ವನಿಪೂರ್ಣವಾಗಿ ವಲಸೆ ಅಥವಾ ಸ್ಥಳಾಂತರ ಸಮಸ್ಯೆಯನ್ನು ಬಿಡಿಸಿಟ್ಟದ್ದು ಉಂಟು. ಉದಾಹರಣೆಗೆ ನಾ. ಡಿ'ಸೋಜಾರವರ 'ಮುಳುಗಡೆ' ಕಾದಂಬರಿಯಲ್ಲಿ ಮುಳುಗಡೆಯಾಗುತಿರುವ ಪ್ರದೇಶದ ಜನರ ಆತಂಕ, ತಲ್ಲಣ, ಸಮಯಸಾಧಕತನ ಇತ್ಯಾದಿ ಅಂಶಗಳ ಚಿತ್ರಣವಾಗಿದೆ. ಭೌಗೋಳಿಕವಾಗಿ ನೆರೆ ಬಂದಾಗ, ದರೋಡೆ ದಂಗೆಗಳಿಂದ ಬದುಕು ದುರ್ಬರವಾದಾಗ, ವಿಭಜನೆಯ ಅನಿರೀಕ್ಷಿತ ಹೊಡೆತ ಬಿದ್ದಾಗ ನಿರುಪಾಯ ಸ್ಥಿತಿಯಲ್ಲಿ ಬದುಕುವ ದಾರಿಯ ಸ್ಥಳವನ್ನು ಹುಡುಕಿಕೊಂಡು ಜನರು ವಲಸೆ ಹೋಗುವುದು ನೈಸರ್ಗಿಕವಾಗಿದೆ. ಇತಿಹಾಸದಲ್ಲಿ ಇಂಥ ಸಂಗತಿಗಳು ಅನೇಕ ಇವೆ. ಒಂದು ಊರಿನಿಂದ ಸಮೃದ್ಧವಾದ ಮತ್ತೊಂದು ಊರಿಗೆ ಹೋಗಿ ನೆಲೆಸುವುದೇ ವಲಸೆಯಾಗಿದೆ. ಮೇಲೆ ಹೇಳಿದ ಆಧುನಿಕ ಕಾಲದ ಸ್ಥಳಾಂತರ ಅಥವಾ ವಲಸೆ ಪ್ರಕ್ರಿಯೆಗಿಂತ ಭಿನ್ನವಾಗಿ ಭಾರತವು ವಸಾಹತುವಾಗಿದ್ದ ಕಾಲದಲ್ಲಿ ಗೋವಾದಿಂದ ನೂರಾರು ಕುಟುಂಬಗಳು ದಕ್ಷಿಣಾಭಿಮುಖವಾಗಿ ವಲಸೆ ಬಂದ ಪ್ರಕ್ರಿಯೆ ನಡೆದಿರುವುದು ಇತಿಹಾಸದಲ್ಲಿ ದಾಖಲಾಗಿದೆ. ಈ ಬಗ್ಗೆ ಬೇಕಾದಷ್ಟು ಇತಿಹಾಸಕಾರರು ಬರೆದಿದ್ದಾರೆ. ಆದರೆ ಒಂದು ಸನ್ನಿವೇಶವನ್ನು ಕಾದಂಬರಿಯಂಥ ಒಂದು ಕಲಾಕೃತಿಯು ಚಿತ್ರಿಸುವ ಬಗೆಯು ಇತಿಹಾಸ ಪುಸ್ತಕವು ಚಿತ್ರಿಸುವ ಬಗೆಗಿಂತ ಭಿನ್ನವಾಗಿರುತ್ತದೆ. ಸಾಹಿತ್ಯ ಕೃತಿಯು ವಿಚಾರಗಳನ್ನು ವ್ಯಾಖ್ಯಾನಿಸದೆ, ಸೂಕ್ಷ್ಮವಾಗಿ ಒಳನೋಟಗಳನ್ನು ನೀಡುವ ಸಾಮರ್ಥ್ಯವನ್ನು ಹೊಂದಿರುತ್ತದೆ.

೧.೨ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಬಾಲ್ಯದಿಂದಲೂ ನಾನು ಹುಟ್ಟಿ ಬೆಳೆದಿದ್ದು ಬಯಲು ಪ್ರದೇಶದಲ್ಲಿ ನಂತರ ಬಂದು ನೆಲೆಸಿದ್ದು ಕರ್ನಾಟಕದ ಕರಾವಳಿ ಪ್ರದೇಶದಲ್ಲಿ. ನಾನು ಇಲ್ಲಿಗೆ ಬಂದಾಗ ನನಗೆ ತುಳುನಾಡಿನ ಸಾಹಿತ್ಯ, ಜಾನಪದ ವಿಚಾರ ಹಾಗೂ ಜನರ ವಲಸೆಯ ಬಗ್ಗೆ ಹೆಚ್ಚು ಕುತೂಹಲ ಮತ್ತು ಆಸಕ್ತಿ ಬೆಳೆಯಿತು. ಹಾಗಾಗಿ ತುಳು ಜನರ ವಲಸೆಗೆ ಸಂಬಂಧಪಟ್ಟಂತೆ ಹೆಚ್ಚು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದೆ. ಇದಕ್ಕೆ ಸಂಬಂಧಪಟ್ಟ ಬರಹಗಳು, ವಿಚಾರಗಳು ಸಿಕ್ಕಿದಾಗಲೆಲ್ಲಾ ಅವುಗಳನ್ನು ಸಂಗ್ರಹಿಸಿ, ಓದಿಕೊಳ್ಳುತ್ತಾ ಬಂದ ಹಾಗೆ ಅವುಗಳ ಬಗ್ಗೆ ಅಭಿರುಚಿ ಬೆಳೆಯಿತು. ಹೀಗೆ ಆರಂಭವಾದ ನನ್ನ ಆಸಕ್ತಿಗೆ ಇನ್ನಷ್ಟು ಸ್ಫೂರ್ತಿ ಕೊಟ್ಟದ್ದು ಡಾ॥ ವಿಶ್ವನಾಥ ಕಾರ್ನಾಡ್‌ರವರ 'ತುಳುವರ ಮುಂಬಯಿ ವಲಸೆ' ಎಂಬ ಗ್ರಂಥ. ಈ ಗ್ರಂಥವನ್ನು ನಾನು ಒಮ್ಮೆ ಓದಿದಾಗ ತುಳುವರು ವಲಸೆ ಹೋಗಲು ಪ್ರಮುಖ ಕಾರಣಗಳೇನು ಎಂಬುದು ನನ್ನ ಅರಿವಿಗೆ ಬಂದಂತೆ ವಲಸೆಗೆ ಸಂಬಂಧಿಸಿದಂತೆ ಇನ್ನಷ್ಟು ಕೃತಿಗಳನ್ನು ಓದುವ ಪ್ರೇರಣೆಯನ್ನು ನೀಡಿತು. ಹೀಗೆ ಇರಬೇಕಾದರೆ ವಲಸೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಗೋಪಾಲ ಕೃಷ್ಣ ಪೈಯವರು ಬರೆದಿರುವ 'ಸ್ವಪ್ನ ಸಾರಸ್ವತ' ಕಾದಂಬರಿಯಲ್ಲಿ ಗೌಡ ಸಾರಸ್ವತರು ಗೋವಾದಿಂದ ದಕ್ಷಿಣಕ್ಕೆ ಬಂದ ಕಾರಣ, ಪರಿಣಾಮಗಳು ಚಿತ್ರಿತವಾದ ರೀತಿಯು ನನ್ನ ಅಧ್ಯಯನಕ್ಕೆ ಸ್ಫೂರ್ತಿಯಾದವು.

ಇತಿಹಾಸದ ಘಟನೆಗಳನ್ನು ವರ್ತಮಾನದ ತಮ್ಮ ತಮ್ಮ ಉದ್ದೇಶಗಳಿಗೆ ಅನುಗುಣವಾಗಿ ತಮಗೆ ಬೇಕಾದಂತೆ ಅರ್ಥೈಸುವ ಮತು ವ್ಯಾಖ್ಯಾನಿಸುವ ಸನ್ನಿವೇಶಗಳನ್ನು ನಾವು ಇತ್ತೀಚಿನ ವರ್ಷಗಳಲ್ಲಿ ಕಾಣುತ್ತೇವೆ. ಆದರೆ ಸ್ವಪ್ನ ಸಾರಸ್ವತ ಕಾದಂಬರಿಯು ಯಾವುದೇ ಪೂರ್ವಾಗ್ರಹಗಳನ್ನು ಇಟ್ಟುಕೊಳ್ಳದೆ ಮತ್ತು ಇತಿಹಾಸದ ಕುರಿತ ಭಾವನೆಗಳನ್ನು ಕೆರಳಿಸುವ ಉದ್ದೇಶವನ್ನಿಟ್ಟುಕೊಳ್ಳದೆ ಕಥೆ ಹೇಳುತ್ತಾ ಹೋಗುತ್ತದೆ. ಹೀಗೆ ವಲಸೆ ಪ್ರಕ್ರಿಯೆಯು ಈ ಕಾದಂಬರಿಯ ಶಿಲ್ಪದಲ್ಲಿ ಅವಿಭಾಜ್ಯ ಅಂಗವಾಗಿ ಸೇರಿಕೊಂಡಿದೆ. ಆದ್ದರಿಂದ ಇವೆಲ್ಲವನ್ನೂ ನಾನು ಗಮನದಲ್ಲಿಟ್ಟುಕೊಂಡು ಗೋಪಾಲಕೃಷ್ಣ ಪೈಯವರ 'ಸ್ವಪ್ನ ಸಾರಸ್ವತ' ಕಾದಂಬರಿಯಲ್ಲಿ ವಲಸೆ ಪ್ರಕ್ರಿಯೆ ಎನ್ನುವ ವಿಷಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದೇನೆ. ಹಾಗಾಗಿ ಇಲ್ಲಿ ವಲಸೆ ಪ್ರಕ್ರಿಯೆಯನ್ನು ಪ್ರತಿನಿಧಿಸಿದ ವಿಚಾರಗಳನ್ನು ಬಳಸಿಕೊಂಡು ಈ ಕಾದಂಬರಿಯನ್ನು ಅಧ್ಯಯನ ಮಾಡುವುದೇ ಈ ನನ್ನ ಸಂಪ್ರಬಂಧದ ಉದ್ದೇಶವಾಗಿದೆ.

ಪ್ರಸ್ತುತ ಸಂಪ್ರಬಂಧವು ಒಟ್ಟು ಐದು ಅಧ್ಯಾಯಗಳನ್ನು ಹೊಂದಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಸ್ವರೂಪ, ಉದ್ದೇಶ ಮತ್ತು ವ್ಯಾಪ್ತಿ ಮತ್ತು ಅಧ್ಯಯನದ ಸಮೀಕ್ಷೆಯ ಕುರಿತಾಗಿ ನಿರೂಪಿಸಲಾಗುವುದು.

ಎರಡನೆಯ ಅಧ್ಯಾಯದಲ್ಲಿ ಗೋಪಾಲಕೃಷ್ಣ ಪೈಯವರ ಒಟ್ಟಾರೆ ಬರಹ ಮತ್ತು ಸ್ವಪ್ನ ಸಾರಸ್ವತ ಕಾದಂಬರಿ ರೂಪುಗೊಂಡ ಬಗೆಯನ್ನು ನಿರೂಪಿಸಲಾಗುವುದು.

ಮೂರನೇ ಅಧ್ಯಾಯದಲ್ಲಿ ವಲಸೆಯ ಅರ್ಥ, ವಲಸೆಗೆ ಕಾರಣಗಳು, ಕರ್ನಾಟಕದ ಕರಾವಳಿಯಲ್ಲಿ ವಲಸೆ, ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯ ನಂತರ, ಭವಿಷ್ಯದ ವಲಸೆಗಳನ್ನು ಕುರಿತಂತೆ ಹಾಗೂ ಗೌಡ ಸಾರಸ್ವತರ ಐತಿಹಾಸಿಕ ಹಿನ್ನೆಲೆಯನ್ನು ಕುರಿತು ಚರ್ಚಿಸಲಾಗುವುದು.

ನಾಲ್ಕನೆಯ ಅಧ್ಯಾಯದಲ್ಲಿ 'ಸ್ವಪ್ನ ಸಾರಸ್ವತ' ಕಾದಂಬರಿಯಲ್ಲಿ ವಲಸೆ ಪ್ರಕ್ರಿಯೆಗೆ ಕಾರಣಗಳು ಮತ್ತು ವಲಸೆ ಪ್ರಕ್ರಿಯೆಯ ಇಕ್ಕಟ್ಟು, ಬಿಕಟ್ಟುಗಳನ್ನು ಹಾಗೂ ವಲಸೆ ಪ್ರಕ್ರಿಯೆಯಿಂದ ಉಂಟಾದ ಸಾಂಸ್ಕೃತಿಕ ಪಲ್ಲಟಗಳನ್ನು ಉಲ್ಲೇಖಿಸಲಾಗುವುದು.

ಐದನೇ ಅಧ್ಯಾಯದಲ್ಲಿ ಉಪಸಂಹಾರ ಮತ್ತು ಗ್ರಂಥಋಣ ಹಾಗೂ ಅನುಬಂಧವನ್ನು ದಾಖಲಿಸಲಾಗುವುದು. ಸಂಶೋಧನಾ ಪ್ರಬಂಧದಲ್ಲಿ ಈ ಅಂಶಗಳಿಗೆ ಸಂಬಂಧಿಸಿದಂತೆ ವಿಶ್ಲೇಷಣೆ ಮಾಡಲಾಗುವುದು.

೧.೩ ಅಧ್ಯಯನದ ಸ್ವರೂಪ

ಗೋಪಾಲಕೃಷ್ಣ ಪೈಯವರ 'ಸ್ವಪ್ನ ಸಾರಸ್ವತ' ಕಾದಂಬರಿಯಲ್ಲಿ ವಲಸೆ ಪ್ರಕ್ರಿಯೆ ಎಂಬ ಶೀರ್ಷಿಕೆಯನ್ನು ಇಟ್ಟುಕೊಂಡು ಸಂಪ್ರಬಂಧವನ್ನು ರಚಿಸಲಾಗಿದೆ. ಈ ಸಂಪ್ರಬಂಧದ ಅಧ್ಯಾಯಗಳು ಒಳಗೊಳ್ಳುವ ವಿಚಾರಗಳು ಮತ್ತು ಅವುಗಳ ವಿಶ್ಲೇಷಣೆಯು ಅಧ್ಯಯನದ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ. ಇಲ್ಲಿ ಪ್ರಮುಖವಾದ ಮೂರು ಅಧ್ಯಾಯಗಳು ತಮ್ಮದೇಯಾದ ವೈಶಿಷ್ಟ್ಯವನ್ನು ಹೊಂದಿದ್ದು ಅವುಗಳ ಮೂಲಕ ಗೋಪಾಲಕೃಷ್ಣ ಪೈಯವರ ಬರಹ, ಕಾದಂಬರಿ ರೂಪುಗೊಳ್ಳಲು ಪ್ರೇರಣೆ ಹಾಗೂ ವಲಸೆ ಪ್ರಕ್ರಿಯೆ, ಆದರಿಂದ ಉಂಟಾದ ಸಾಂಸ್ಕೃತಿಕ ಪಲ್ಲಟ, ಪರಿಣಾಮವನ್ನು ಪ್ರತಿಬಿಂಬಿಸಲು ಸಾಧ್ಯವಾಗುತ್ತದೆ ಎಂದು ಭಾವಿಸಲಾಗಿದೆ. ಜೊತೆಗೆ ಈ ವಿಚಾರಗಳನ್ನು ಕುರಿತಂತೆ ಬೇರೆ ಬೇರೆ ಮಜಲಿನಿಂದ ವಿಶ್ಲೇಷಿಸುವ ಪ್ರಯತ್ನ ನಡೆದಿದೆ. ಕಾದಂಬರಿಯಲ್ಲಿ ವ್ಯಕ್ತವಾಗಿರುವ ವಲಸೆಗೆ ಕಾರಣಗಳು, ವಲಸೆಯ ಸಂಕಷ್ಟ, ಸಾಂಸ್ಕೃತಿಕ ಪಲ್ಲಟ ಮುಂತಾದವುಗಳನ್ನು ಕಾದಂಬರಿಕಾರರು ಪರಿಭಾವಿಸಿಕೊಂಡ ಬಗೆಯನ್ನು ವಿಶ್ಲೇಷಿಸಲಾಗಿದೆ. ಪ್ರಸ್ತುತ ಆಧುನಿಕ ಜೀವನದಲ್ಲಿ ವಲಸೆ ಎನ್ನುವಂಥದ್ದು ದೈನಂದಿನ ಪ್ರಕ್ರಿಯೆ ಆಗಿದೆ. ನಾನಾ ಕಾರಣಗಳಿಂದಾಗಿ ಮನುಷ್ಯ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗುತ್ತಾನೆ. ಆದರೆ ನಾನೂರು ವರ್ಷಗಳ ಹಿಂದೆ ಗೋವಾದಲ್ಲಿ ಸಂತೃಪ್ತವಾಗಿ ಜೀವಿಸಿದ ಗೌಡ ಸಾರಸ್ವತ ಸಮುದಾಯ ಪೋರ್ಚುಗೀಸರ ದಬ್ಬಾಳಿಕೆಯಿಂದ ತನ್ನ ಸ್ವಂತ ಸ್ಥಳವನ್ನು ಬಿಟ್ಟು ದಕ್ಷಿಣಾಭಿಮುಖವಾಗಿ ವಲಸೆ ಹೊರಡುವುದನ್ನು ಗೋಪಾಲಕೃಷ್ಣ ಪೈಯವರ ಸ್ವಪ್ನ ಸಾರಸ್ವತ ಕಾದಂಬರಿ ಗತಕಾಲದ ಇತಿಹಾಸವನ್ನು ನೆನಪಿಸುತ್ತದೆ. ಇವರ ಈ ಕಾದಂಬರಿಯಲ್ಲಿ ವಲಸೆಗೆ ಕಾರಣಗಳನ್ನು ವಲಸೆಯಿಂದಾಗಿ ಉಂಟಾದ ಇಕ್ಕಟ್ಟು, ಬಿಕ್ಕಟ್ಟು, ಸಾಂಸ್ಕೃತಿಕ ಪಲ್ಲಟದ ವಿಚಾರಗಳನ್ನು ಮರು ವ್ಯಾಖ್ಯಾನಿಸುವ, ಸಾಧ್ಯವಾದಷ್ಟು ಮಟ್ಟಿಗೆ ಒಂದೆಡೆ ಸೇರಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಒಂದು ಜನಾಂಗದ ವಲಸೆಯನ್ನು ಕುರಿತು ಇತಿಹಾಸವನ್ನು ಅಭ್ಯಸಿಸಿ ಕಾದಂಬರಿಗಳು ರಚಿತವಾಗಿರುವುದು ತುಂಬಾ ವಿರಳವಾಗಿರುವುದರಿಂದ ಸಾಕಷ್ಟು ವಿಚಾರಗಳನ್ನು ಬಳಸಿಕೊಂಡ ಇವರ ಈ ಕಾದಂಬರಿ ಅಧ್ಯಯನಕ್ಕೆ ಯೋಗ್ಯವಾಗಿದೆ. ಪೈಯವರು ಈ ಕಾದಂಬರಿಯ ಮೂಲಕ ವಿಶೇಷವಾದ ಸಮರ್ಪಕವಾದ, ನೈಜವಾದ ಸಂಗತಿಗಳನ್ನು ನಿರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆಧುನೀಕರಣ, ಜಾಗತೀಕರಣ, ಉದಾರೀಕರಣದ ಪ್ರಸ್ತುತ ಸಂದರ್ಭಗಳಲ್ಲಿ ಇಂತಹ ಕಾದಂಬರಿಗಳ ರಚನೆ, ಓದು, ಮತ್ತು ಆ ಕುರಿತ ವಿಮರ್ಶೆಗಳು ಅರ್ಥಪೂರ್ಣವಾಗಿರುತ್ತವೆ.

೧.೪ ಈವರೆಗಿನ ಸಮೀಕ್ಷೆ

ಗೋಪಾಲಕೃಷ್ಣ ಪೈಯವರನ್ನು ಮತ್ತು 'ಸ್ವಪ್ನ ಸಾರಸ್ವತ' ಕಾದಂಬರಿಯನ್ನು ಕುರಿತಂತೆ ಡಿಸೆಂಬರ್ ೨೦೧೧ರಲ್ಲಿ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಎಸ್. ಮಾಲತಿಯವರ 'ಕೊಂಕಣಿ ಸಮಾಜಕ್ಕೆ ಅಸ್ಮಿತೆ ತಂದುಕೊಟ್ಟ ಸ್ವಪ್ನ ಸಾರಸ್ವತ' ಹಾಗೂ ಡಿಸೆಂಬರ್ ೨೦೧೧ರಲ್ಲಿ ಪ್ರಜಾವಾಣಿಯಲ್ಲಿ ರಘುನಾಥ ಚ. ಹ. ರವರ 'ಸ್ವಪ್ನ ಮತ್ತು ಸಂತೃಪ್ತಿ', ಡಿಸೆಂಬರ್ ೨೦೧೧ ಪ್ರಜಾವಾಣಯಲ್ಲಿ ಗೋಪಾಲಕೃಷ್ಣ ಪೈಯವರ 'ನನ್ನ ಕಾದಂಬರಿಯ ಕಥೆ' ಹಾಗೂ ಡಿಸೆಂಬರ್ ೨೦೧೧ರಲ್ಲಿ ಉದಯವಾಣಿ ಪತ್ರಿಕೆಯಲ್ಲಿ ಕಾದಂಬರಿಯ ಕುರಿತು ಮಹಾಲಿಂಗರವರ ಒಂದು ಲೇಖನ ಪ್ರಕಟವಾಗಿವೆ. ಇವನ್ನು ಬಿಟ್ಟರೆ ಬೇರೆ ಯಾವ ವಿವರವಾದ ಅಧ್ಯಯನಗಳೂ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ಒಂದು ಸಣ್ಣ ಪ್ರಯತ್ನವಾಗಿ ಪೈಯವರ 'ಸ್ವಪ್ನ ಸಾರಸ್ವತ' ಕಾದಂಬರಿ ಕುರಿತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಾಯ ೨

ಪೈಯವರ ಬದುಕು – ಬರಹ

೨.೧ ಗೋಪಾಲಕೃಷ್ಣ ಪೈಯವರ ಜೀವನ ಹಿನ್ನೆಲೆ

೨.೨ ಬರಹ ಮತ್ತು ಪ್ರಶಸ್ತಿಗಳು

೨.೩ ಸ್ವಪ್ನ ಸಾರಸ್ವತ ಕಾದಂಬರಿ ರೂಪುಗೊಂಡ ಬಗೆ

ಅಧ್ಯಾಯ ೨

ಪೈಯವರ ಬದುಕು – ಬರಹ

೨.೧ ಗೋಪಾಲ ಕೃಷ್ಣ ಪೈಯವರ ಜೀವನ ಹಿನ್ನೆಲೆ

ಕೇರಳದ ಕಾಸರಗೋಡು ಜಿಲ್ಲೆಯ ಪೆರ್ಲ ಎಂಬ ಹಚ್ಚ ಹಸಿರಿನ ಸುಂದರ ಪ್ರಕೃತಿಯ ನೆಲೆಯಾಗಿದ್ದ ಹಳ್ಳಿಯೊಂದರಲ್ಲಿ ಸುಬ್ರಾಯ ಪೈ ಮತ್ತು ಸುಭದ್ರ ಪೈ ಎಂಬ ಗೌಡ ಸಾರಸ್ವತ ಬ್ರಾಹ್ಮಣರ ಕುಟುಂಬವೊಂದರಲ್ಲಿ ಒಂಬತ್ತು ಜನ ಮಕ್ಕಳಲ್ಲಿ ಆರನೇ ಮಗನಾಗಿ ೧೯೪೭ ಮಾರ್ಚ್ ೨೫ ರಂದು ಜನಿಸಿದರು. ಪೈಯವರು ಸರಳತೆ, ಉದಾರತೆಗಳನ್ನು ಚಿಕ್ಕ ವಯಸ್ಸಿನಿಂದಲೇ ಹೆತ್ತವರಿಂದ ಮೈಗೂಡಿಸಿಕೊಂಡು ಬಂದವರು. ಇವರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವು ಪೆರ್ಲದ ಸತ್ಯನಾರಾಯಣ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ನಡೆಯಿತು. ಮುಂದೆ ಪಿ. ಯು. ಶಿಕ್ಷಣವನ್ನು ಪುತ್ತೂರಿನ ವಿವೇಕಾನಂದ ಕಾಲೇಜಿನಲ್ಲಿ ಮುಗಿಸಿದರು. ಹಾಗೂ ಬಿ. ಎಸ್ಸಿ. ಪದವಿಯನ್ನು ಮೂಲ್ಕಿಯ ವಿಜಯ ಕಾಲೇಜಿನಲ್ಲಿ ಮುಗಿಸಿದರು.

ಪದವಿ ಶಿಕ್ಷಣವನ್ನು ಮುಗಿಸಿ ೧೯೬೯ ರಲ್ಲಿ ಕೆನರಾ ಬ್ಯಾಂಕ್ (ಬೆಂಗಳೂರಿನಲ್ಲಿ) ಉದ್ಯೋಗಕ್ಕೆ ಸೇರಿಕೊಂಡರು. ಗುಮಾಸ್ತರಾಗಿ ಸೇವೆ ಪ್ರಾರಂಭಿಸಿ ಹಂತ ಹಂತವಾಗಿ ಭಡ್ತಿಯನ್ನು ಹೊಂದಿ ಕೆನರಾ ಬ್ಯಾಂಕ್‌ನಲ್ಲಿ ಮ್ಯಾನೇಜರ್ ಆಗಿ ೨೦೦೭ರಲ್ಲಿ ನಿವೃತ್ತಿಯಾದರು. ಹಾಸನದ ರಾಯಕೊಪ್ಪಲ್‌ನಿಂದ ಆರಂಭವಾಗಿ ಮೈಸೂರು, ಸವದತ್ತಿ, ಹುಬ್ಬಳ್ಳಿ, ಬೆಂಗಳೂರು, ಮುಂಬೈ, ದೆಹಲಿ, ಮುಂತಾದ ಕಡೆ ಕೆಲಸ ನಿರ್ವಹಿಸಿದ್ದಾರೆ.

೨.೨ ಬರಹ ಮತ್ತು ಪ್ರಶಸ್ತಿಗಳು

ಪ್ರಾಥಮಿಕ ಶಿಕ್ಷಣ ಹಂತದಲ್ಲಿಯೇ ಪೈಯವರು ಸಾಹಿತ್ಯ, ಕಲೆ, ಸಂಸ್ಕೃತಿಗಳ ಬಗ್ಗೆ ವಿಶೇಷ ಆಸಕ್ತಿ ಇದ್ದ ಇವರಿಗೆ ತನ್ನ ಹಳ್ಳಿಯಲ್ಲಿನ ರಮಣೀಯ ನಿಸರ್ಗವು ಸಾಹಿತ್ಯದ ಬೆಳವಣಿಗೆಗೆ ಮೂಲ ಪ್ರೇರಣೆಯಾಗಿದೆ. ಸಾಹಿತ್ಯಾಧ್ಯಯನಕ್ಕೆ ಹೆಚ್ಚಿನ ಪ್ರೇರಣೆಯು ಪದವಿ ಶಿಕ್ಷಣವನ್ನು ಪಡೆಯುವಾಗ ಕನ್ನಡ ಅಧ್ಯಾಪಕರಾದ ರಾಮದಾಸ್ ಮತ್ತು ಡಿ. ರಘುನಾಥ್ ರಾವ್‌ರವರಿಂದಾಗಿ ಕಥೆಗಳನ್ನು ಬರೆಯಲು ಆರಂಭಿಸಿದರು. ಮೂಲ್ಕಿಯಲ್ಲಿ ಬಿ. ಎಸ್ಸಿ. ಓದುತ್ತಿರುವಾಗ ೧೯೬೫ ರಲ್ಲಿ 'ತಪಸ್ವಿ' ಎಂಬ ಮೊಟ್ಟ ಮೊದಲ ಕಥೆ ಸುಧಾ ಪತ್ರಿಕೆಯಲ್ಲಿ ಪ್ರಕಟವಾಯಿತು. ಪ್ರಜಾವಾಣಿಯ ದೀಪಾವಳಿಯ ಕಥಾ ಸ್ಪರ್ಧೆಯಲ್ಲಿ ವಿದ್ಯಾರ್ಥಿ ವಿಭಾಗದಲ್ಲಿ ವಿಶೇಷ ಬಹುಮಾನವನ್ನು ಪಡೆದುಕೊಂಡರು. 'ತಿರುವು' ಕಥೆ ಉಡುಪಿಯ 'ಪ್ರಕಾಶ' ದಲ್ಲಿಯೂ, 'ತಪ್ಪು', 'ನೀವು ಅಪ್ಪಣ್ಣ ಭಟ್ಟರು, ಹೌದೋ ಅಲ್ಲವೋ?' ಮತ್ತು 'ಭೇದ' ಕಥೆಗಳು ಸುಧಾದಲ್ಲಿಯೂ, 'ಪಲಾಯನ' ಕತೆ ಪ್ರಜಾವಾಣಿಯಲ್ಲಿಯೂ ಪ್ರಕಟವಾದವು. 'ಗತಿ' ಕತೆ ಮಲ್ಲಿಗೆ ಯುಗಾದಿ ಕಥಾ ಸ್ಪರ್ಧೆ (೧೯೭೬) ಯಲ್ಲಿ ಪ್ರಥಮ ಬಹುಮಾನವನ್ನೂ, 'ತಿರಸ್ಕೃತ' ೧೯೭೯ ರಲ್ಲಿ ಮಲ್ಲಿಗೆ ಯುಗಾದಿ ಕಥಾ ಸ್ಪರ್ಧೆಯಲ್ಲಿ ತೃತೀಯ

ಬಹುಮಾನವನ್ನೂ ಪಡೆದವು. 'ನೀವು ಅಪ್ಪಣ್ಣ ಭಟ್ಟರು ಹೌದೋ ಅಲ್ಲವೋ?' ಕತೆ ಕರ್ನಾಟಕ ಸಾಹಿತ್ಯ ಅಕಾಡಮಿಯವರ '೧೯೮೩ ಕತೆಗಳು' ಸಂಕಲನದಲ್ಲೂ ಪ್ರಕಟವಾಯಿತು. 'ಅರ್ಜಿ' ಕತೆ ಮೈಸೂರು ಆಕಾಶವಾಣಿಯಿಂದ ಪ್ರಸಾರವಾಯಿತು. ಹೀಗೆ ಇವರ ಕಥೆಗಳು ಪ್ರಜಾಮತ, ಜನಪ್ರಗತಿ, ಕಸ್ತೂರಿ, ಪ್ರಕಾಶನ, ಮಲ್ಲಿಗೆ, ಮೊದಲಾದ ದೈನಂದಿನ, ವಾರ ಪತ್ರಿಕೆಗಳಲ್ಲಿ ಪ್ರಕಟವಾದವು.

೨೦ ವರ್ಷಗಳ ನಂತರ ೧೯೮೫ ರಲ್ಲಿ ಪ್ರಥಮ ಕಥಾ ಸಂಕಲನ 'ತಿರುವು' ಪ್ರಕಟವಾಯಿತು. ಇದರಲ್ಲಿ ಒಟ್ಟು ೮ ಕಥೆಗಳನ್ನು ನಾವು ಕಾಣಬಹುದು. ತಿರುವು – ೧೯೬೯, ತಪ್ಪು – ೧೯೭೦, ಪಲಾಯನ – ೧೯೭೦, ಗತಿ – ೧೯೭೭, ತಿರಸ್ಕೃತ – ೧೯೭೯, ನೀವು ಅಪ್ಪಣ್ಣ ಭಟ್ಟರು ಹೌದೋ ಅಲ್ಲವೋ? – ೧೯೮೩. ಭೇದ – ೧೯೮೫, ಅರ್ಜಿ – ೧೮೮೫ ರಲ್ಲಿ ರಚನೆಯಾದವು.

ಇವರ ಎರಡನೆಯ ಕಥಾ ಸಂಕಲನ 'ಈ ಬೆರಳ ಗುರುತು' ಪ್ರಕಟವಾಯಿತು. ಇದು ೧೯೯೦ ರಿಂದ ೨೦೦೧ ರವರೆಗೆ ಬರೆದಿರುವ ಒಟ್ಟು ೮ ಕಥೆಗಳನ್ನು ಒಳಗೊಂಡಿದೆ. ಇವು ಮುಂಬೈ ಜೀವನದಲ್ಲಿನ ಅನುಭವದ ಕುರಿತು ಬರೆದ ಕಥೆಗಳಾಗಿವೆ. ಇದರಲ್ಲಿ ಮಾನವೀಯ ಅಂಶಗಳು ಒಳಗೊಂಡಿವೆ.

ಈ ಬೆರಳ ಗುರುತು – ೧೯೯೫, ಅಂತರಂಗಕ್ಕೆ ಹಗೆ – ಜನವರಿ ೧೯೮೮, ನಾನು ಕೊಂದ ಹುಡುಗಿ – ಫೆಬ್ರವರಿ ೧೯೯೯, ಬೀರು ಶೆಟ್ಟರ ಕೋಳಿ ಕಾಳಗ – ಡಿಸೆಂಬರ್ ೧೯೮೮, ಕುರುಚಲು ಗಿಡದ ನೆರಳು – ಜೂನ್ ೧೯೯೧, ಶಬ್ದಗಳ ಬೆನ್ನಟ್ಟಿ ಓಡುವವರು – ಮಾರ್ಚ್ ೧೯೯೯, ಪ್ಯಾಟಿಮನಿ ಸಂಗಣ್ಣನ ಪಟ್ಟಾಭಿಷೇಕ – ಜನವರಿ ೧೯೯೯, ೨೦ ಡಾಲರ್ಸ್ – ಎಪ್ರಿಲ್ ೧೯೯೯, ಮೆಟ್ಟಿಲೇರುವ ಗಡಿಬಿಡಿಯಲ್ಲಿ ಕೊಡೆ ಮರೆತವನು – ಮಾರ್ಚ್ ೨೦೦೦ ರಲ್ಲಿ ರಚನೆಗೊಂಡವು.

ಮೂರನೆಯ ಕಥಾ ಸಂಕಲನ 'ಹಾರುವ ಹಕ್ಕಿಯ ಗೂಡಿನ ದಾರಿ' ೨೦೦೫ ರಲ್ಲಿ ಪ್ರಕಟವಾಯಿತು. ಇದು ೨೦೦೧ ರಿಂದ ೨೦೦೫ ರವರೆಗೆ ಬರೆದ ಕಥೆಗಳಾಗಿವೆ. ಇಲ್ಲಿ ಮಾನವೀಯ ಅಂಶಗಳನ್ನು ಪ್ರಶ್ನಿಸುವಂಥ ಕಥೆಗಳು ವಿಶ್ಲೇಷಣೆಗೊಂಡವು. 'ಇದು ಎಂಥಾ ಪ್ರೇಮವಯ್ಯ', 'ಆಕಾಶ ರಾಯ', 'ನಾಳೆ ಬೆಳಿಗ್ಗೆ ಸೂರ್ಯ ಮೂಡುವುದಿಲ್ಲವಂತೆ', 'ಮೋಡದ ಮೇಲೆ ಚಿನ್ನದ ನೀರು', 'ಒಂದೇ ರೇಖೆಯ ಮೇಲೆ ಸೂರ್ಯ ಭೂಮಿ ಚಂದ್ರ', 'ಪ್ರತಿಯೊಬ್ಬನೆದೆಯಲ್ಲೂ ಇರುತ್ತದೊಂದು ಮಗು', 'ತೇರನೆಳೆಯುತಾರ ತಂಗಿ', 'ಕುಚೇಲ', 'ಚಾಪೆಯ ಒಳಗೆ ತೂರಿಕೊಂಡ ಮನುಷ್ಯ', 'ಕಿರುಗುಟ್ಟುವ ಮಂಚದ ಮೇಲೆ ಮಲಗಿದ ಮುದುಕ', 'ಹೀಗೊಬ್ಬ ಗೆಳೆಯ' ೧೧ ಕಥೆಗಳನ್ನು ಈ ಕಥಾ ಸಂಕಲನ ಒಳಗೊಂಡಿದೆ.

ಇವರ ಮೂರು ಕಥಾ ಸಂಕಲನಗಳನ್ನು ಒಳಗೊಂಡಂತೆ ೨೦೧೦ರಲ್ಲಿ 'ಮೂರು ಮತ್ತಿಷ್ಟು' ಎಂಬ ಕಥಾ ಸಂಕಲನ ಹೊರಬಂದಿತ್ತು. ಮೂರು ಕಥಾ ಸಂಕಲನದ ಕಥೆಗಳನ್ನು ಒಳಗೊಂಡಂತೆ 'ಮತ್ತಿಷ್ಟು' ಎಂಬ ಹೆಸರು ಸೂಚಿಸುವಂತೆ ಮತ್ತೂ ಕೆಲವೊಂದು ಕಥೆಗಳನ್ನು ಇಲ್ಲಿ ಸೇರಿಸಲಾಯಿತು. ಅದರಲ್ಲಿ ಮುಖ್ಯವಾದುದು 'ಒಂದು ಗಂಡಿನ ಕಥೆ' – ಮಾರ್ಚ್ ೧೯೮೪, 'ಜೂಟಾಟ-೬' ಎಪ್ರಿಲ್ ೨೦೦೬, 'ನೆಲ ಬೇಡಿದ ಹಂಸೆ' – ಆಗಸ್ಟ್ ೨೦೦೬, 'ಸಂವಾದ' – ಸೆಪ್ಟೆಂಬರ್ ೨೦೦೭, 'ಪರಶು ಶಿಲೆ' – ಎಪ್ರಿಲ್ ೨೦೦೮ ರಲ್ಲಿ ಬರೆದ ಕಥೆಗಳು ಪ್ರಕಟಗೊಂಡವು.

ಅನುವಾದ ಸಾಹಿತ್ಯ

ಗೋಪಾಲ ಕೃಷ್ಣ ಪೈಯವರು ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದ ಮಾಡಿದ 'ಆಧುನಿಕ ಸಣ್ಣ ಚೀನೀ ಕಥೆಗಳು' ಎಂಬ ಕಥಾ ಸಂಕಲನವು ೨೦೦೭ ರಲ್ಲಿ ಪ್ರಕಟವಾಯಿತು. ೧೬ ಲೇಖಕರ ೧೬ ಕಥೆಗಳನ್ನು ಇಲ್ಲಿ ಅನುವಾದಿಸಿದ್ದಾರೆ.

ಮಾರ್ಕ್ ಟಲಿ ಯವರ 'India – An Unending Journey' ಎಂಬ ಕೃತಿಯನ್ನು 'ಭಾರತ ಒಂದು ಅಂತ್ಯವಿಲ್ಲದ ಯಾತ್ರೆ' ಎಂದು ಕನ್ನಡಕ್ಕೆ ಅನುವಾದಿಸಿದ್ದಾರೆ. ಇದೊಂದು ಅಪ್ರಕಟಿತ ಕೃತಿಯಾಗಿದೆ. ಹಾಗೆಯೇ ಆರ್. ಕೆ. ನಾರಾಯಣರ 'ವೆಯ್ಟಿಂಗ್ ಫಾರ್ ಮಹಾತ್ಮ' ಎಂಬ ಕೃತಿಯನ್ನು 'ಮಹಾತ್ಮನನ್ನು ಕಾಯುತ್ತಾ' ಎಂದು ಕನ್ನಡಕ್ಕೆ ಅನುವಾದಿಸಿದ್ದಾರೆ. ಇದು ಕೂಡ ಅಪ್ರಕಟಿತ ಕೃತಿಯಾಗಿದೆ.

ಕಾದಂಬರಿ

ಇವರು ಬರೆದ ಮೊಟ್ಟ ಮೊದಲ ಕಾದಂಬರಿ 'ಸ್ವಪ್ನ ಸಾರಸ್ವತ'. ಇದು ೨೦೦೯ ರಲ್ಲಿ ಪ್ರಕಟವಾಯಿತು. ಈ ಕಾದಂಬರಿಗೆ ೨೦೧೦ರಲ್ಲಿ ಸೂರ್ಯನಾರಾಯಣ ಚಡಗ ಹಾಗೂ ೨೦೧೧ ರಲ್ಲಿ ಡಾ। ಶಾಂತರಾಮ್ ಪ್ರಶಸ್ತಿಯನ್ನು ಕರಾವಳಿಯ ಜನರು ನೀಡಿ ಗೌರವಿಸಿದ್ದಾರೆ. ಇದಕ್ಕಿಂತಲೂ ಮೊದಲು ಈ ಕಾದಂಬರಿಗೆ ೨೦೦೯ ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ ಬಂದಿತು, ೨೦೧೦ರ ಸಾಲಿನ ಪ್ರತಿಷ್ಠಿತ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿಯೂ ದೊರಕಿದೆ.

ಚಲನಚಿತ್ರ ಕ್ಷೇತ್ರ

ಗೋಪಾಲಕೃಷ್ಣ ಪೈಯವರು ಕಥೆಗಾರರಾಗಿ, ಕಾದಂಬರಿಕಾರರಾಗಿ, ಅನುವಾದಕರಾಗಿಯೂ ಅಲ್ಲದೆ ಚಲನಚಿತ್ರ ಕ್ಷೇತ್ರದಲ್ಲಿಯೂ ಅಪಾರವಾದ ಸಾಧನೆಯನ್ನು ಮಾಡಿದ್ದಾರೆ.

ಗಿರೀಶ್ ಕಾಸರವಳ್ಳಿಯವರ 'ಕನಸೆಂಬೋ ಕುದುರೆಯನ್ನೇರಿ' ಚಲನಚಿತ್ರಕ್ಕೆ ಬರೆದ ಚಿತ್ರಕಥೆಗೆ ಪೈಯವರು ಗಿರೀಶ್ ಅವರೊಂದಿಗೆ ೨೦೧೦ರ ರಾಷ್ಟ್ರ ಪ್ರಶಸ್ತಿ ಹಂಚಿಕೊಂಡಿದ್ದಾರೆ.

ರಾಷ್ಟ್ರ ಪ್ರಶಸ್ತಿ ಪಡೆದ ಪಿ. ಶೇಷಾದ್ರಿಯವರ 'ಬೆಟ್ಟದ ಜೀವ' ಚಿತ್ರಕ್ಕೂ ಪೈ ಸಂಭಾಷಣೆ ಬರೆದಿದ್ದಾರೆ ಹಾಗೂ 'ಉಜ್ವಾಡು' ಎಂಬ ಕೊಂಕಣಿ ಚಿತ್ರಕ್ಕೆ ೨೦೧೨ರಲ್ಲಿ ಕಥೆ, ಚಿತ್ರಕಥೆ, ಸಂಭಾಷಣೆಯನ್ನು ಬರೆದಿದ್ದಾರೆ. ಹೀಗೆ ಚಲನಚಿತ್ರ ಕ್ಷೇತ್ರದಲ್ಲಿಯೂ ತಮ್ಮನ್ನು ಪೈಯವರು ತೊಡಗಿಸಿಕೊಂಡಿದ್ದಾರೆ.

ಪೈಯವರ ಕಥೆಗಳಿರಬಹುದು, ಕಾದಂಬರಿ ಇರಬಹುದು, ಅನುವಾದ ಸಾಹಿತ್ಯವಿರಬಹುದು, ಸಿನಿಮಾ ಕ್ಷೇತ್ರವಿರಬಹುದು, ಯಾವುದೇ ಇರಬಹುದು, ಇವರು ಸಾಮಾಜಿಕ, ಸಾಂಸ್ಕೃತಿಕ, ಐತಿಹಾಸಿಕ ನೆಲೆಗಳ ಬಗ್ಗೆ ವಿಶೇಷ ಆಸಕ್ತಿಯಿಂದ ಶ್ರಮವಹಿಸಿ ಸಂಶೋಧನೆ ನಡೆಯಿಸಿ ಅನುಭವಗಳ ಹಿನ್ನೆಲೆಯಲ್ಲಿ ವಿಷಯವನ್ನು ಬರವಣಿಗೆಯ ರೂಪದಲ್ಲಿ ಇಳಿಸುತ್ತಾರೆ.

೨.೩ ಸ್ವಪ್ನ ಸಾರಸ್ವತ ಕಾದಂಬರಿ ರೂಪುಗೊಂಡ ಬಗೆ

ಪೈಯವರು ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿರುವಾಗ ಹಾಸನ ಹಳ್ಳಿಯೊಂದರಲ್ಲಿದ್ದಾಗ – ಅದು ಗೋರೂರು ಅಣೆಕಟ್ಟಿನ ಮುಳುಗಡೆ ಪ್ರದೇಶದ ಸಮೀಪದ್ದು – ಮುಳುಗಡೆಯಿಂದ ನಿರ್ವಸಿತರಾದ ಜನರು ಇವರಿಗೆ ಗ್ರಾಹಕರಾಗಿದ್ದರು. ತಲೆಮಾರುಗಳಿಂದ ಇದ್ದ ಸ್ಥಳವನ್ನು ಬಿಡಬೇಕಾಗಿ ಬಂದ ನೋವು ಮತ್ತು ಸರಕಾರದಿಂದ ಪರಿಹಾರ ಪಡೆಯಲು ಒದ್ದಾಡುತ್ತಿದ್ದ ಅವರ ಅಸಹಾಯಕತೆ ಗೋಳುಗಳನ್ನು ದಿನಾ ಕೇಳುತ್ತಿದ್ದರು. ಮೂಲತಃ ಕತೆಗಾರರಾಗಿದ್ದ ಇವರು ಅವರ ಬಗೆ ಒಂದು ಕಥೆ ಬರೆಯಬೇಕೆಂದು ಯೋಚಿಸುತ್ತಿದ್ದರು. ಆದರೆ ಕಥೆ ಬರೆಯ ಹೊರಟರೆ ಇದು ಒಂದು ಕಾದಂಬರಿಯ ವಸ್ತು ಅನ್ನಿಸಿತು. ಆಗ ನಾ ಡಿ'ಸೋಜಾರ 'ಮುಳುಗಡೆ' ಎಂಬ ಕಾದಂಬರಿ ಬಂದುದರಿಂದ ಪೈಯವರು ಆ ಪ್ರಯತ್ನವನ್ನು ಕೈಬಿಟ್ಟರು. ಕೆಲವು ಸಮಯದ ಬಳಿಕ ಆ ಹಳ್ಳಿಯನ್ನು ಬಿಟ್ಟರು.

ಆದರೂ ನಿರ್ವಸಿತಗೊಂಡ ಜನರ ಹಾಡುಪಾಡು ಮುಂದೆ ಹಲವಾರು ವರ್ಷ ಇವರ ತಲೆಯನ್ನು ತಿನ್ನುತ್ತಲೇ ಇತ್ತು. ಬ್ಯಾಂಕಿನಲ್ಲಿ ಕೆಲಸ ಮಾಡುವಾಗ ಸಾಹಿತ್ಯದ ಕಡೆಗೆ ಗಮನಹರಿಸುವುದು ಕಷ್ಟವೇ ಆಗುತ್ತಿತ್ತು. ಹಾಗಾಗಿ ಕಾದಂಬರಿ ಬರೆಯುವ ಬದಲು ಮನಸ್ಸಿನ ತೃಪ್ತಿಗಾಗಿ ಎಲ್ಲೋ ಒಂದೆರಡು ಕತೆಗಳನ್ನು ಬರೆದು ಪ್ರಕಟಿಸುತ್ತಿದ್ದರು. ಸಿನಿಮಾ, ನಾಟಕ ಎಂದು ನೋಡುವುದರಲ್ಲೇ ತೃಪ್ತಿಪಡುತ್ತಿದ್ದರು. ಆದರೆ ನಿರ್ವಸಿತ ಜನರ ಹಾಡುಪಾಡು, ದುಮ್ಮಾನ, ಗೋಳು ಇವರ ತಲೆಯನ್ನು ಕೊರೆಯುತ್ತಲೇ ಇತ್ತು.

ಹಾಗೆ ನೋಡಿದರೆ ಪೈಯವರಿಗೆ ಸಾರಸ್ವತ ಜನರ ಪರಿಸ್ಥಿತಿಯು ನಿರ್ವಸಿತಗೊಂಡದ್ದೇ ಅಲ್ಲವೇ ಎಂಬ ಭಾವನೆ ಬರತೊಡಗಿತು. ಆದರೆ ಸಾರಸ್ವತರ ಕತೆ ೪೫೦ ವರ್ಷಗಳ ಹಿಂದಿನದ್ದು. ಹಾಗಾಗಿ ಸಂಬಂಧಿಸಿದ ಇತಿಹಾಸದ ಪುಸ್ತಕಗಳನ್ನು ಓದುವುದು ಅನಿವಾರ್ಯವಾಯಿತು. ಅವರ ಮೂಲ ಗೋವೆಯಲ್ಲಿ, ಹಾಗಾಗಿ ಗೋವಾದ ಬಗ್ಗೆ ತಿಳಿದುಕೊಳ್ಳುವುದು ಅಗತ್ಯವೆಂದು ಮುಂಬೈಯ ಪುಸ್ತಕದಂಗಡಿಗೆ ಹೋಗಿ ಒಂದು ಪುಸ್ತಕವನ್ನು

ಕೊಂಡು ತಂದರು. ಆ ಪುಸ್ತಕ ದುಬಾರಿಯಾಗಿದ್ದರಿಂದ ಮನೆಗೆ ತಂದಾಗ ಹೆಂಡತಿಯೊಡನೆ ಜಗಳವೂ ಆಯಿತು[೭].

ಅಲ್ಲಿಂದ ಆರಂಭವಾಯಿತು ಪೈಯವರ ಕಾದಂಬರಿಯ ವಿಷಯಕ್ಕೆ ಅಧ್ಯಯನ. ಸಿಕ್ಕಿದ ಪುಸ್ತಕವನ್ನೆಲ್ಲಾ ಓದಿದರು, ಗೋವಾದಿಂದ ಕೊಚ್ಚಿಯವರೆಗೆ ೬೩ ಬಾರಿ ಅಲೆದಾಡಿದರು. ಗ್ರಂಥಾಲಯಗಳಿಗೆ ಭೇಟಿ ಕೊಟ್ಟರು. ಇವರ ಕೆಲಸದ ರಜೆಗಳನ್ನು ಸಂಬಳದ ಹಣವನ್ನು ಇದಕ್ಕಾಗಿಯೇ ವ್ಯಯಿಸಿದರು. ಓದುತ್ತಾ ಟಿಪ್ಪಣಿ ಮಾಡಿಕೊಂಡರು. ಹಳೆಯ ಮಂದಿಯನ್ನು ಮಾತನಾಡಿಸಿದರು. ದೇವಸ್ಥಾನಗಳ ಪೂಜೆಯ ಭಟ್ಟರು, ಚರ್ಚುಗಳ ಪಾದ್ರಿಗಳ ಎಲ್ಲರ ಜತೆ ಚರ್ಚಿಸಿದರು. ಕೆಲವು ಕಡೆ ಒಳ್ಳೆಯ ಪ್ರತಿಕ್ರಿಯೆ ದೊರಕಿತು. ಕೆಲವು ಕಡೆ ಮಾತನಾಡಲು ಒಪ್ಪಲಿಲ್ಲ. ಬ್ಯಾಂಕಿನ ವ್ಯಕ್ತಿಗೆ ಈ ಹುಚ್ಚು ಯಾಕೆ ಎಂದವರೂ ಇದ್ದರು. ಅಪರೂಪದ ಪುಸ್ತಕಗಳನ್ನು ಓದುವುದು ಬಿಡಿ, ಮುಟ್ಟಲೂ ಬಿಡಲಿಲ್ಲ. ಜೆರಾಕ್ಸ್ ತೆಗೆದು ಕೊಡುತ್ತೇನೆಂದರೂ ಒಪ್ಪಲಿಲ್ಲ.

ಇತಿಹಾಸವನ್ನು ಅಳವಡಿಸಿ ಕಥನ ರೂಪದಲ್ಲಿ ಬರೆಯುವಾಗ ಅದನ್ನು ತಿರುಚಬಾರದೆಂದು ನಿರ್ಧಾರ ತೆಗೆದುಕೊಂಡದ್ದು ಪೈಯವರ ಮೊದಲ ಹೆಜ್ಜೆ. ಆದರೆ ಇವರಿಗೆ ಬೇಕಾದಂತೆ ಬಗ್ಗಿಸಬಹುದೆನ್ನುವ ಸ್ವಾತಂತ್ರ್ಯ ಇವರಿಗೆ ಇತ್ತು. ಮಾತ್ರವಲ್ಲ ಜಾನಪದ ಕತೆಗಳು, ಹೇಳಿಕೆಗಳು, ಐತಿಹ್ಯಗಳು ಇವನ್ನೆಲ್ಲ ಪೈಯವರಿಗೆ ಬಳಸಬಹುದೆಂಬ ಭಾವನೆ ಹೊಸ ಲೋಕವೊಂದನ್ನು ತೆರೆಯಿತು. ಆಗಲೇ ನಾಗ್ಡೊ ಬೇತಾಳನೆಂಬ ರೂಪಕ ಒಂದು ಜಾನಪದ ಗೀತೆಯಲ್ಲಿ ದೊರಕಿತು. ಮಾರ್ಕ್ವೇಜ್‌ನ 'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್' ಓದಿದರು. ಅದರಲ್ಲಿ ಮಾಲ್‌ಕ್ವೆಡಿಯಾಸ್ ಎಂಬೊಬ್ಬ ವ್ಯಕ್ತಿಯ ವ್ಯಕ್ತಿತ್ವ ಪೈಯವರ ಮೇಲೆ ಪ್ರಭಾವ ಬೀರಿತು. ಇವರು ಕಲಿತ ಮೂಲ್ಕಿಯ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯ ಕೆ. ಜೆ. ವಸಂತ ಮಾಧವ ಎಂಬ ಇತಿಹಾಸಕಾರರಿದ್ದರು. ಅವರ ಒಂದು ಪುಸ್ತಕದಲ್ಲಿ ವಿಷ್ಣು ಮೂರ್ತಿ ದೈವದ ಸುಂದರವಾದ ಒಂದು ಕತೆಯಿತ್ತು[೨]. ಕುಟ್ಟಿಚಾತನ ಬಗ್ಗೆ ಪೈಯವರು ಸಣ್ಣವರಿರುವಾಗ ನೆರೆಹೊರೆಯ ಹುಡುಗನಂತೆ ಎಲ್ಲರ ಮಾತಿನಲ್ಲಿ ಬರುತ್ತಿದ್ದ. ಮಾಟ ಮಂತ್ರ, ಅಂಜನ, ಆಲಿಭೂತ ಇವೆಲ್ಲಾ ಚಿಕ್ಕ ವಯಸ್ಸಿನಲ್ಲಿ ಪ್ರಭಾವ ಬೀರಿದ ವಿಷಯಗಳಾಗಿದ್ದವು. ಕಾದಂಬರಿಯಲ್ಲಿ ತುಳುನಾಡಿನ ಬಗ್ಗೆ ಬರುವ ನಾಲ್ಕು ಸಾಲಿನ ಹವ್ಯಕ ಭಾಷೆಯ ಹಾಡು ಡಾ। ಎಂ. ಬಿ. ಮರಕಿಣಿಯವರ ಪುಸ್ತಕದ್ದು, ಹೀಗೆ ನೂರಾರು ಸಂಗತಿಗಳನ್ನು ಪೈಯವರು ಕಾದಂಬರಿ ಬರೆಯಲು ಟಿಪ್ಪಣಿ ಮಾಡಿಕೊಂಡರು[೩].

ಓದುವಾಗ ಇವರಿಗೆ ಇಂಥದೇ ಪುಸ್ತಕ ಬೇಕು ಎಂದಿರಲಿಲ್ಲ. ಇವರ 'ಅರ್ಜಿ' ಎಂಬ ಸಣ್ಣ ಕತೆಯಲ್ಲಿ ಅದರಲ್ಲಿ ಒಂದು ಗ್ರಾಮರ್ ಪುಸ್ತಕದ ವಿಚಾರ ಬರುತ್ತದೆ. ಮೊಜಿನ್ ಅವರು ಬರೆದ ಆ ಪುಸ್ತಕ ಉಡುಪಿಯ ಎಂ. ಜಿ. ಎಂ. ಕಾಲೇಜಿನ ಎಂ. ಗೋವಿಂದ ಪೈ ಗ್ರಂಥಾಲಯದಲ್ಲಿತ್ತು. ೧೭೯ ನೇ ಪುಟದಲ್ಲಿರುವ ಅರ್ಜಿಯ ನಮೂನೆ ಓದಿದಾಗ ಪೈಯವರಿಗೆ ತುಂಬಾ ಆನಂದವಾಯಿತು. ಅದನ್ನೊಂದು ಕಥೆಯಾಗಿಸುವ ಸಾಧ್ಯತೆ ಇವರಿಗೆ ಹೊಳೆಯಿತು. ಒಂದು ಘಟನೆಯ ಸುದ್ದಿ ಕೇಳಿದಾಗ ಸ್ಫೂರ್ತರಾಗಿ ನಾವು ಕತೆ ಮಾಡುವುದಿಲ್ಲವೇ? ಹಾಗೆ

ಕಾದಂಬರಿಯಲ್ಲಿ ಬಂಬ ಮಣಿಯಾಣಿ ಧರ್ಮಸ್ಥಳ ಹೆಗ್ಗಡೆಯವರ ಎದುರು ಬಳ್ಳಂಬೆಟ್ಟಿನ ಆಸ್ತಿಯನ್ನು ರಾಮಚಂದ್ರ ಪೈಗೆ ಕೊಡುವಾಗ ಬಳಸಿದ ಭಾಷೆ ಅದೇ ವ್ಯಾಕರಣ ಪುಸ್ತಕದಿಂದ ಪಡೆದದ್ದು[೪]. ಇತಿಹಾಸವನ್ನು ಕಲಿಸುವಾಗ ಅವರು ಈ ಮಾತು ಆಡಿದರು ಆ ಮಾತು ಆಡಿದರು ಎನ್ನುವುದು ನಮ್ಮ ಊಹೆ ಮಾತ್ರ. ಅವರು ಹಾಗೆ ಮಾತನಾಡುವುದೇ ಇಲ್ಲ ಹಾಗಿದ್ದರೆ ಶೇಕ್ಸ್‌ಪಿಯರ್ ಇತಿಹಾಸವನ್ನು ಇಟ್ಟುಕೊಂಡು ನಾಟಕ ಬರೆಯುವುದು ಸಾಧ್ಯವಾಗುತ್ತಿತ್ತೆ? ಎಂದು ಪೈಯವರ ಭಾವನೆ ಇತಿಹಾಸದ ವ್ಯಕ್ತಿಗಳನ್ನು ಬಳಸುವಾಗ ಅವರ ಬಾಯಿಂದ ಬರುವ ಮಾತುಗಳನ್ನು ಆದಷ್ಟೂ ಕಡಿಮೆ ಮಾಡಿಕೊಂಡರು.

ಸ್ವಪ್ನ ಸಾರಸ್ವತ ಕಾದಂಬರಿಯ ಹಸ್ತಪ್ರತಿ ಓದಿ ಕೆ. ವಿ. ಅಕ್ಷರರವರು ಕಾದಂಬರಿಯ ಮೂರನೇ ಭಾಗ ಉಳಿದ ಭಾಗಗಳಷ್ಟು ದಟ್ಟವಾಗಿಲ್ಲವಲ್ಲ, ಯಾಕೆ? ಎಂದರು. ಆಗ ಪೈಯವರು ವ್ಯಾಸರು ಮಹಾಭಾರತ ಬರೆಯುವಾಗ ಪಾಂಡವರನ್ನು ಕಾಡಿಗೆ ಅಟ್ಟಿದ ಮೇಲೆ ಹನ್ನೆರಡು ವರ್ಷಗಳನ್ನು ವಿವರಿಸಲು ಏನು ಕಲ್ಪಿಸಲು ಸಾಧ್ಯವಿತ್ತು? ಅದಕ್ಕಾಗಿ ಸೈಂಧವರನ್ನು ಒಮ್ಮೆ ತಂದರು, ಅರ್ಜುನನ ಪಾಶುಪತದ ಕತೆ, ದ್ರೌಪದಿಯ ಅಕ್ಷಯಪಾತ್ರೆ ಹೀಗೆ ಕೆಲವು ಘಟನೆಗಳನ್ನು ಬಿಟ್ಟರೆ ಮುನಿಋಷಿಗಳು ಹೇಳುವ ಕತೆ ಹೇಳಿ ಮುಗಿಸಿದರಲ್ಲ, ಹಾಗೆ ನನಗೆ ಒಂದೆರಡು ಘಟನೆಗಳಷ್ಟೇ ಬರೆಯಬೇಕಾಗಿ ಬಂತು. ಅದಕ್ಕಾಗಿ ವಿಟ್ಠು ಪೈಯ ಮಗ ಮರ್ತುಪ್ಪಯ್ಯ ತಮ್ಮಂದಿರನ್ನು ಕೊಲ್ಲುವುದು, ರಾಮಚಂದ್ರ ಪೈ ದೇವಸ್ಥಾನವನ್ನು ಕಟ್ಟಿಸುವುದು, ಮರಾಠರಿಂದ ಓಡಿ ಬಂದ ಕ್ರಿಶ್ಚಿಯನ್ನರನ್ನು ಭೇಟಿ ಮಾಡುವುದು, ವಿಷ್ಣುಮೂರ್ತಿ ದೈವದ ಕಥೆ ಮೊದಲಾದವುಗಳನ್ನು ಸೇರಿಸಿದ ಬಗೆಯನ್ನು ಅಕ್ಷರವರಿಗೆ ತಿಳಿಸಿದರು[೫].

ಓದು, ಬರವಣಿಗೆ, ಬ್ಯಾಂಕಿನ ಕೆಲಸ ಎಂದು ಪೈಯವರು ಕೌಟುಂಬಿಕ ವಿಚಾರಗಳ ಬಗ್ಗೆ ಬಹಳ ಕೇರ್‌ಲೆಸ್ ಆಗಿದ್ದರು. ಶಾಲೆಯಲ್ಲಿ ಓದುವ ಮಕ್ಕಳು, ಹದಗೆಟ್ಟ ಆರ್ಥಿಕ ಪರಿಸ್ಥಿತಿ, ಸಿಕ್ಕಿದ ಹಣವನ್ನೆಲ್ಲಾ ಕಾದಂಬರಿಯ ವಿಷಯದ ಅಧ್ಯಯನಕ್ಕೆ ವ್ಯಯಿಸುತ್ತಿದ್ದರು. ಅನಾರೋಗ್ಯ ಎಂದು ಶ್ಯಾಮಲರವರು ಆಗಾಗ ಆರೋಪ ಮಾಡಿ ತಗಾದೆ ತೆಗೆಯುತ್ತಿದ್ದರು. ಅವರಿಗೂ ಸಾಕಾಗಿ ಹೋಗುತ್ತಿತ್ತು. "ಇದೆಲ್ಲಾ ಯಾಕೆ ಇಷ್ಟೊಂದು ಬರೀತೀಯಾ? ಹೀಗೆ ತಲೆ ಕೆಡಿಸಿಕೊಳ್ಳುವ ಬದಲು ಸುಮ್ಮನೆ ಬ್ಯಾಂಕ್‌ನ ಕೆಲಸ ಮಾಡಿ ತೃಪ್ತಿ ಜೀವನ ನಡೆಸಬಾರದೇ?" ಎನ್ನುತ್ತಿದ್ದರು. ಹಾಗೆ ಅವರು ಹೇಳುವುದಕ್ಕೆ ಒಂದು ಕಾರಣವೂ ಇತ್ತು. ಸಾರಸ್ವತ ಜನಾಂಗದ ಬಗ್ಗೆ ಕರಾವಳಿಯ ಜನರಿಗಿರುವಷ್ಟು ಪರಿಚಯ ಘಟ್ಟದ ಮೇಲಿನ ಕನ್ನಡಿಗರಿಗಿಲ್ಲ, ಅವರು ಈ ಕಾದಂಬರಿಯನ್ನು ಹೇಗೆ ಸ್ವೀಕರಿಸಿಯಾರು ಎಂಬ ಅಳುಕು. ಆದರೂ ಹೆಂಡತಿಯನ್ನು ಸಮಾಧಾನಪಡಿಸಲು ಪೈಯವರು 'ಈ ಕಾದಂಬರಿ ಬಿಡುಗಡೆಯಾದಾಗ ಕನ್ನಡದ ಜನರು ನನಗೆ ಶಾಲು ಹೊದೆಸಿ ಸನ್ಮಾನ ಮಾಡುತ್ತಾರೆ, ನೋಡ್ತಾ ಇರು' ಎಂದು ಧನಾತ್ಮಕವಾಗಿಯೇ ಹೇಳುತ್ತಿದ್ದರು.[೬]

ಬರೆಯುತ್ತಾ ಹೋದ ಹಾಗೆ ಕಾದಂಬರಿ ಬೆಳೆದು ಆರುನೂರು ಪುಟ ದಾಟಿತು. ಅದನ್ನು ಮತ್ತೆ ಮತ್ತೆ ತಿದ್ದಿ ಆರು ಸಲ ಕೈಯಿಂದ ಬರೆದರು. ಪೈಯವರಿಗೆ ಕಂಪ್ಯೂಟರ್ ಜ್ಞಾನ

ಇರಲಿಲ್ಲ. ಹಾಗಾಗಿ ಕಟ್ ಅಂಡ್ ಪೇಸ್ಟ್ ಮಾಡುವುದು ಸುಲಭವಾಗಿರಲಿಲ್ಲ. ಕೊನೆಗೆ ಕಾದಂಬರಿ ಒಂದು ಹಂತಕ್ಕೆ ಬರುವಾಗ ಇವರ ಹೆಂಡತಿಯ ಆರೋಗ್ಯ ಒಮ್ಮೆಲೇ ಹದಗೆಟ್ಟಿತು. ಬ್ಯಾಂಕಿನ ಕೆಲಸದಲ್ಲಿಯೂ ಒಂದು ವಿಪತ್ತಿಗೆ ಸಿಕ್ಕಿ ಹಾಕಿಕೊಂಡರು. ಕಾದಂಬರಿಯ ಹಸ್ತಪ್ರತಿಯನ್ನು ಒಳಗೆ ಮುಚ್ಚಿಟ್ಟು ಆಸ್ಪತ್ರೆಗೆ ಅಲೆದಾಡಿದರು. ಮನೆಯಲ್ಲಿ ಮಕ್ಕಳಿಗಾಗಿ, ಹೆಂಡತಿಗಾಗಿ ಅಡುಗೆ, ವೃತ್ತಿಯ ಆತಂಕ, ಹದಗೆಟ್ಟ ಆರ್ಥಿಕ ಪರಿಸ್ಥಿತಿ, ಕನ್ನಡ ಸಾಹಿತ್ಯದಲ್ಲಿ ನಡೆಯುತ್ತಿದ್ದ ಏನೇನೋ ರಾಜಕೀಯಗಳು, ಏನೂ ಆಗದ ಏನೂ ಮಾಡಲಾಗದ ಪರಿಸ್ಥಿತಿ. ಇವೆಲ್ಲದರಿಂದ ತೀರಾ ಸೋತು ಹೋದರು. ಆಗ ಪೈಯವರ ಮುಂಬೈ ಗೆಳೆಯ ಮುಕುಂದ ಜೋಶಿ, ಜಯಂತ ಕಾಯ್ಕಿಣಿ, ಯಶವಂತ ಚಿತ್ತಾಲರು, ಎಚ್. ಎಸ್. ವಿ. ಎಲ್ಲರೂ ಪೈಯವರು ಮತ್ತೆ ಸಾಹಿತ್ಯದ ಕಡೆಗೆ ಬರುವಂತೆ ಮಾಡಿದರು. ಪೈಯವರ ಆತ್ಮೀಯ ಗೆಳೆಯರಾದ ದಿವಾಕರ್‌ರವರು ಚೀನೀ ಕತೆಗಳನ್ನು ಅನುವಾದ ಮಾಡಲು ಪ್ರೇರೇಪಿಸಿದರು. ಅವರೇ ಭಾಗ್ಯಲಕ್ಷ್ಮೀ ಪ್ರಕಾಶನದ ನಂಜುಂಡಪ್ಪನವರನ್ನು ಪರಿಚಯಿಸಿ 'ಆಧುನಿಕ ಚೀನೀ ಸಣ್ಣ ಕತೆಗಳು' ಬೆಳಕಿಗೆ ಬರುವಂತೆ ಸಹಾಯ ಮಾಡಿದರು. ಅದಕ್ಕೆ ಒಳ್ಳೆಯ ಪ್ರತಿಕ್ರಿಯೆಯೂ ಬಂತು. ಪೈ ಮತ್ತು ನಂಜುಂಡಪ್ಪನವರ ವಿಶ್ವಾಸ, ಗೆಳೆತನ ಗಾಢವಾಯಿತು.

ಒಂದು ದಿನ ಹಾಗು ಹೀಗೂ ಧೈರ್ಯ ಮಾಡಿ ನಂಜುಂಡಪ್ಪನವರನ್ನು 'ಒಂದು ಕಾದಂಬರಿ ಇದೆ, ಸ್ವಲ್ಪ ದೊಡ್ಡದೇ, ಖರ್ಚು ಹೆಚ್ಚಾದೀತು. ಮಾರಾಟವಾಗುವ ಬಗ್ಗೆ ನನಗೆ ಧೈರ್ಯವಿಲ್ಲ, ಪ್ರಕಟಿಸುತ್ತೀರಾ?' ಎಂದರು. ಅವರು 'ಅದಕ್ಕೇನಂತೆ ಕೊಡಿ' ಎಂದರು. ಪೈಯವರು ಕಾದಂಬರಿಯ ಹಸ್ತಪ್ರತಿಯನ್ನು ಕೊಡುವ ಧೈರ್ಯ ಮಾಡಲಿಲ್ಲ. ಆದರೆ ವಾರದ ನಂತರ ನಂಜುಂಡಪ್ಪನವರೇ 'ಎಲ್ಲಿ ಹಸ್ತಪ್ರತಿ?' ಎಂದರು. 'ಕೊಡ್ತೇನೆ' ಎಂದು ಪೈಯವರು ನುಣುಚಿಕೊಂಡರು. ಅದಾದ ಮೂರನೇ ದಿನಕ್ಕೆ ನೇರ ಮನೆಗೆ ಬಂದು 'ಕೊಡಿ' ಎಂದು ಕೂತರು, ಕೊಟ್ಟರು. ಮೂರು ವಾರಗಳಲ್ಲಿ ಡಿಟಿಪಿ ಮಾಡಿದ ಕರಡು ಪ್ರತಿ ಪೈಯವರ ಕೈ ಮೇಲಿಟ್ಟರು. ಪ್ರೂಫ್ ತಿದ್ದಿದ ಪ್ರತಿಗಳನ್ನು ಗೆಳೆಯರಿಗೆ ಕೊಟ್ಟರು[2]. ದಿವಾಕರ್ ವಿವೇಕ ಶಾನಭಾಗ, ಅಶೋಕ್ ಹೆಗಡೆ, ಶ್ರೀನಿವಾಸ ವೈದ್ಯ, ಮಹಾಲಿಂಗ, ಸತ್ಯನಾರಾಯಣ ಮತ್ತು ಎಸ್. ಆರ್. ವಿಜಯ ಶಂಕರ ಅವರಿಗೆ ಕೊಟ್ಟರು. ಅವರೆಲ್ಲರಿಂದ ಬಂದ ಪ್ರತಿಕ್ರಿಯೆ ಇವರನ್ನು ಮೂಕನನ್ನಾಗಿಸಿದ್ದು ನಿಜ. ಎಸ್. ಆರ್. ವಿಜಯ ಶಂಕರ ಅವರು ಮುನ್ನುಡಿ ಬರೆಯಲು ಒಪ್ಪಿಕೊಂಡರು. ನಿಸಾರ್ ಅಹ್ಮದ್‌ರವರ ಅಧ್ಯಕ್ಷತೆಯಲ್ಲಿ ಖ್ಯಾತ ನಟಿ ಜಯಮಾಲಾರವರು ಈ ಕಾದಂಬರಿಯನ್ನು ಬಿಡುಗಡೆ ಮಾಡಿದರು. ಕಾದಂಬರಿ ಪ್ರಕಟವಾದದ್ದೇ ಅದನ್ನೋದಿದ ಜನರು ತುಂಬಾ ಮೆಚ್ಚುಗೆಯ ಮಾತುಗಳನ್ನಾಡಿದರು. ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಕೂಡಾ ಅರ್ಹವಾಗಿಯೇ ಸಂದಿದೆ.

ಅಡಿ ಟಿಪ್ಪಣಿ

೧. ಗೋಪಾಲಕೃಷ್ಣ ಪೈ, 'ನನ್ನ ಕಾದಂಬರಿಯ ಕಥೆ', ಡಿಸೆಂಬರ್ ೨೫, ೨೦೧೧, ಪ್ರಜಾವಾಣಿ ಪುರವಣಿ, ಪುಟ ೩.

೨. ಅದೇ, ಪುಟ ೩.

೩. ಅದೇ, ಪುಟ ೩.

೪. ಅದೇ, ಪುಟ ೩.

೫. ಅದೇ, ಪುಟ ೪.

೬. ಅದೇ, ಪುಟ ೪.

೭. ಅದೇ, ಪುಟ ೪.

ಅಧ್ಯಾಯ ೩

ವಲಸೆಯ ಅರ್ಥ, ಬಗೆಗಳು ಮತ್ತು ಗೌಡ ಸಾರಸ್ವತರ ಹಿನ್ನೆಲೆ

೩.೧ ವಲಸೆಯ ಅರ್ಥ, ಬಗೆಗಳು, ಕಾರಣಗಳು

೩.೨ ಕರ್ನಾಟಕದ ಕರಾವಳಿಯಲ್ಲಿ ವಲಸೆ

೩.೩ ಗೌಡ ಸಾರಸ್ವತರ ಐತಿಹಾಸಿಕ ಹಿನ್ನೆಲೆ

ಅಧ್ಯಾಯ ೩

ವಲಸೆಯ ಅರ್ಥ, ಬಗೆಗಳು ಮತ್ತು ಗೌಡ ಸಾರಸ್ವತರ ಹಿನ್ನೆಲೆ

೩.೧ ವಲಸೆಯ ಅರ್ಥ, ಬಗೆಗಳು, ಕಾರಣಗಳು

ವಲಸೆ ಮನುಷ್ಯನ ಅಸ್ತಿತ್ವದಷ್ಟೇ ಪುರಾತನವಾಗಿದೆ. ಆದಿ ಮಾನವನ ಆಹಾರದ ಹುಡುಕಾಟದಲ್ಲಿ ಬೇಟೆಯ ನೆಪದಲ್ಲಿ, ಪ್ರಾಕೃತಿಕ ವಿಕೋಪಗಳಿಂದ ರಕ್ಷಣೆ ಪಡೆಯಲು, ಯುದ್ಧ ದಂಗೆಗಳಿಂದ ತಪ್ಪಿಸಿಕೊಳ್ಳಲು ವಲಸೆ ಹೋಗಿರುವುದು ಚರಿತ್ರೆಯಿಂದ ತಿಳಿದುಬರುತ್ತದೆ. ಆಧುನಿಕ ಮಾನವ ವಿವಿಧ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ನೈಸರ್ಗಿಕ ಮತ್ತು ಅಭಿವೃದ್ಧಿಯ ಕಾರಣಗಳಿಂದ ವಲಸೆಗೆ ಮೊರೆ ಹೋಗುತ್ತಿದ್ದಾನೆ, ವಲಸಿಗನಾಗುತ್ತಿದ್ದಾನೆ. ವಲಸೆ ಜನಸಂಖ್ಯೆಯ ಸಂಯೋಜನೆ ಜನಸಂಖ್ಯೆಯ ಪುನರ್‌ಹಂಚಿಕೆ, ಜನ ಸಾಂದ್ರತೆಯ ವಿವಿಧ ರೀತಿಯ ಪ್ರವಾಹಗಳಾದ ಕೈಗಾರಿಕೀಕರಣ, ನಗರೀಕರಣ, ಸಾಂಸ್ಕೃತೀಕರಣ, ಪಾಶ್ಚಾತ್ಯೀಕರಣ, ಕೃಷಿಯ ವಾಣಿಜ್ಯೀಕರಣ, ಆಧುನೀಕರಣ, ಸ್ಥಳೀಕರಣ, ಮಹಿಳಾ ಸಬಲೀಕರಣ, ಹೊಸ ಜೀವನಶೈಲಿಯ ಅನುಕರಣೆ ಮುಂತಾದ ಕಾರಣಗಳಿಗೆ ಪ್ರಚೋದಕ ಮತ್ತು ಪ್ರೇರಕ ಅಂಶ ಕೂಡಾ ಆಗಿರುತ್ತದೆ.

ವಲಸೆಯ ಅರ್ಥ

ಸ್ಥಾನಾಂತರಗೊಳ್ಳುವುದೇ ವಲಸೆ. "Migration is a shift in the place of residence for some length of time"[೧]. ಈ ಸ್ಥಾನಾಂತರ ಸ್ವಲ್ಪ ಕಾಲಕ್ಕಾದರೂ ಆಗಿರಬಹುದು, ಅನುಕೂಲ ಪರಿಸ್ಥಿತಿಯ ಮೂಲಕ ಈ ಕಾಲಾವಧಿ ಮುಂದಕ್ಕೆ ಬೆಳೆದು ಸ್ಥಿರವಾಗಬಹುದು.

"ಒಂದು ವಾಸಸ್ಥಳದಿಂದ ಇನ್ನೊಂದು ವಾಸಸ್ಥಳಕ್ಕೆ ತಾತ್ಕಾಲಿಕ ಅಥವಾ ಶಾಶ್ವತವಾದ ಗಮನಾರ್ಹ ಕಾಲಕ್ಕೆ ಸ್ಥಾನಾಂತರಗೊಳ್ಳುವುದನ್ನು ವಲಸೆ"[೨] ಎಂದು ಸಾಮಾನ್ಯವಾಗಿ ಅರ್ಥೈಸಲಾಗುತ್ತದೆ. ಜೀವನೋಪಾಯದ ಸಾಧನಗಳ ಹುಡುಕಾಟವೇ ವಲಸೆಯ ಮುಖ್ಯ ಉದ್ದೇಶ.

ವಲಸೆಗೆ ಕಾರಣಗಳು

ಒಂದು ಪ್ರದೇಶದ ಅಸಹಾಯಕತೆ ಮತ್ತು ಅವಕಾಶಗಳ ಕೊರತೆ ಒಬ್ಬ ವ್ಯಕ್ತಿಯನ್ನು ಆ ಪ್ರದೇಶದಿಂದ ಹೊರಗೆ ದಬ್ಬುತ್ತದೆ. ಇನ್ನೊಂದು ಪ್ರದೇಶದ ಅವಕಾಶಗಳು ಮತ್ತು ಆಕರ್ಷಣೆಗಳು ಅದೇ ವ್ಯಕ್ತಿಯನ್ನು ತನ್ನೆಡೆಗೆ ಸೆಳೆಯುತ್ತವೆ.

"ತಾವಿದ್ದ ಊರನ್ನು ಬಿಡುವಂತೆ ಪ್ರಚೋದಿಸುವ ಅಂಶಗಳನ್ನು ವಲಸೆಗೆ ಕಾರಣವಾಗುವ 'ದಬ್ಬುವ' ಅಥವಾ 'ತಳ್ಳುವ' ಸಂಗತಿಗಳು ಎಂದು ತಿಳಿಯಲಾಗುತ್ತದೆ. ಬಡತನ, ನಿರುದ್ಯೋಗ, ಅರೆನಿರುದ್ಯೋಗ, ಕೃಷಿ ಭೂಮಿಯ ಲಭ್ಯತೆಯ ಪ್ರಮಾಣದಲ್ಲಿ ಕುಸಿತ, ಬರಗಾಲ, ಪ್ರಾಕೃತಿಕ ವಿಕೋಪಗಳು, ದಬ್ಬಾಳಿಕೆ ಮತ್ತು ದುರ್ವ್ಯವಹಾರದಿಂದ ಹತಾಶೆ, ಕೃಷಿಕಾರ್ಯದಲ್ಲಿ ನಿರಾಸಕ್ತಿ, ಕಡಿಮೆ ಆದಾಯ, ಆಧುನಿಕ ಜೀವನಶೈಲಿಯ ಅವಕಾಶಗಳ ಕೊರತೆ, ಜಾತಿ, ಕೋಮು ಮತ್ತು ಸಾಮಾಜಿಕ ಬಾಂಧವ್ಯದಿಂದ ಸ್ವತಂತ್ರನಾಗುವ ಹಂಬಲ ಇವೆಲ್ಲವೂ ವಲಸೆಗೆ ಕಾರಣವಾಗುವ 'ದಬ್ಬುವ' ಅಥವಾ 'ತಳ್ಳುವ' ಸಂಗತಿಗಳು"[೩].

"ಒಂದು ಪ್ರದೇಶದ ಅವಕಾಶಗಳು ಮತ್ತು ಆಕರ್ಷಣೆಗಳು ಅದೇ ವ್ಯಕ್ತಿಯನ್ನು ತನ್ನೆಡೆಗೆ ಬರುವಂತೆ ಪ್ರೇರೆಪಿಸುವ ಅಂಶಗಳು. ವಲಸೆಗೆ ಕಾರಣವಾಗುವ 'ಸೆಳೆತದ' ಸಂಗತಿಗಳು ತನ್ನ ಬಯಕೆಯ ಉದ್ಯೋಗ ಪಡೆಯಲು, ವ್ಯಾಪಾರ ಮಾಡಲು, ಶಿಕ್ಷಣ ಪಡೆಯಲು, ವಿಶೇಷ ಅವಕಾಶ, ಉತ್ತಮ ನಾಗರಿಕ ಸೌಲಭ್ಯ, ಉನ್ನತ ಮಟ್ಟದ ಜೀವನಶೈಲಿಯ ಅವಕಾಶಗಳು, ಹೆಚ್ಚಿನ ದುಡಿಮೆಯ ಮತ್ತು ಗಳಿಕೆಯ ಅವಕಾಶಗಳು, ಸರ್ವಸಮಾನತೆಯ ವಾತಾವರಣ, ವ್ಯಕ್ತಿತ್ವ ವಿಕಸನ, ಹೊಸ ಚಟುವಟಿಕೆ ಮತ್ತು ಸ್ವತಂತ್ರ ಬದುಕಿಗೆ ಅನುಕೂಲಕರವಾದ ವಾತಾವರಣ ವಲಸೆಗೆ ಕಾರಣವಾಗುವ 'ಸೆಳೆತದ' ಸಂಗತಿಗಳು"[೪].

ವಲಸೆಯ ಬಗೆಗಳು

"ಭಾರತದ ಜನಗಣತಿಯ ಪ್ರಕಾರ ವಲಸೆಯನ್ನು 'ಹುಟ್ಟಿದ ಸ್ಥಳ' ಮತ್ತು 'ಜನಗಣತಿಯ ಸ್ಥಳ' ವನ್ನು ಆಧರಿಸಿ ವ್ಯಾಖ್ಯಾನಿಸಲಾಗುತ್ತದೆ. ಇದರ ಪ್ರಕಾರ ಓರ್ವ ವ್ಯಕ್ತಿ 'ಹುಟ್ಟಿದ ಸ್ಥಳ' ಮತ್ತು 'ಜನಗಣತಿಯ ಸ್ಥಳ' ಬೇರೆಬೇರೆಯಾಗಿದ್ದರೆ ಅಂತಹ ವ್ಯಕ್ತಿಯನ್ನು 'ವಲಸಿಗನೆಂದು' ಕರೆಯಲಾಗುತ್ತದೆ. ಹೀಗೆ ಭಾರತದಲ್ಲಿನ ವಲಸೆಯನ್ನು 'ಆಂತರಿಕ ವಲಸೆ' ಮತ್ತು 'ಅಂತಾರಾಷ್ಟ್ರೀಯ ವಲಸೆ' ಎಂದು ಪ್ರತ್ಯೇಕಿಸಬಹುದು"[೫].

"ಒಬ್ಬ ವ್ಯಕ್ತಿಯ 'ಹುಟ್ಟಿದ ಸ್ಥಳ' ಮತ್ತು 'ಜನಗಣತಿಯ ಸ್ಥಳ' ಬೇರೆಬೇರೆಯಾಗಿದ್ದು ಈ ಎರಡು ಸ್ಥಳಗಳು ದೇಶದೊಳಗೆ ಸೇರಿಕೊಂಡರೆ ಅದನ್ನು 'ಆಂತರಿಕ ವಲಸೆ' ಎಂದು ಪರಿಗಣಿಸಲಾಗುತ್ತದೆ. 'ಹೊರವಲಸೆ' – 'ಹುಟ್ಟಿದ ಸ್ಥಳದಿಂದ ಇನ್ನೊಂದು ಪ್ರದೇಶಕ್ಕೆ ಹೋಗುವುದು', ಅಥವಾ 'ಒಳವಲಸೆ' – ಇನ್ನೊಂದು ಪ್ರದೇಶದಿಂದ ನಮ್ಮೂರಿಗೆ ಬರುವುದು, ಅಥವಾ 'ತಿರುವಲಸೆ' – ಹುಟ್ಟಿದ ಸ್ಥಳದಿಂದ ಇನ್ನೊಂದು ಪ್ರದೇಶಕ್ಕೆ ಸ್ಥಾನಾಂತರಗೊಂಡು ಪುನಃ ಹುಟ್ಟಿದ ಸ್ಥಳಕ್ಕೆ ಮರುಸ್ಥಾನಾಂತರಗೊಳ್ಳುವುದು"[೬].

"ಆಂತರಿಕ ವಲಸೆಯನ್ನು ಪ್ರಮುಖವಾಗಿ ಮೂರು ನಮೂನೆಗಳಲ್ಲಿ ಗುರುತಿಸಬಹುದು, 'ಜಿಲ್ಲೆಯೊಳಗಿನ ವಲಸೆ', 'ಅಂತರ್ ಜಿಲ್ಲಾ ವಲಸೆ' ಮತ್ತು 'ಅಂತರ್‌ರಾಜ್ಯ ವಲಸೆ' ಎಂದು ಪುನರ್ ವಿಂಗಡಿಸಬಹುದು. ವ್ಯಕ್ತಿಯ 'ಹುಟ್ಟಿದ ಸ್ಥಳ' ಮತ್ತು 'ಜನಗಣತಿಯ ಸ್ಥಳ'

ಬೇರೆಬೇರೆಯಾಗಿದ್ದು ಈ ಎರಡು ಸ್ಥಳಗಳು ಒಂದೇ ಜಿಲ್ಲೆಯೊಳಗಿದ್ದರೆ ಅಂತಹ ಆಂತರಿಕ ವಲಸೆಯನ್ನು 'ಜಿಲ್ಲೆಯೊಳಗಿನ ವಲಸೆ' ಎಂದು ಕರೆಯಲಾಗುತ್ತದೆ. ವ್ಯಕ್ತಿಯ 'ಹುಟ್ಟಿದ ಸ್ಥಳ' ಮತ್ತು 'ಜನಗಣತಿಯ ಸ್ಥಳ' ಬೇರೆ ಬೇರೆಯಾಗಿದ್ದು ಈ ಎರಡು ಸ್ಥಳಗಳು ಒಂದೇ ರಾಜ್ಯದ ಬೇರೆ ಬೇರೆ ಜಿಲ್ಲೆಗಳಾಗಿದ್ದರೆ ಅಂತಹ ಆಂತರಿಕ ವಲಸೆಯನ್ನು 'ಅಂತರ್‌ಜಿಲ್ಲಾ ವಲಸೆ' ಎಂದು ಪರಿಗಣಿಸಲಾಗುತ್ತದೆ"[೭].

"'ಹುಟ್ಟಿದ ಸ್ಥಳ' ಒಂದು ರಾಜ್ಯದಲ್ಲಿದ್ದು 'ಜನಗಣತಿಯ ಸ್ಥಳ' ಇನ್ನೊಂದು ರಾಜ್ಯದಲ್ಲಿದ್ದರೆ ಅಂತಹ ವಲಸೆಯನ್ನು 'ಅಂತರ್‌ರಾಜ್ಯ ವಲಸೆ' ಎಂದು ವ್ಯಾಖ್ಯಾನಿಸಲಾಗುತ್ತದೆ. ಅದೇ ರೀತಿ ಒಬ್ಬ ವ್ಯಕ್ತಿಯ 'ಹುಟ್ಟಿದ ಸ್ಥಳ' ಮತ್ತು 'ವಾಸಿಸುವ ಸ್ಥಳ' ಗ್ರಾಮೀಣ ಮತ್ತು ನಗರ ಪ್ರದೇಶವಾಗಿದೆ ಎಂಬುದನ್ನಾಧರಿಸಿ ವಲಸೆಯನ್ನು ತಿಳಿಸಲಾಗುತ್ತದೆ"[೮].

"'ಅಂತರ್‌ರಾಷ್ಟ್ರೀಯ ವಲಸೆ' ಎರಡು ರಾಷ್ಟ್ರಗಳ ನಡುವೆ ನಡೆಯುವ ವಲಸೆಯಾಗಿದೆ. ನಮ್ಮ ದೇಶದಿಂದ ಇನ್ನೊಂದು ದೇಶಕ್ಕೆ ಹೋಗುವುದನ್ನು 'ದೇಶಾಂತರ ವಲಸೆ' ಅಥವಾ 'ಹೊರವಲಸೆ' ಎಂದೂ, ಇನ್ನೊಂದು ದೇಶದಿಂದ ನಮ್ಮ ದೇಶಕ್ಕೆ ಬರುವುದನ್ನು 'ದೇಶೀಯ ವಲಸೆ' ಅಥವಾ 'ಒಳವಲಸೆ' ಎಂದು ಅರ್ಥೈಸುತ್ತಾರೆ"[೯].

೩.೨ ಕರ್ನಾಟಕದ ಕರಾವಳಿಯಲ್ಲಿ ವಲಸೆ

ಪ್ರಾದೇಶಿಕವಾಗಿ ಪ್ರಸ್ತುತ ಕೇರಳ ರಾಜ್ಯದಲ್ಲಿರುವ ದಕ್ಷಿಣದ ಕಾಸರಗೋಡಿನಿಂದ ಕರ್ನಾಟಕ ರಾಜ್ಯದಲ್ಲಿರುವ ಉತ್ತರದ ಕಾರವಾರದ ವರೆಗೆ ಇರುವ ಭೂಪ್ರದೇಶ ಭಾರತದಲ್ಲಿಯೇ ಅತೀ ಹೆಚ್ಚು 'ವಲಸೆ ಮನೋಭಾವ' ಹೊಂದಿರುವ ಪ್ರದೇಶವೆಂದು ಗುರುತಿಸಲಾಗಿದೆ. ಈ ಭೂ ಪ್ರದೇಶ ಭೌಗೋಳಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ಸಾಮಾಜಿಕ ನೆಲೆಗಳಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿರುವುದು ಸುಸ್ಪಷ್ಟ. ಇಲ್ಲಿನ ಜನರು ಸಾಹಸಿಗಳು, ಶ್ರಮಜೀವಿಗಳು, ಹಾಗೂ ಛಲಗಾರರು, ಆಡಳಿತಾತ್ಮಕ ಕಾರಣಗಳಿಂದ ಈ ಭೂಪ್ರದೇಶವನ್ನು ಇಂದು ನಾಲ್ಕು ಜಿಲ್ಲೆಗಳಾಗಿ – ಕಾಸರಗೋಡು, ದಕ್ಷಿಣ ಕನ್ನಡ, ಉಡುಪಿ, ಉತ್ತರಕನ್ನಡ – ಎಂದು ವಿಂಗಡಿಸಲಾಗಿದೆ. ವಲಸೆಯ ಹಿನ್ನೆಲೆ, ಪ್ರಕಾರಗಳು, ಸ್ವರೂಪಗಳು ಮತ್ತು ಕಾರಣಗಳು ಈ ನಾಲ್ಕು ಜಿಲ್ಲೆಗಳಲ್ಲಿ ಪರಸ್ಪರ ಸಮಾನತೆಯನ್ನು ಹೊಂದಿವೆಯಾದರೂ ಈ ವಿಷಯ ದಕ್ಷಿಣ ಕನ್ನಡ ಜಿಲ್ಲೆಗೆ ಸೀಮಿತವಾಗಿದೆ.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಅತೀ ಹೆಚ್ಚು 'ವಲಸೆ ಮನೋಭಾವ'ಕ್ಕೆ ಪೂರಕವಾದ ಕಾರಣಗಳು ಮುಖ್ಯವಾಗಿ ಜಿಲ್ಲೆಯ ಪ್ರತಿ ಮೂಲೆ ಮೂಲೆಗಳಲ್ಲಿ ಲಭ್ಯವಿದ್ದ ಪ್ರಾಥಮಿಕ ಶಿಕ್ಷಣ, ಬಹುಭಾಷಾ ಪ್ರಾವೀಣ್ಯತೆ, ಉತ್ತಮ ಸಂಪರ್ಕ ಸೌಲಭ್ಯ, ಮತ್ತು ವಾಹನ ಸೌಕರ್ಯ, ಇಲ್ಲಿಯವರ ಸಾಹಸ ಮನೋಭಾವ ಹಾಗೂ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿ ಜೀವನಮಟ್ಟವನ್ನು ಉತ್ತಮಪಡಿಸಿಕೊಳ್ಳಬೇಕೆಂಬ ಬಲವಾದ ಮಾನಸಿಕ ತುಮುಲ

ಈ ಜಿಲ್ಲೆಯಲ್ಲಿ ಹುಟ್ಟಿದ ಪ್ರತಿಯೊಂದು ಮಗುವು ಮುಂದೊಂದು ದಿನ ತಾನು ಈ ಊರು ಬಿಟ್ಟು ದೂರದ ಇನ್ನಾವುದೋ ಊರಿಗೆ ಹೊಸ ಅವಕಾಶಗಳನ್ನು ಅರಸಿ ವಲಸೆಗೊಳ್ಳುತ್ತೇನೆ ಎಂಬ ಮನೋಭಾವ ಮತ್ತು ಕನಸುಗಳನ್ನು ರೂಪಿಸಿಕೊಳ್ಳುತ್ತಾ ಬೆಳೆಯುತ್ತದೆ ಎಂದರೆ ಅತಿಶಯೋಕ್ತಿಯಾಗಲಾರದು. ಕೌಟುಂಬಿಕ ಕಾರಣಗಳಿಂದ ವಲಸೆಯಾಗಲು ಸಾಧ್ಯವಾಗದಾಗ ಯುವಕ ಯುವತಿಯರು ಪಡುವ ಮಾನಸಿಕ ಹಿಂಸೆ, ಅನುಭವಿಸುವ ಕೀಳರಿಮೆ, ಅವರ ಕುರಿತು ಸಮಾಜ ಹಾಗೂ ಸಮಕಾಲೀನರು ತೋರಿಸುವ ಅಲಕ್ಷ್ಯ ಹಾಗೂ ಅವಹೇಳನಕಾರಿ ಮಾತುಗಳು ಈ ಅಂಶವನ್ನು ಪುಷ್ಟಿಕರಿಸುತ್ತವೆ. "ವರ್ಷಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯನ್ನು 'ಮನಿಯಾರ್ಡರ್ ಇಕೊನಮಿ' ಎಂದು ಕರೆಯಲಾಗುತ್ತಿತ್ತು. ವಲಸಿಗರು ರವಾನಿಸಿದ ಹಣದಿಂದಲೇ ಈ ಭೂಪ್ರದೇಶದ ಅರ್ಥವ್ಯವಸ್ಥೆ ನಡೆಯುತ್ತಿತ್ತು ಎಂದು ಇದರಿಂದ ಸಾಬೀತಾಗುತ್ತದೆ. ಹೀಗೆ ಈ ಭೂಪ್ರದೇಶದಲ್ಲಿ ವಲಸೆ ನಿರಂತರವಾಗಿ ಬಹಳಷ್ಟು ಹಿಂದಿನಿಂದಲೂ ನಡೆಯುತ್ತಿತ್ತು ಎಂದು ತಿಳಿಯಲು ಸಾಧ್ಯವಾಗುತ್ತದೆ"[೧೦]. ಈ ಭೂಪ್ರದೇಶದ ಲಿಂಗಾನುಪಾತ ನಿರಂತರ ಮಹಿಳಾ ಪರವಾಗಿರುವ ಅಂಶ ಕೂಡಾ ಇಲ್ಲಿ ಹೊರವಲಸೆ ವ್ಯಾಪಕವಾಗಿ ನಡೆಯುವುದನ್ನು ಪುಷ್ಟೀಕರಿಸುತ್ತದೆ.

ಸ್ವಾತಂತ್ರ್ಯಪೂರ್ವದಲ್ಲಿನ ಒಳವಲಸೆಯು ಚಾರಿತ್ರಿಕವಾಗಿ ೧೬ ಮತ್ತು ೧೭ ನೇ ಶತಮಾನದಲ್ಲಿ ಗೋವಾದಲ್ಲಿ ಪೋರ್ಚುಗೀಸರ ದಬ್ಬಾಳಿಕೆಯಿಂದ ಕೊಂಕಣಿ ಮನೆಮಾತಿನ ಸಾರಸ್ವತ ಬ್ರಾಹ್ಮಣರು, ಕೆಥೋಲಿಕ್ ಕ್ರೈಸ್ತರು ಈ ಪ್ರದೇಶಕ್ಕೆ ಒಳವಲಸೆಗಾರರಾಗಿ ಬಂದು ಈ ಪ್ರದೇಶದಾದ್ಯಂತ ತಳವೂರಿದರು. ಇವರಲ್ಲಿ ಸಾರಸ್ವತರು ವ್ಯಾಪಾರ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡರೆ ಕೆಥೊಲಿಕ್ ಕ್ರೈಸ್ತರು ಕೃಷಿಯನ್ನು ಜೀವನದ ಮಾರ್ಗವಾಗಿ ಸ್ವೀಕರಿಸಿದ ಕುರಿತಂತೆ ಪುರಾವೆಗಳಿವೆ. ಹಾಗೆಯೇ ೨೦ ನೇ ಶತಮಾನದಲ್ಲಿ ಕೇರಳಿಗರು ಬೆಳ್ತಂಗಡಿ, ಪುತ್ತೂರು, ಸುಳ್ಯ ಮತ್ತು ಕುಂದಾಪುರ ತಾಲೂಕುಗಳಲ್ಲಿ ವಲಸಿಗರಾಗಿ ತಳವೂರಿ ಕೃಷಿಕರಾಗಿ ಇಲ್ಲಿ ನೆಲೆಸಿದ್ದಾರೆ. ತಮಿಳು ಭಾಷಿಕರು ಸುಳ್ಯ ತಾಲೂಕು ಪ್ರದೇಶದಲ್ಲಿ ರಬ್ಬರ್ ತೋಟಗಳಲ್ಲಿ ಕಾರ್ಮಿಕರಾಗಿ ದುಡಿಯಲು ಬಂದವರು ಇಲ್ಲಿ ನೆಲೆಸಿದ್ದಾರೆ.

"ಸ್ವಾತಂತ್ರ್ಯ ಪೂರ್ವದಲ್ಲಿ ಹೊರವಲಸೆ ಮಲೆನಾಡಿನ ಭೂಪ್ರದೇಶ, ದಿಂಡಿಗಲ್ಲು, ಮದ್ರಾಸ್, ಮೈಸೂರು, ಹೈದರಾಬಾದ್, ಮತ್ತು ಮುಖ್ಯವಾಗಿ ಮುಂಬಯಿ ನಗರಕ್ಕೆ ಆಗಿರುವುದರ ಕುರಿತು ಅನೇಕ ಸಾಂದರ್ಭಿಕ ಪುರಾವೆಗಳಿವೆ. ಮುಂಬಯಿ ನಗರಕ್ಕೆ ಈ ಊರಿಂದ ಲಭ್ಯವಿದ್ದ ಹಡಗು ಸೇವೆ, ಪಕ್ಕದ ಜಿಲ್ಲೆಯ ಕಡೂರು, ಹರಿಹರಗಳಿಂದ ಉಗಿ ಬಂಡಿಯ ಸೌಕರ್ಯ ಹಾಗೂ ಕಾಲಕ್ರಮೇಣ ದಿನನಿತ್ಯ ಓಡಾಡುತ್ತಿರುವ ನೂರಾರು ಬಸ್ಸುಗಳು, ದಕ್ಷಿಣ ಕನ್ನಡದವರಿಗೆ ಮುಂಬಯಿ ಹತ್ತಿರವಾಗಲು ಕಾರಣವಾಗಿವೆ. ಈ ಹಂತದಲ್ಲಿ ಬಂದ ಹೆಚ್ಚಿನ ವಲಸಿಗರು ಹೊಟೇಲುಗಳು, ಮನೆಕೆಲಸ, ಗಿರಣಿ, ಗ್ಯಾರೇಜುಗಳು, ಮಿಲ್ಲುಗಳಲ್ಲಿ ದುಡಿಮೆಯನ್ನು ಮಾಡಿದವರು"[೧೧].

"ಸ್ವಾತಂತ್ರ್ಯಾನಂತರದ ವಲಸೆಯು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನೊಳಗೊಂಡ ಅವಿಭಜಿತ ದಕ್ಷಿಣ ಕನ್ನಡದಲ್ಲಿನ ವಲಸೆಯನ್ನು ಅದರಲ್ಲೂ ಮುಖ್ಯವಾಗಿ

ಹೊರವಲಸೆಯನ್ನು ಮೂರು ನಿರ್ದಿಷ್ಟ ಕಾಲಘಟ್ಟದಲ್ಲಿ ವಿಂಗಡಿಸಬಹುದು. ಮೊದಲನೆಯ ಘಟ್ಟ: ೧೯೪೭ ರಿಂದ ೧೯೭೧ ರ ತನಕ, ಎರಡನೆಯ ಘಟ್ಟ: ೧೯೭೧ ರಿಂದ ೧೯೯೦ ರ ತನಕ ಮತ್ತು ಮೂರನೆಯ ಘಟ್ಟ: ೧೯೯೦ ರಿಂದ ಇಲ್ಲಿಯತನಕ"[೧೨].

"ಮೊದಲ ಕಾಲಘಟ್ಟದಲ್ಲಿ ನಡೆದ ಹೊರವಲಸೆಗೆ 'ತಳ್ಳುವ' ಸಂಗತಿಗಳು ಬಹುತೇಕ ಕಾರಣವಾಗಿವೆ. ಸಣ್ಣ ಭೂಹಿಡುವಳಿಗಳು, ಬಡತನ, ದೊಡ್ಡ ಕುಟುಂಬಗಳು, ಕರ್ನಾಟಕ ಭೂ ಮಸೂದೆಯ ಅನುಷ್ಠಾನದಿಂದ ಭೂಮಿ ಕಳೆದುಕೊಂಡ ಒಕ್ಕಲಿಗರು ಮತ್ತು ಭೂಹಿಡುವಳಿದಾರರು ಜೀವನೋಪಾಯವನ್ನು ಅರಸುತ್ತಾ ವಲಸೆ ಹೋಗುವುದು ಅನಿವಾರ್ಯ ಮಾರ್ಗವಾಗಿತ್ತು ಅಂದು ಅರ್ಥೈಸಬಹುದು"[೧೩].

"ಎರಡನೆಯ ಕಾಲಘಟ್ಟದಲ್ಲಿ ನಡೆದ ಹೊರವಲಸೆಯನ್ನು 'ಸರಣಿ ವಲಸೆ' ಎಂದು ಕರೆಯಬಹುದು. ಮಧ್ಯಪೂರ್ವದ ರಾಷ್ಟ್ರಗಳಿಗೆ ವಲಸೆ ಹೋಗುವ ಅವಕಾಶಗಳು ಗಣನೀಯವಾಗಿ ಹೆಚ್ಚಾದ ಕಾಲವಿದು. ಮಹಿಳೆಯರ ವೈಯಕ್ತಿಕ ಆರ್ಥಿಕ ಹೊರವಲಸೆ ಈ ಕಾಲಘಟ್ಟದಲ್ಲಿ ಬಹಳ ತೀವ್ರ ರೀತಿಯಲ್ಲಿ ಹೆಚ್ಚಳ ಕಂಡಿದೆ. ಕೃಷಿ ಕೂಲಿ ಕಾರ್ಮಿಕರ ಅಲಭ್ಯತೆ, ಹೆಚ್ಚುತ್ತಿರುವ ಜೀವನ ವೆಚ್ಚ, ಕುಸಿಯುತ್ತಿರುವ ಕೃಷಿ ವಲಯದ ಲಾಭ, ಈ ಭೂಪ್ರದೇಶದಾದ್ಯಂತ ಭತ್ತದ ಹಾಗೂ ಇತರ ಬೆಳೆಗಳ ನಿವ್ವಳ ವಿಸ್ತೀರ್ಣದಲ್ಲಿ ತೀವ್ರ ಕುಸಿತಗೊಳ್ಳಲು ಹೊರವಲಸೆ ಪ್ರಮುಖ ಕಾರಣವಾಗಿದೆ"[೧೪].

"ಮೂರನೆಯ ಕಾಲಘಟ್ಟದಲ್ಲಿ ಕರಾವಳಿಯಾದ್ಯಂತ ಹೊರವಲಸೆ, ಒಳವಲಸೆ ಹಾಗೂ ತಿರುವಲಸೆ ಏಕಕಾಲದಲ್ಲಿ ನಡೆದಿರುವುದನ್ನು ಇಂದು ನಾವು ಗಮನಿಸಬಹುದು. ಈ ಎಲ್ಲಾ ವಲಸೆಗೆ ಮೂಲಕಾರಣ 'ವಿವಿಧ ಸೆಳೆತಗಳು'. ತಾವು ಪಡೆದ ಶಿಕ್ಷಣಕ್ಕೆ ಸರಿಯಾದ ಉದ್ಯೋಗಾವಕಾಶಗಳು ಇಲ್ಲದೆ ಇರುವುದು, ಕೃಷಿಕಾರ್ಯದಲ್ಲಿ ನಿರಾಸಕ್ತಿ, ಕೃಷಿ ಕಾರ್ಮಿಕರ ಅಲಭ್ಯತೆ, ವಲಸೆಗೊಳ್ಳದವರ ಕುರಿತು ಸಮಾಜ ಮತ್ತು ಕೌಟುಂಬಿಕ ವಲಯದಲ್ಲಿ ಹೀಯಾಳಿಸುವಿಕೆ ಮತ್ತು ಅನಾದರ ಪ್ರಮುಖ 'ತಳ್ಳುವ' ಸಂಗತಿಗಳಾಗಿವೆ. ಈ ಕಾಲಘಟ್ಟದಲ್ಲಿ ಹೊರವಲಸೆಯಲ್ಲಿ ಬದಲಾವಣೆಯನ್ನು ನಾವು ಕಾಣಬಹುದು. ವಲಸೆಯ ತಾಣವಾಗಿ ಮುಂಬಯಿಯ ಆಕರ್ಷಣೆ ಕಡಿಮೆಯಾಗಿದೆ. ಗಲ್ಫ್ ರಾಷ್ಟ್ರಗಳಿಗೆ ನಡೆಯುತ್ತಿದ್ದ ವಲಸೆಯ ಪ್ರಮಾಣ ಮತ್ತು ಪ್ರಕಾರಗಳಲ್ಲಿ ಕೂಡಾ ಬದಲಾವಣೆ ಮೂಡಿ ಬಂದಿದೆ. ಶಿಕ್ಷಿತ ಮತ್ತು ಕೌಶಲ್ಯವಿರುವ ವ್ಯಕ್ತಿಗಳ ವಲಸೆ ಗಣನೀಯ ಪ್ರಮಾಣದಲ್ಲಿ ಕುಂಠಿತಗೊಂಡರೆ ಸಾಧಾರಣ ಶಿಕ್ಷಣವಿರುವ ಕೌಶಲ್ಯರಹಿತ ಒಂಟಿ ವಲಸೆ ಹೆಚ್ಚಿನ ಪ್ರಮಾಣದಲ್ಲಿ ಮುಂದುವರಿದಿದೆ. ಈ ಪ್ರದೇಶದಲ್ಲಿನ ಸಾಮಾಜಿಕ ತಳ್ಳುವಿಕೆಗಳು ಇದಕ್ಕೆ ಪ್ರಮುಖ ಕಾರಣಗಳಾಗಿವೆ"[೧೫].

೩.೩ ಗೌಡ ಸಾರಸ್ವತರ ಐತಿಹಾಸಿಕ ಹಿನ್ನೆಲೆ

ದಕ್ಷಿಣ ಭಾರತದಲ್ಲಿ ದ್ರಾವಿಡ ಮೂಲದ್ದಲ್ಲದ ಭಾಷೆಯೊಂದನ್ನು ಮನೆಭಾಷೆಯನ್ನಾಗಿ ಹೊಂದಿರುವ ಬ್ರಾಹ್ಮಣ ವರ್ಗವೊಂದಿದೆ. ಇವರೊಳಗೆ ಗೌಡ, ಸಾರಸ್ವತ, ಕಾನ್ಯಕುಬ್ಜ, ಮೈಥಿಲ ಮತ್ತು ಉತ್ಕಲ ಎಂಬ ಐದು ಪ್ರಬೇಧಗಳು ಪ್ರಸಿದ್ಧವಾಗಿದ್ದು 'ಸಾರಸ್ವತ' ಎಂಬ ಬಂದು ವರ್ಗದ ಹೊರತು ಕಾನ್ಯಕುಬ್ಜಾದಿ ಬೇರೆ ವರ್ಗಗಳು ದಕ್ಷಿಣ ಭಾರತದಲ್ಲಿ ಇರುವುದಿಲ್ಲ. ಅವೆಲ್ಲ ಉತ್ತರ ಭಾರತದ ಬ್ರಾಹ್ಮಣರಿಗೆ ಮೀಸಲಾದ ಹೆಸರುಗಳಾಗಿವೆ. ಸಾರಸ್ವತ ಬ್ರಾಹ್ಮಣರೊಳಗೆ ಕಾಶ್ಮೀರಿ ಸಾರಸ್ವತ, ಗೌಡ ಸಾರಸ್ವತ ಎಂಬ ವಿಭಾಗಗಳಿವೆ.

"ಭಾಷಾ ಮೂಲದಿಂದ ಇವುಗಳನ್ನು ಗಮನಿಸಿದಾಗ 'ಗೌಡಾರಿ' ಭಾಷೆ – ಗಂಗಾ ಜಮುನಾ ಬಯಲು ಪ್ರದೇಶದ ಜನರಾಡುವ ಶೌರಸೇನಿಯ ಒಂದು ಶಾಖೆಯಾಗಿದೆ. ಶೌರಸೇನಿ – ಗುಜರಾತಿಯ ಮೂಲಭಾಷೆಯೂ ಹೌದು. ಹೀಗಿರುವಾಗ 'ದ್ರಾವಿಡ ಬ್ರಾಹ್ಮಣರು' ಎಂಬ ನಾಮಧೇಯವು ಮಹಾರಾಷ್ಟ್ರ ಬ್ರಾಹ್ಮಣರಿಗೂ, ಗುರ್ಜರ ಬ್ರಾಹ್ಮಣರಿಗೂ ಯಾವ ಕಾರಣದಿಂದ ತಗಲಿತೆಂಬುದು ನಿಗೂಢವಾಗಿದೆ"[೧೬].

"'ಕೊಂಕಣಿಗರು ಆರ್ಯಮೂಲದವರೇ? ದ್ರಾವಿಡ ಮೂಲದವರೇ?' ಎಂಬುದನ್ನು ನಿರ್ಧರಿಸುವುದಕ್ಕೆ ಸರಿಯಾದ ಗ್ರಂಥಾಧಾರಗಳಾವುವೂ ಈವರೆಗೆ ಲಭ್ಯವಾಗಿಲ್ಲ. ಇವೆಲ್ಲ ಗೊಜಲು ಬೇಡವೆಂದು ವಲಾಡ ತಿಮ್ಮಪ್ಪನವರು ಕ್ರಿ. ಶ. ೧೮೪೮ರಲ್ಲಿ ತಾವು ಬರೆದ "ಗ್ರಾಮ ಪದ್ಧತಿ" ಯಲ್ಲಿ ಪಂಚದ್ರಾವಿಡರೆಂದರೆ – ಮಹಾರಾಷ್ಟ್ರ, ಆಂಧ್ರ, ಕರ್ನಾಟಕ, ಚೋಳ ಮತ್ತು ತೌಳವರೆಂಬ ಐದು ವರ್ಗಗಳೆಂದು ಬದಲಾಯಿಸಿದ್ದಾರೆ"[೧೭].

ಗೌಡ ಸಾರಸ್ವತರು ಗೌಡ ದೇಶದಿಂದ (ಬಂಗಾಲ) ವಲಸೆ ಬಂದವರೆನ್ನುವುದು ಬಹುವಾಗಿ ಪ್ರಚಲಿತವಾಗಿರುವ ಮಿಥ್ಯವಾಗಿದೆ. ಪರಶುರಾಮ ಕ್ಷತ್ರಿಯರಿಂದ ಗೆದ್ದ ಭೂಮಿಯನ್ನು ಬ್ರಾಹ್ಮಣರಿಗೆ ದಾನ ಮಾಡಿದ ನಂತರ ಗೋವೆಯಲ್ಲಿ ಹೋಗಿ ನೆಲೆಸಿದನೆಂದು ಪುರಾಣದ ಕಥೆ ಹೇಳುತ್ತದೆ. ತಾಯಿಯನ್ನು ಕೊಂದ ಪಾಪ ಪರಿಹಾರಕ್ಕೆ ಪರಶುರಾಮ ಯಜ್ಞವೊಂದನ್ನು ನೆರವೇರಿಸಲು ಇಚ್ಛಿಸಿದಾಗ ಗೋವೆಯ ಬ್ರಾಹ್ಮಣರು ಯಜ್ಞದ ಪೌರೋಹಿತ್ಯವನ್ನು ನಡೆಸಲು ನಿರಾಕರಿಸಿದರೆಂದೂ, ಆಗ ಸಿಟ್ಟಾದ ಪರಶುರಾಮ ಮುಖ್ಯ ಗೌಡ, ಕಾನ್ಯಕುಬ್ಜ, ಮೈಥಿಲಿ, ಸಾರಸ್ವತ, ಕನೋಜದಿಂದ ೧೦ ಗೋತ್ರಗಳ ೧೦ ಸಾರಸ್ವತ ಬ್ರಾಹ್ಮಣ ಕುಟುಂಬಗಳನ್ನು ಕರೆತಂದನೆಂದೂ ಕತೆಯಿದೆ. ನಂತರ ಬಂದ ಕುಟುಂಬಗಳು ಗೋವೆಯ ಮಧ್ಯ ಭಾಗದಲ್ಲಿರುವ ಸಾಸಷ್ಟಿ ದೇಶದಲ್ಲಿನ ೬೬ ಅಗ್ರಹಾರಗಳಲ್ಲಿ ಆಶ್ರಯ ಪಡೆದರು. ಅಲ್ಲಿ ತಮ್ಮ ದೇವರುಗಳಿಗೆ ದೇವಸ್ಥಾನ ಕಟ್ಟಿಸಿ ಸ್ಥಳೀಯವಾಗಿ ಪ್ರಬಲರಾದರು.

"ಕೊಂಕಣಿ ಮೊದಲು ಕೊಂಕಣ ಪ್ರದೇಶದ ಮೂಲನಿವಾಸಿಗಳಾದ 'ಗಾವ್ಡಿ' ಹಾಗೂ 'ಕುಣಬಿ'ಗಳ ಭಾಷೆಯಾಗಿತ್ತು. ಇದನ್ನು ದ್ರಾವಿಡ ವರ್ಗದ ಭಾಷೆಯೆಂದು ಪರಿಗಣಿಸಲಾಗುತ್ತದೆ. ಕೊಂಕಣಿ ಭಾಷೆಗೂ ಮಧ್ಯಪೂರ್ವ ಭಾರತದ ಪರಿಶಿಷ್ಟ ಜನರ ಮುಂಡಾರಿ ಭಾಷೆಗೂ ಆಶ್ಚರ್ಯಕರ ಹೋಲಿಕೆಯಿದೆ. ಬರಗಾಲ, ವಿದೇಶಿಯರ ಉಪಟಳ ಇತ್ಯಾದಿಗಳಿಂದ ಬೇಸತ್ತು ಉತ್ತರ ಪಂಜಾಬ್, ಬಂಗಾಳ, ರಾಜಸ್ಥಾನದ ಪ್ರದೇಶಗಳಿಂದ ಬೇರೆ ಬೇರೆ ಕಾಲಘಟ್ಟದಲ್ಲಿ ಬೇರೆ ಬೇರೆಯಾಗಿ ವಲಸೆ ಬಂದ ಸಾರಸ್ವತರು, ಚೆಡ್ಡರು, ವೈಶ್ಯರು, ಮತ್ತವರ ಆಳುಗಳು ಇಲ್ಲಿ ನೆಲೆಸಿದಾಗ ಸ್ಥಳೀಯ ಭಾಷೆಯೊಂದಿಗೆ ತಮ್ಮ ಭಾಷೆಯನ್ನು ಸೇರಿಸಿದಾಗ ಸೃಷ್ಟಿಯಾದ ಭಾಷೆ ಕೊಂಕಣಿ ಎಂದು ಭಾಷಾ ಸಂಶೋಧಕರು ಹೇಳುತ್ತಾರೆ. ಗೌಡ ಸಾರಸ್ವತರು 'ಗೌಡ' ದೇಶದಿಂದ ವಲಸೆ ಬಂದವರೆನ್ನುವುದಕ್ಕಿಂತ ಅವರಿಗೆ 'ಗೌಡ ಸಾರಸ್ವತ'ರೆಂಬ ಹೆಸರು 'ಗಾವ್ಡಿ' ಅವರ 'ಗೌಡಾರಿ' ಭಾಷಾ ಮೂಲದಿಂದ ಬಂದಿರಬಹುದೆನ್ನುವುದು ಹೆಚ್ಚು ಸಹಜವಾಗಿ ಕಾಣಿಸುತ್ತದೆ. ಇವರು 'ಗೋರಾಷ್ಟ್ರ' ಮೂಲದವರಾದುದರಿಂದ ಇವರನ್ನು 'ಗೌಡ ಬ್ರಾಹ್ಮಣ'ರೆಂದು ಕರೆಯಲಾಗಿದೆ ಎನ್ನುವುದು ಕಡವ ಶಂಭು ಶರ್ಮರ ಅಭಿಪ್ರಾಯ"[೧೮].

ದ್ರಾವಿಡ ಬ್ರಾಹ್ಮಣ, ಗೌಡ ಬ್ರಾಹ್ಮಣ ಎಂಬ ಬೇಧವು ಅತಿ ಪುರಾತನವಾದುದೇನೂ ಅಲ್ಲ. ಈ ಬೇಧ ಕಲ್ಪನೆ ಉಂಟಾಗಿದ್ದು ಒಂದು ಸಾವಿರ ವರ್ಷಗಳಾಗಿರಬಹುದೇನೋ. ಅಂದರೆ ಆ ಕಾಲಘಟ್ಟದಲ್ಲಿ ಭಾರತದ ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಆಗಿದ್ದ ಸ್ಥಿತ್ಯಂತರಗಳ ಸ್ವರೂಪವನ್ನು ತಿಳಿಯಬೇಕಾಗುತ್ತದೆ. ಅಂದರೆ ಏಳು ಎಂಟು ಶತಮಾನಗಳು ಕಳೆಯುವವರೆಗೆ ವೈದಿಕ, ಬೌದ್ಧ, ಜೈನ ಎಂಬ ಮತಗಳು ಪರಸ್ಪರ ಸ್ಪರ್ಧಿಸುತ್ತಾ ಸಮಾಜದಲ್ಲಿ ಕೋಲಾಹಲವೆಬ್ಬಿಸುತ್ತಿದ್ದರು. ಉತ್ತರಭಾರತದಲ್ಲಿ ಶಕ ಹೂಣಾದಿಗಳ ಪ್ರವೇಶವಾಗಿ ರಾಜಕೀಯ ಸ್ಥಿತಿಯಲ್ಲಿ ಅನೇಕ ಪರಿವರ್ತನೆಗಳು ಉಂಟಾದವು. ಆ ಪರದೇಶಿಯರು ನೆಲೆನಿಂತು ಇಲ್ಲಿ ಪ್ರಚಲಿತವಾಗಿದ್ದ ಯಾವುದಾದರೂ ಒಂದು ಧರ್ಮವನ್ನು ಸ್ವೀಕರಿಸಿ ತಾವು ಆ ಸಮಾಜದವರೇ ಎಂದು ಕೊಳ್ಳಬಯಸಿದರು. ಬೌದ್ಧರು, ಜೈನರು ಅನ್ಯರನ್ನು ನಿರಾತಂಕವಾಗಿ ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳುತ್ತಿದ್ದರೆ ವೈದಿಕ ಮತಾನುಯಾಯಿಗಳು ಸಾಮಾನ್ಯವಾಗಿ ಇತರರನ್ನು ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ.

"ಉತ್ತರದ ಅರಸರು ಬೌದ್ಧ ಧರ್ಮವನ್ನೂ ಜೈನ ಧರ್ಮವನ್ನೂ ಸ್ವೀಕರಿಸಿ ಆಯಾಯ ಧರ್ಮೀಯರಿಗೆ ಪ್ರೋತ್ಸಾಹ ನೀಡಿದ್ದರಿಂದ ವೈದಿಕ ಬ್ರಾಹ್ಮಣ ವರ್ಗ ಆಶ್ರಯವಿಲ್ಲದೆ ಉತ್ತರ ಭಾರತದ ಒಂದು ಭಾಗವನ್ನು ಬಿಟ್ಟು ಪೂರ್ವಕ್ಕೂ, ದಕ್ಷಿಣ ಭಾರತಕ್ಕೂ ವಲಸೆ ಬರತೊಡಗಿದರು. ಪೂರ್ವಭಾಗದಲ್ಲಿ ಬಿಹಾರ, ಬಂಗಾಲದಲ್ಲಿ ಗುಪ್ತ ರಾಜರು ಬ್ರಾಹ್ಮಣರಿಗೆ ಆಶ್ರಯ ನೀಡಿದರು. ಆ ಭೂಭಾಗದ ರಾಜಧಾನಿಯು ಗುಪ್ತರ ಆಳ್ವಿಕೆಯ ನಂತರದ ಕಾಲದಲ್ಲಿ 'ಗೌಡ' ಎಂಬ ನಗರವಾಗಿತ್ತು ಮತ್ತು ಆ ಭೂಭಾಗಕ್ಕೆ ಗೌಡ ದೇಶವೆಂದೂ ಹೆಸರು ಬಂದಿತ್ತು (ಗೌಡ ಎಂಬ ಶಬ್ದಕ್ಕೆ 'ಗುಡ' (ಬೆಲ್ಲ) ಎಂಬ ಶಬ್ದವೇ ಮೂಲ. ಆ ಪ್ರದೇಶದಲ್ಲಿ

ಕಬ್ಬಿನ/ಬೆಲ್ಲದ ಉತ್ಪಾದನೆ ಅಧಿಕವಾಗಿದ್ದುದರಿಂದ ಆ ದೇಶ ಗುಡ ದೇಶ/ಗೌಡ ದೇಶವೆಂಬ ಹೆಸರು ಪಡೆದಿರಬೇಕು)"[೧೯].

ಗೋವೆಯಲ್ಲಿ ಪೋರ್ಚುಗೀಸರ ಆರ್ಥಿಕ ದಬ್ಬಾಳಿಕೆ ಹಾಗೂ ಮತಾಂತರದ ಪ್ರಯತ್ನಕ್ಕೆ ಹೆದರಿದ ಗೌಡ ಸಾರಸ್ವತರು ತುಳುನಾಡಿಗೆ ಓಡಿ ಬಂದವರೆಂಬ ಅಭಿಪ್ರಾಯ ಸಾಮಾನ್ಯವಾಗಿದೆ. ಇದರಲ್ಲಿ ಸ್ವಲ್ಪ ಸತ್ಯಾಂಶವಿರಬಹುದು. ಗೋವೆಯಿಂದ ಓಡಿ ಬಂದವರಲ್ಲಿ ಸೊನ್ನೆಗಾರರು, ಕುಡುಬಿಗಳು, ಕ್ರಿಶ್ಚಿಯನ್ನರು, ಕೂಡಾ ಇದ್ದಾರೆ. ಅಲ್ಲದೆ ಪೋರ್ಚುಗೀಸರು ಭಾರತದ ನೆಲದ ಮೇಲೆ ಕಾಲಿಡುವ ಕನಿಷ್ಠ ಮೂರು ಶತಮಾನಗಳ ಮೊದಲೇ ಗೌಡ ಸಾರಸ್ವತರು ಉತ್ತರ ಕನ್ನಡ ಜಿಲ್ಲೆ, ತುಳು ನಾಡು ಮತ್ತು ಕೇರಳಕ್ಕೆ ಬಂದು ವ್ಯಾಪಾರ ಮಾಡುತ್ತಿದ್ದರೆಂಬ ಬಗ್ಗೆ ಐತಿಹಾಸಿಕ ದಾಖಲೆಗಳಿವೆ. ಜೊತೆಗೆ ಮಂಗಳೂರು, ಮಂಜೇಶ್ವರ, ಬಂಟವಾಳ, ಕಾರ್ಕಳ, ಮೂಲ್ಕಿ, ಕಟಪಾಡಿ, ಗಂಗೊಳ್ಳಿ, ಕೊಚ್ಚಿಯ ಸುತ್ತಮುತ್ತ ಪೋರ್ಚುಗೀಸರ ಆಕ್ರಮಣದ ಮೊದಲೇ ಬಂದು ನೆಲೆಸಿ ವ್ಯಾಪಾರದಲ್ಲಿ ತೊಡಗಿದರು ಎಂದು ಇತಿಹಾಸ ತಿಳಿಸುತ್ತದೆ.

"ತುಳುನಾಡಿನಲ್ಲಿ ಇವರನ್ನು 'ಕೊಂಕಣಿಗಳು' ಎಂದು ಕರೆಯುತ್ತಾರಲ್ಲದೆ 'ಗೌಡ ಸಾರಸ್ವತ'ರೆಂದಲ್ಲ. ಬಾರಕೂರು, ಬಸರೂರುಗಳಲ್ಲಿ ವ್ಯಾಪಾರ ಮಾಡಿ ಅಪಾರ ಸಂಪತ್ತು ಗಳಿಸಿ ಸಮಾಜದಲ್ಲಿ ಗೌರವ ಸ್ಥಾನವನ್ನು ಹೊಂದಿದ್ದವರಾಗಿದ್ದರು. ಬಾರಕೂರಿನಲ್ಲಿ ದಾಮರಸ ಪ್ರಭು ಮುಂತಾದ ಗೌಡ ಸಾರಸ್ವತರು ವಿಜಯನಗರದ ರಾಜ್ಯಪಾಲರ ಮೇಲೆ ಹೆಚ್ಚಿನ ಪ್ರಭಾವ ಹೊಂದಿದ್ದರು. ಶಿವಳ್ಳಿ ಬ್ರಾಹ್ಮಣರ ಮತ್ತು ಸ್ಥಾನಿಕ ಬ್ರಾಹ್ಮಣರ ಮಧ್ಯೆ ಉಡುಪಿಯ ಕೃಷ್ಣ ದೇವಸ್ಥಾನದ ಹತೋಟಿಗಾಗಿ ಹೋರಾಟ ನಡೆದ ಫಲವಾಗಿ ಅದಕ್ಕೆ ಬಾರ್ಕೂರು ರಾಜ್ಯಪಾಲರು ಬೀಗಮುದ್ರೆ ಜಡಿಸಿದಾಗ ತಮ್ಮ ರಾಜಕೀಯ ಪ್ರಭಾವ ಉಪಯೋಗಿಸಿ ಅದನ್ನು ತೆರವುಗೊಳಿಸಿದ ಶ್ರೇಯ ಗೌಡ ಸಾರಸ್ವತರಿಗೆ ಸಲ್ಲುತ್ತದೆ. ಕೆಳದಿಯ ಅರಸರಲ್ಲಿಯೂ ಗೌಡ ಸಾರಸ್ವತರು ಉನ್ನತ ಸ್ಥಾನಮಾನಗಳನ್ನು ಹೊಂದಿದ್ದರು".[೨೦]

"ಕೊಂಕಣಿಗರಲ್ಲಿ – ಕಾವೇರಿ ಕೊಂಕಣಿಗರು, ಕಾಡು ಕೊಂಕಣಿಗರು (ನಿವೇಸ್ಕಾರರು ಅಥವ ಪೆಡ್ನೇಕಾರರು) ಇವರು ತಮ್ಮನ್ನು ಆದ್ಯ ಕೊಂಕಣಿಗರು ಎಂದು ಹೇಳಿಕೊಳ್ಳುತ್ತಾರೆ. ಗಾಳದ ಕೊಂಕಣಿಗಳು, ಬಾಳೋಳಿಕಾರರು, ಕುದಾಲ್ ದೇಶಸ್ಥರು, ಗೌಡ ಸಾರಸ್ವತರು ಎನ್ನುವ ಪ್ರಬೇಧಗಳಿವೆ. ಇವರಲ್ಲದೆ ಕೊಂಕಣಿ ಮಾತನಾಡುವ ಅಂಬಿಗರು/ಖಾರ್ವಿಗಳು, ರೇವಣ್‌ಕರ್, ವರ್ಣೇಕರ್, ಶೇಟ್, ಮುಂತಾದ ಸೊನ್ನೆಗಾರರು ತುಳುನಾಡಿನಲ್ಲಿ ಇದ್ದಾರೆ. ಕೊಂಕಣಿ ಪ್ರದೇಶದಲ್ಲಿ ಕುಶಸ್ಥಳಿಕಾರರು, ಬಾರ್ದೇಶಕಾರರು, ಖಡ್ವೆ ಕಾಜುಲೆಗಳು, ಲೋಬಿಕಾರರು, ದಿವಾಡ್ಕಾರರು, ಎನ್ನುವ ಪ್ರತ್ಯೇಕ ವರ್ಗಗಳು ಅಸ್ಥಿತ್ವದಲ್ಲಿವೆ. ಸಾರಸ್ವತರು ಕೊಂಕಣಿಗರಿಂದ ಪ್ರತ್ಯೇಕಗೊಂಡ ಒಂದು ಪಂಗಡವೆಂದು ಹೇಳಲಾಗುತ್ತದೆ".[೨೧] ಸಾರಸ್ವತರು ಮೊದಲು ಕವಳೆಮಠವನ್ನು ಅನುಸರಿಸುತ್ತಿದ್ದರು. ನಂತರ ಕಾಶಿಮಠ, ಪರ್ತಗಾಳಿ ಮಠ, ಚಿತ್ರಾಪುರ ಮಠವನ್ನು ಸ್ಥಾಪಿಸಿಕೊಂಡು ಅದಕ್ಕೆ ಅಧೀನರಾಗಿ ನಡೆದುಕೊಂಡು ಬಂದಿದ್ದಾರೆ. ಸಾರಸ್ವತರು

ಮೂಲತಃ ಶೈವರಾಗಿದ್ದು ಗೋವೆಯಲ್ಲಿ ಶಿವ ಅಥವಾ ಪಾರ್ವತಿಯನ್ನು ಆರಾಧಿಸುತ್ತಿದ್ದರು. ನಂತರ ಮಧ್ವಾಚಾರ್ಯರ ಶಿಷ್ಯ ಪರಂಪರೆಯ ಪದ್ಮನಾಭಾಚಾರ್ಯರ ಪ್ರಭಾವದಿಂದಾಗಿ ಗೌಡ ಸಾರಸ್ವತರ ಒಂದು ವರ್ಗ ವೈಷ್ಣವಾರಾಧನೆಗೆ ಪರಿವರ್ತನೆಗೊಂಡರು. ತತ್ಪರಿಣಾಮವಾಗಿ ಅವರು ತುಳುನಾಡಿನಲ್ಲಿ ಲಕ್ಷ್ಮಿ ಹಾಗೂ ವೆಂಕಟರಮಣ ದೇವಸ್ಥಾನಗಳನ್ನು ಕಟ್ಟಿಕೊಂಡರು. ಕ್ರಮೇಣ ವೈಷ್ಣವ ಸಂಪ್ರದಾಯದ ಕಾಶೀಮಠ ಹಾಗೂ ಗೋಕರ್ಣ ಪರ್ತಗಾಳಿ ಮಠಗಳನ್ನು ಇವರು ಸ್ಥಾಪಿಸಿಕೊಂಡರು.

ಅಡಿ ಟಿಪ್ಪಣಿ

೧. ಡಾ॥ ವಿಶ್ವನಾಥ ಕಾರ್ನಾಡ್, ತುಳುವರ ಮುಂಬಯಿ ವಲಸೆ, ಪುಟ ೩೯.

೨. ಅದೇ, ಪುಟ ೩೯.

೩. ಜಿ. ವಿ. ಜೋಶಿ, ನೋರ್ಬರ್ಟ್ ಲೋಬೊ, ಕರಾವಳಿ ಕರ್ನಾಟಕದ ಅರ್ಥ ವ್ಯವಸ್ಥೆ. ಪುಟ ೪೨.

೪. ಅದೇ, ಪುಟ ೪೨.

೫. ಅದೇ, ಪುಟ ೪೨.

೬. ಅದೇ, ಪುಟ ೪೨.

೭. ಅದೇ, ಪುಟ ೪೨.

೮. ಅದೇ, ಪುಟ ೪೨.

೯. ಅದೇ, ಪುಟ ೪೨.

೧೦. ಅದೇ, ಪುಟ ೪೩.

೧೧. ಅದೇ, ಪುಟ ೪೩.

೧೨. ಅದೇ, ಪುಟ ೪೬.

೧೩. ಅದೇ, ಪುಟ ೪೬.

೧೪. ಅದೇ, ಪುಟ ೪೭.

೧೫. ಅದೇ, ಪುಟ ೪೭.

೧೬. ಬಿ. ಸಚ್ಚಿದಾನಂದ ಹೆಗ್ಡೆ, ತುಳುನಾಡವರ ಸಮಾಜ, ಪುಟ ೮೩.

೧೭. ಅದೇ, ಪುಟ ೮೩.

೧೮. ಅದೇ, ಪುಟ ೮೪.

೧೯. ಅದೇ, ಪುಟ ೮೫.

೨೦. ಅದೇ, ಪುಟ ೮೬.

೨೧. ಅದೇ, ಪುಟ ೮೭.

ಅಧ್ಯಾಯ ೪

ಗೋಪಾಲಕೃಷ್ಣ ಪೈಯವರ 'ಸ್ವಪ್ನ ಸಾರಸ್ವತ' ಕಾದಂಬರಿಯಲ್ಲಿ ವಲಸೆ ಪ್ರಕ್ರಿಯೆ

೪.೧ ಸ್ವಪ್ನ ಸಾರಸ್ವತ ಕಾದಂಬರಿಯಲ್ಲಿ ವಲಸೆ ಪ್ರಕ್ರಿಯೆಗೆ ಕಾರಣಗಳು

೪.೨ ಸ್ವಪ್ನ ಸಾರಸ್ವತ ಕಾದಂಬರಿಯಲ್ಲಿ ವಲಸೆ ಪ್ರಕ್ರಿಯೆ: ಇಕ್ಕಟ್ಟು, ಬಿಕ್ಕಟ್ಟು

೪.೩ ವಲಸೆ ಪ್ರಕ್ರಿಯೆಯಿಂದಾಗಿ ಉಂಟಾದ ಸಾಂಸ್ಕೃತಿಕ ಪಲ್ಲಟ

ಅಧ್ಯಾಯ ೪

ಗೋಪಾಲಕೃಷ್ಣ ಪೈಯವರ 'ಸ್ವಪ್ನ ಸಾರಸ್ವತ' ಕಾದಂಬರಿಯಲ್ಲಿ ವಲಸೆ ಪ್ರಕ್ರಿಯೆ

೪.೧ ಸ್ವಪ್ನ ಸಾರಸ್ವತ ಕಾದಂಬರಿಯಲ್ಲಿ ವಲಸೆ ಪ್ರಕ್ರಿಯೆಗೆ ಕಾರಣಗಳು

ಪೈಯವರ ಸ್ವಪ್ನ ಸಾರಸ್ವತ ಕಾದಂಬರಿಯಲ್ಲಿ ವಲಸೆಗೆ ವ್ಯಕ್ತವಾಗಿರುವ ಕಾರಣಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡುತ್ತಾ ಒಟ್ಟಿಗೆ ಚರ್ಚಿಸಬಹುದು. ಈ ಕಾದಂಬರಿಯು ಪ್ರಾರಂಭವಾಗುವುದು ಗೋವೆಯಿಂದಲೇ ಅದು ವಿಟ್ಠು ಪೈ ತನ್ನ ಮೊಮ್ಮಗನಾದ ರಾಮಚಂದ್ರ ಪೈಗೆ ಕಥೆ ಹೇಳುವುದರಿಂದ ಪ್ರಾರಂಭವಾಗುತ್ತದೆ. ವ್ಯಾಪಾರದ ಸಲುವಾಗಿ ಆಗಾಗ ಗೋವೆಯ ಪಟ್ಟಣಕ್ಕೆ ಹೋಗುವುದು ನರಸಪ್ಪಯ್ಯನವರ ಪರಿಪಾಠ. ಅಲ್ಲಿ ಅವರು ಮಹಮದೀಯ ಸೈನಿಕರ ಕೆಲವು ದೌರ್ಜನ್ಯಗಳ ಬಗ್ಗೆ ಕೇಳಿದ್ದರು. ಒಂದೆರಡು ದುರ್ನಡತೆಗಳನ್ನು ಕಣ್ಣಾರೆ ನೋಡಿದ್ದರು. "ಸುಲ್ತಾನರ ಕಾಲದಲ್ಲಿ ಸಾಮಾನ್ಯರ ಬಾಳುವೆ ಕಷ್ಟಕರವಾಗಿತ್ತು. ತೆರಿಗೆಗಳು ಎರಡು ಪಟ್ಟಾಗಿದ್ದವು ಮತ್ತು ತೀಸ್‌ವಾಡಿ ಎಂಬಲ್ಲಿ ಗೌಡ ಸಾರಸ್ವತ ಬ್ರಾಹ್ಮಣನೊಬ್ಬನನ್ನು ಮುಸಲ್ಮಾನರು ಮತಾಂತರ ಮಾಡಿದ್ದರು. ಅವನ ಬಾಯಿಗೆ ಬಲಾತ್ಕಾರವಾಗಿ ಗೋಮಾಂಸ ತುರುಕಿದ್ದರು. ಇದರಿಂದ ಅವಮಾನಿತನಾಗಿ ಸಂಸಾರದ ಎಲ್ಲಾ ಸದಸ್ಯರ ಜೊತೆ ಆತ್ಮಹತ್ಯೆ ಮಾಡಿಕೊಂಡಿದ್ದ"[೧].

ಇಲ್ಲಿ ಗೋವೆಯನ್ನು ಮೊದಲು ಆಳ್ವಿಕೆ ಮಾಡುತ್ತಿದ್ದವರು ಮುಸಲ್ಮಾನರು. ಇವರು ಅಲ್ಲಿನ ಸ್ಥಳೀಯ ಜನರಿಗೆ ತೊಂದರೆಗಳನ್ನು ಕೊಡುತ್ತಿದ್ದರು. ಇದರಿಂದ ಅಲ್ಲಿದ್ದ ಪ್ರಮುಖ ಗೌಡ ಸಾರಸ್ವತ ಮನೆತನಗಳು ಪೋರ್ಚುಗೀಸರ ಸಹಾಯವನ್ನು ಬೇಡುವುದು. "ಇದಕ್ಕೆ ತಿಮ್ಮೋಜ ಎಂಬುವನು 'ನರಸಪ್ಪಯ್ಯ ಮುಸಲ್ಮಾನರನ್ನು ಓಡಿಸಿದ ಮೇಲೆ ಗೋವೆಯನ್ನು ಆಳುವ ಹಕ್ಕು ನಮ್ಮ ಕೈಗೆ ಬರುತ್ತದೆ'"[೨] ಎಂದು ಹೇಳಿದ್ದರಿಂದ ಸಾರಸ್ವತರಿಗೆ ಮುಸಲ್ಮಾನರ ಉಪಟಳದಿಂದ ತಪ್ಪಿಸಿಕೊಳ್ಳಲು ತಿಮ್ಮೋಜನೊಟ್ಟಿಗೆ ಸೇರಿ ಪೋರ್ಚುಗೀಸರಿಗೆ ಸಹಾಯ ಮಾಡಿದರು. ಇದರಿಂದಾಗಿ ಪೋರ್ಚುಗೀಸರ ಆಲ್ಬುಕರ್ಕನು ಗೋವೆಯ ಸುಲ್ತಾನರನ್ನು ಸೋಲಿಸಿದನು. ಇದರಿಂದಾಗಿ ಸುಲ್ತನರ ಅಧಿಪತ್ಯ ಗೋವೆಯಲ್ಲಿ ಕೊನೆಯಾಯಿತು. ಮುಂದೆ ಹೀಗೆ ಸಹಾಯ ಪಡೆದ ಪೋರ್ಚುಗೀಸರು ಅಲ್ಲಿನ ಸ್ಥಳೀಯ ಸಾರಸ್ವತರಿಗೆ ಸಹಾಯ ಮಾಡುವುದಕ್ಕಿಂತಲೂ ಅನೇಕ ತೊಂದರೆಗಳನ್ನು ಕೊಡಲು ಆರಂಭಿಸಿದರು.

"ಪೋರ್ಚುಗೀಸರ ಸೈನ್ಯ ಸಮುದ್ರದ ಮೇಲೆ ಮಳೆಗಾಲ ಕಳೆಯುತ್ತಿದ್ದಾಗ ತೀರದ ಒಂದು ಹಳ್ಳಿಯಿಂದ ತಮ್ಮ ಜಾತಿಯ ಇಬ್ಬರು ಹುಡುಗಿಯರನ್ನು ಅಪಹರಿಸಿ ಹಡಗಿನಲ್ಲಿರಿಸಿಕೊಂಡಿದ್ದರಂತೆ, ಅವರನ್ನು ಬಿಟ್ಟುಕೊಡಬೇಕಾದರೆ ಒಂದು ಮಂಜಿಯ ತುಂಬಾ ಅಕ್ಕಿಯನ್ನೂ, ಐವತ್ತು ಹಸುಗಳನ್ನು ಕೊಡಬೇಕೆಂದೂ ಶರತ್ತು ಇರಿಸಿದರಂತೆ. ತೀರದ

ಜನರೆಲ್ಲರೂ ಒಟ್ಟಾಗಿ ಶರತ್ತು ಪೂರೈಸಿದ ಮೇಲೆಯೇ ಆ ಹುಡುಗಿಯರನ್ನು ಬಿಡಲಾಯಿತು"[೨]. ಸಾರಸ್ವತರು ಪೋರ್ಚುಗೀಸರಿಗೆ ಸಹಾಯ ಮಾಡುತ್ತಿದ್ದಾಗಲೂ ಇಂತಹ ದೌರ್ಜನ್ಯವು ನಡೆಯುತ್ತಿತ್ತು. ಹೀಗೆ ಸಹಾಯ ಪಡೆದವರೇ ಶೋಷಣೆ ಮಾಡಲು ಪ್ರಾರಂಭಿಸಿದರು. ಆ ಮೂಲಕ ಭಯದ ವಾತಾವರಣವನ್ನು ಸೃಷ್ಟಿ ಮಾಡಿದರು.

ಮುಂದೆ ಗೋವೆಯನ್ನು ಆಲ್ಬುಕರ್ಕ್ ವಸಾಹತುವಾಗಿ ಹತೋಟಿಗೆ ತಂದುಕೊಂಡನು. ನಂತರ ಗೋವೆಯಲ್ಲಿ ಸ್ಥಿತ್ಯಂತರವೇ ಆರಂಭವಾಯಿತು. ಪೋರ್ಚುಗಲ್ಲಿನಿಂದ ವರ್ಷೇವರ್ಷ ಎರಡುವರೆಯಿಂದ ಮೂರು ಸಾವಿರ ಜನರು ಗೋವೆಗೆ ಬರತೊಡಗಿದರು. "ಯುದ್ಧಗಳಲ್ಲಿ ಸೆರೆಸಿಕ್ಕಿದ ಹಿಂದೂ ಮತ್ತು ಮಹಮ್ಮದೀಯ ಹೆಂಗಸರ ಮತಪರಿವರ್ತನೆ ಮಾಡಿ ಅವರನ್ನು ಉನ್ನತ ದರ್ಜೆಯ ಪೋರ್ಚುಗೀಸರಿಗೆ ಮದುವೆ ಮಾಡಿಸಿದರು"[೪]. ಇಲ್ಲಿ ಆ ಮುಖಾಂತರವಾಗಿ ಮುಸಲ್ಮಾನ ಹೆಂಗಸರಿಗಿಂತ ಹೆಚ್ಚು ವಂಚನೆಗೆ ಮತಾಂತರಕ್ಕೆ ಒಳಗಾದವರು ಸಾರಸ್ವತ ಹೆಣ್ಣು ಮಕ್ಕಳು.

ಜೊತೆಗೆ ಪೋರ್ಚುಗೀಸರು ರಾಜರಂತಿದ್ದುದರಿಂದ ಅವರಿಗೆ ಗುಲಾಮರು ಬೇಕು, ಗುಲಾಮರನ್ನು ಕೊಳ್ಳುವುದು, ಮಾರುವುದು, ಕೊಲ್ಲುವುದು ಎಲ್ಲಾ ನಡೆಯತೊಡಗಿದವು. ಊರ ಮಧ್ಯದ ಚೌಕಗಳಲ್ಲಿ ಗಂಡಸರನ್ನು ಹೆಂಗಸರನ್ನು ಬೆತ್ತಲೆ ನಿಲ್ಲಿಸಿ ಹ್ಹ ಹ್ಹ ಹ್ಹ ಎಂದು ಜೋರಾಗಿ ನಗತೊಡಗಿದರು. "ಕನ್ಯೆಯರ ಕನ್ಯತ್ವದ ಪರೀಕ್ಷೆ ನಡೆದ ಮೇಲೆ ಅವರನ್ನು ಕೊಳ್ಳುವುದು"[೫]. ಈ ರೀತಿಯ ದೌರ್ಜನ್ಯಗಳು ಗೋವೆಯಲ್ಲಿ ಸರ್ವೇಸಾಮಾನ್ಯವಾಗಿದ್ದವು. ಜೊತೆಗೆ ಸ್ಥಳೀಯ ಜನರಿಗೆ ತೆರಿಗೆಯನ್ನು ಹೆಚ್ಚು ಮಾಡಲಾಯಿತು.

ಇದೇ ಸಂದರ್ಭದಲ್ಲಿ ಕಾಲರಾ ರೋಗ ವಿಚಿತ್ರ ರೀತಿಯಲ್ಲಿ ಗೋವೆಯಲ್ಲಿ ಕಾಣಿಸಿಕೊಂಡಿತು. ಒಂದು ಲೆಕ್ಕದ ಪ್ರಕಾರ ಸಾಸಷ್ಟಿ ಎಂಬ ಊರಿನಲ್ಲಿ ಕಾಲರಾ ರೋಗದಿಂದ ಸತ್ತವರು ಮೂರರಲ್ಲಿ ಎರಡು ಭಾಗ ಸರಿಯಾದ ಔಷಧೋಪಚಾರವಿಲ್ಲದೇ ಪೋರ್ಚುಗೀಸರ ಉಪಟಳದಿಂದ ಜನರು ತೀರಿಕೊಂಡರು. ಇಲ್ಲಿ ಸಾರಸ್ವತರು ಔಷಧಿ ಪಡೆದುಕೊಳ್ಳಲು ಅವರು ಪೋರ್ಚುಗೀಸರ ಆಸ್ಪತ್ರೆಗೆ ಹೋಗಬೇಕು. ಆದರೆ ಪೋರ್ಚುಗೀಸರು ಅವರಿಗಲ್ಲದ ಜನರಿಗೆ ಔಷಧಿಯನ್ನು ಕೊಡುತ್ತಿರಲಿಲ್ಲ. ಕಾರಣವಿಲ್ಲದೆ ಸಾಸಷ್ಟಿಯು ಮುಂದೆ ಪೋರ್ಚುಗೀಸರ ವಶವಾಯಿತು. "ಕೋಮಿನೋ ಎಂಬ ಪೋರ್ಚುಗೀಸ್ ಅಧಿಕಾರಿ ಕುಡುಬಿಯರ ತರುಣನೊಬ್ಬನನ್ನು ಅವನು ಹೇಳಿದ್ದನ್ನು ಕೇಳಲಿಲ್ಲ ಎಂಬ ಕಾರಣಕ್ಕೆ ಬಂದೂಕು ತಂದು ಹಾಡು ಹಗಲೇ 'ಡಮಾರ್' ಎಂದು ಕೊಂದು ಬಿಟ್ಟ"[೬]. ಇದು ಪೋರ್ಚುಗೀಸರ ಸ್ವೇಚ್ಛಾಚಾರಕ್ಕೆ ಒಂದು ಉತ್ತಮ ಉದಾಹರಣೆ. ಪೋರ್ಚುಗೀಸರು ಯಾರನ್ನು ಎಲ್ಲಿ ಬೇಕಾದರೂ ಕೊಲ್ಲಬಹುದಿತ್ತು. ಆದರೆ ಇದನ್ನು ಪ್ರಶ್ನೆ ಮಾಡುವ ಹಕ್ಕು ಯಾವ ಸ್ಥಳೀಯರಿಗೂ ಇರಲಿಲ್ಲ.

"ಪೋರ್ಚುಗೀಸರ ಗವರ್ನರ್ ಇಲ್ಲದೇ ಇದ್ದಾಗ ಭಂಡಾರ ನೋಡಿಕೊಳ್ಳುತ್ತಿದ್ದ ಫೆರ್ನಾಜ್ ರೊಡ್ರಿಗಸ್ ದೆ ಕಾಸ್ಟೆಲೋ ಬ್ರಾಂಕೊ ಎಂಬ ದೊರೆಗೆ ಒಂದು ಸನ್ನದ್ದು ಬರೆದು ದೇವಾಲಯಗಳಿಗೆ ಸೇರಿದ ಭೂಮಿಯ ಆದಾಯಕ್ಕೆ ದೊರೆಗಳು ಕೈ ಹಾಕಬಾರದೆಂದು

ಕೇಳಿದ್ದುಂಟು"[೭]. ಆದರೆ ಅದಕ್ಕೆ ಪೋರ್ಚುಗೀಸರ ದೊರೆ ಕಿವಿಗೊಡದೆ ಎಲ್ಲಾ ಭಂಡಾರದ ಹಣವನ್ನು ತಮ್ಮ ಕಡೆಗೆ ಸೆಳೆದುಕೊಂಡರು. ಮುಂದೆ ಪೋರ್ಚುಗೀಸರು ಇಲ್ಲಿನ ದೇವಸ್ಥಾನಗಳನ್ನು ಕೆಡವಿ ಅಲ್ಲಿ ಚರ್ಚುಗಳನ್ನು ಎಬ್ಬಿಸುತ್ತಿರುವ ವಿಚಾರವು ರಾವುಳ ಕುಡುವ ಎಂಬ ಪಾತ್ರ ವ್ಯಕ್ತಪಡಿಸುತ್ತದೆ. "ತೀಸ್‌ವಾಡಿಗೆ ಬೆಂಕಿ ಬಿದ್ದಿದ್ದೆ, ಆ ಬೆಂಕಿ ಹತ್ತಿರದ ದೇಶಗಳಿಗೂ ಹರಡುತ್ತಾ ಇದೆ. ಕಳೆದ ಮೂವತ್ತು ಮೂವತ್ತೈದು ವರುಷಗಳಿಂದ ಪೋರ್ಚುಗೀಸರು ನಮ್ಮ ಜನರನ್ನೆಲ್ಲಾ ಕ್ರೈಸ್ತ ಮತಕ್ಕೆ ಸೇರಿಸುತ್ತಿದ್ದಾರೆ. ಬಲವಂತವಾಗಿ ಕೆಲವರನ್ನು ಪ್ರಲೋಭನೆಯ ಆಸೆಯಿಂದ ಕೆಲವರ ಮತಾಂತರ ಆಗುತ್ತಿದೆ. ದೇವಸ್ಥಾನಗಳನ್ನು ನಾಶ ಮಾಡುತ್ತಿದ್ದಾರೆ, ಆಸ್ತಿಯನ್ನೆಲ್ಲಾ ನುಂಗುತ್ತಿದ್ದಾರೆ. ನಮ್ಮ ದೇವಸ್ಥಾನಗಳನ್ನು ಕೆಡವಿ ಚರ್ಚುಗಳನ್ನು ಎಬ್ಬಿಸುತ್ತಿದ್ದಾರೆ"[೮] ಎಂಬ ಮಾತಿನಲ್ಲಿ ಪೋರ್ಚುಗೀಸರ ನಡವಳಿಕೆಗಳು ವ್ಯಕ್ತವಾಗಿ ಕೆಲವೊಂದು ಪ್ರದೇಶಗಳಲ್ಲಿ ಈ ರೀತಿಯ ವರ್ತನೆಯಿಂದಾಗಿ ಅಲ್ಲಿನ ಸ್ಥಳೀಯ ಸಾರಸ್ವತರು ತಮ್ಮ ಧರ್ಮರಕ್ಷಣೆಗೋಸ್ಕರ ಅನ್ಯ ಮಾರ್ಗವನ್ನು ಹುಡುಕಲು ಕಾರಣವಾದವು.

ಸಾಸಷ್ಟಿ ಎಂಬ ಪ್ರದೇಶದಲ್ಲಿಯೂ ಕೂಡಾ ಪೋರ್ಚುಗೀಸರು ಅಧಿಕಾರಕ್ಕೆ ಬಂದ ನಾಲ್ಕು ವರ್ಷಗಳಲ್ಲಿ ಮತಾಂತರ ಕೆಲಸ ಜೋರಾಗಿ ನಡೆಯತೊಡಗಿತು. ದೈಹಿಕ ಬಲಾತ್ಕಾರದಿಂದ, ನೈತಿಕ ದೌರ್ಬಲ್ಯದಿಂದ, ಒಳ್ಳೆಯ ಉದ್ಯೋಗಗಳ ಆಸೆಯಿಂದ ಸ್ಥಳೀಯ ಜನರನ್ನು ಸೆಳೆಯಲು ಯಶಸ್ವಿಯಾದರು. ಕೆಳಸ್ತರದ ಜನರು ಕೂಡಾ ಒಂದು ರುಮಾಲಿನ, ಒಂದು ಅಂಗಿಯ ಅಥವಾ ಇನ್ನಾವುದಾದರೂ ಒಂದು ಚಿಕ್ಕ ಪುಟ್ಟ ಬಹುಮಾನದ ಆಸೆಯಿಂದ ಕ್ರೈಸ್ತ ಧರ್ಮವನ್ನು ಸ್ವೀಕರಿಸಿದ್ದನ್ನು ಇಲ್ಲಿ ನಾವು ಪ್ರಮುಖವಾಗಿ ಗಮನಿಸಬಹುದು. ಆ ಕೆಳಸ್ತರದ ಜನರಲ್ಲಿ ಇದ್ದ ಕಡುಬಡತನವನ್ನು ನೀಗಿಸುವ ಆಸೆಯಿಂದ ಜೊತೆಗೆ ಆ ಜನರಿಗೂ ಕೂಡಾ ಇತರರಂತೆ ನಾವು ಉತ್ತಮ ಜೀವನ ನಡೆಸಬೇಕು ಎಂಬ ಹಂಬಲದಿಂದ ಕ್ರೈಸ್ತ ಧರ್ಮವನ್ನು ಸ್ವೀಕರಿಸಿದರು. ಇದು ಸಾರಸ್ವತರಿಗೆ ಹೀಗೆ ಮುಂದುವರೆದರೆ ಮುಂದೊಂದು ದಿನ ತಮ್ಮ ಜನರು ಕಾಣಸಿಗುವುದಿಲ್ಲ ಎಂಬ ಭಾವನೆ ಮೂಡಿದ್ದಂತೂ ಸ್ಪಷ್ಟ.

ಕಾವಳೆಯ ಮರ್ತು ಕಾಮತಿ ತನ್ನ ಪಕ್ಕದಲ್ಲಿದ್ದವರೊಡನೆ "ಕಿರಿಸ್ತಾನರಾಗಲು ಒಪ್ಪದವರನ್ನು ನೇಣು ಹಾಕಿಸಿ ಸಾಯಿಸಿದ್ದಾರಂತೆ"[೯] ಎಂದು ಹೇಳುವ ವಾಕ್ಯವು ಮತಾಂತರ ಗೋವೆಯಲ್ಲಿ ಹೇಗೆ ನಡೆಯುತ್ತಿತ್ತು ಎಂಬುದನ್ನು ತಿಳಿಸುತ್ತದೆ. ತೀಸ್‌ವಾಡಿಯ ಅನೇಕ ಬ್ರಾಹ್ಮಣರು ಕೂಡಾ ಮತಾಂತರದ ಉಪಟಳವನ್ನು ತಡೆಯಲಾರದೆ ತೆಂಕ ದಿಕ್ಕಿಗೆ ಹೋಗುತ್ತಿದ್ದರು.

ಪೋರ್ಚುಗೀಸರು ಒಂದು ಕೈಯಲ್ಲಿ ಬಂದೂಕನ್ನೂ ಮತ್ತೊಂದು ಕೈಯಲ್ಲಿ ಕ್ರಾಸನ್ನೂ ಹಿಡಿದುಕೊಂಡು ಬಂದಿದ್ದರು. ಬಿಜಾಪುರದ ಸುಲ್ತಾನನ ಆಳ್ವಿಕೆಯ ಕಾಲದಲ್ಲಿ ಮುಸಲ್ಮಾನರಾಗಲು ಬಲಾತ್ಕಾರವಾದರೆ ಈಗ ಕ್ರೈಸ್ತರಾಗಲು ಒತ್ತಾಯ. ಈ ಒತ್ತಾಯಕ್ಕೆ ಒಪ್ಪಲಿಲ್ಲದ ಅನೇಕ ಜನರು ಕನ್ನಡ ನಾಡಿನ ಭಾಗಕ್ಕೆ ಹೊರಡಲು ಸಿದ್ಧರಾದರು. ಜೊತೆಗೆ ಪೋರ್ಚುಗೀಸರು ಒಂದು ಸನ್ನದ್ದನ್ನು ಹೊರಡಿಸಿದರು "ಅನೇಕ ವಚನಗಳನ್ನು ನಾವು ಕೊಟ್ಟಿದ್ದೆವು. ಈ ಅವಧಿಯಲ್ಲಿ ನೀವು ನಮ್ಮ ಸತ್ಯಮತದ ಛಾಯೆಯ ಕೆಳಗೆ ಬರಬಹುದೆಂಬ

ನಂಬಿಕೆಯಿತ್ತು. ಆದರೆ ಆ ಪ್ರಕಾರ ನೀವುಗಳು ಈವರೆಗೆ ಬಾರದೇ ಹೋಗಿರುವುದರಿಂದ ನಮ್ಮ ಧರ್ಮ ಪ್ರಕಾರ ಮೂರ್ತಿ ಪೂಜೆಯು ನಾಸ್ತಿಕರ ಲಕ್ಷಣವಾಗಿರುವುದರಿಂದಲೂ ಇನ್ನು ಮುಂದೆ ನಮ್ಮ ರಾಜ್ಯದಲ್ಲಿ ನಿಮ್ಮ ದೇವಾಲಯಗಳು ಒಂದೂ ಇರಕೂಡದು"[೧೦] ಎಂಬ ಆಜ್ಞೆಯಿಂದಾಗಿ ಅಲ್ಲಿನ ಸಾರಸ್ವತ ಜನಾಂಗವು ದಿಕ್ಕು ತೋಚದಂತಹ ಸ್ಥಿತಿಗೆ ತಲುಪಿತು. ಆ ಕಾನೂನಿನ ಮುಖಾಂತರ ದೇವಸ್ಥಾನಗಳನ್ನು ನಾಶ ಮಾಡಿದರು. ಹೀಗೆ ಪೋರ್ಚುಗೀಸರು ಅಲ್ಲಿನ ಸ್ಥಳೀಯ ಸಾರಸ್ವತರ ಧಾರ್ಮಿಕ ನೀತಿನಿಯಮಗಳನ್ನು ಗಾಳಿಗೆ ತೂರಿದರು. ತಮ್ಮ ಅಧಿಕಾರದ ಮತ್ತು ಕಾನೂನಿನ ಮುಖಾಂತರ ಅಲ್ಲಿನ ಸಾರಸ್ವತರು ಯಾವುದೇ ಪ್ರತಿರೋಧವನ್ನು ತೋರ್ಪಡಿಸದಂತೆ ವ್ಯವಸ್ಥಿತ ಸಂಚೊಂದನ್ನು ಹೆಣೆದರು.

ಗೌಡ ದೇಶದಿಂದ ಆರಿಸಿ ತಂದ ವೇದೋಕ್ತ ಬ್ರಾಹ್ಮಣರಾದ ಸಾರಸ್ವತರು ಕ್ರೈಸ್ತರು ರಾಜ್ಯವಾಳುತ್ತಾರೆಂದು ನಾವು ನಮ್ಮ ಮತಧರ್ಮಗಳನ್ನು ಮರೆಯುವ ಹಾಗಿಲ್ಲ. ನಾಳೆ ಮುಸಲ್ಮಾನರು ಇದೇ ರೀತಿ ಬಲಾತ್ಕಾರ ಮಾಡಬಹುದು. ಹಾಗಾಗಿ ನಾವು ಯಾರೂ ಆ ಮತಕ್ಕೆ ಹೋಗದಂತೆ ತಡೆಯಬೇಕೆಂದು ತೀರ್ಮಾನಿಸಿದರಾದರೂ ಪೋರ್ಚುಗೀಸರ ಕಾನೂನುಗಳ ಮುಂದೆ ಏನೂ ಮಾಡಲಾಗದ ಸ್ಥಿತಿಗೆ ಸಾರಸ್ವತರು ಬಂದರು.

ಒಮ್ಮೆ ಜಗಳವಾಗಿ ಕಾಸ್ಟೆಲೊ ಎಂಬ ಸೈನಿಕನಿಗೆ ಸಾರಸ್ವತ ಸಮುದಾಯದವರು ಹೆಚ್ಚು ಪೆಟ್ಟು ಕೊಟ್ಟಿದ್ದರು. ಇದರಿಂದ ಕೆರಳಿದ ಗೋಯಸ್ ಎಂಬ ಸೈನ್ಯಾಧಿಕಾರಿ "ಆ ಬ್ರಾಹ್ಮಣರನ್ನು ಬಿಡಬಾರದು, ಅವರನ್ನೆಲ್ಲಾ ಇಲ್ಲಿಂದ ಓಡಿಸಬೇಕು. ಅವರ ಧರ್ಮದಲ್ಲಿ ಬದುಕಲು ಬಿಡಬಾರದು. ಮಕ್ಕಳು ಹುಟ್ಟಿದಾಗ, ಮದುವೆ ಮಾಡುವಾಗ, ಸತ್ತಾಗ ನಡೆಯುವ ಶವ ಸಂಸ್ಕಾರಗಳಿಗೂ ಬಿಡಬಾರದೆಂದು ಬಡಬಡಿಸಿದ" ಈತನ ಕ್ರೂರತನ, ಹಗೆತನದಿಂದಾಗಿ ಇಲ್ಲಿನ ಸಾರಸ್ವತ ಸಮಾಜ ಬಹು ಇಕ್ಕಟ್ಟಿಗೆ ಸಿಲುಕಿತು. ಗೋಯಸ್ ಮುಂದೆ ಮಠ ಗ್ರಾಮದ ಗ್ರಾಮ ಪುರುಷನ ದೇವಾಲಯವನ್ನು ನೆಲಸಮ ಮಾಡಿದನು. ಇದರಿಂದಾಗಿ ಸಾರಸ್ವತ ಬ್ರಾಹ್ಮಣರು ಏನೂ ಮಾಡಲಾಗದ ಸ್ಥಿತಿಗೆ ಬಂದರು. ಜೊತೆಗೆ ಆ ಸ್ಥಳಗಳಲ್ಲಿ ಭಾನುವಾರ ಪ್ರಾರ್ಥನೆ ಮಾಡಲು ಸಣ್ಣದಾದ ಬಿಳಿಯ ಗೋಡೆಗಳ ಚರ್ಚುಗಳು ಎದ್ದಿದ್ದವು. ಬಾರ್ದೇಶ ಎಂಬ ಹಳ್ಳಿಯಲ್ಲಿಯೂ ಕೂಡಾ ಪೋರ್ಚುಗೀಸರ ಉಪಟಳ ತಾಳಲಾರದೆ ಉತ್ತರದ ಕಡೆಗೆ ಕೆಲವು ಬ್ರಾಹ್ಮಣ ಕುಟುಂಬಗಳು ವಲಸೆ ಹೋದವು.

ಸಾಸಷ್ಟಿ ಎಂಬ ಪ್ರದೇಶದಲ್ಲಿಯೂ ಬ್ರಾಹ್ಮಣರು ತಮ್ಮ ಆಚಾರ ಬಿಡಲಾಗದೆ ಊರು ತ್ಯಜಿಸಿ ಉತ್ತರದ ಭಾಗದ ಕಡೆಗೆ ವಲಸೆ ಹೋದರು. ಆ ಪ್ರದೇಶದಲ್ಲಿದ್ದ ಕೆಲವರು ಕ್ರೈಸ್ತರಾಗಿ ಮತಾಂತರಗೊಂಡರು. ಹೀಗೆ ಮತಾಂತರಗೊಂಡವರು ತಮ್ಮ ಹಿಂದಿನ ಆಚಾರ ವಿಚಾರಗಳನ್ನು ದೇವರುಗಳನ್ನು ಮರೆತಿರಲಿಲ್ಲ. ಯಾರಿಗೂ ಕಾಣದ ಹಾಗೆ ಪೂಜೆಯನ್ನು ಗುಟ್ಟಾಗಿ ಮಾಡುತ್ತಿದ್ದರು. ಇದು ಅಲ್ಲಿನ ಧಾರ್ಮಿಕ ಸ್ಥಿತಿಯು ವಿಲಕ್ಷಣವಾಗಿ ಅಲ್ಲಿನ ಸಾರಸ್ವತರು ಒಂದು ಸಂದಿಗ್ಧ ಪರಿಸ್ಥಿತಿಗೆ ಸಿಲುಕಲು ಕಾರಣವಾಯಿತು.

ಸಾರಸ್ವತ ಬ್ರಾಹ್ಮಣನೊಬ್ಬನ ಅಣ್ಣನ ಮಗ ಕ್ರೈಸ್ತ ಹುಡುಗಿಯನ್ನು ಮದುವೆಯಾದ್ದರಿಂದ ಪೋರ್ಚುಗೀಸರು ಅವರ ಇಡೀ ಸಂಸಾರವನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡಿದರು. ಇದರಿಂದ ಅಲ್ಲಿನ ಬ್ರಾಹ್ಮಣರು ಅವರನ್ನು ಅವರ ಜಾತಿಯಿಂದ ಹೊರ ಹಾಕಿದರು. ಈ ರೀತಿಯ ಪರಿಸ್ಥಿತಿಗೆ ಹಲವು ಕುಟುಂಬಗಳು ಒಳಗಾಗಿ ಮರುಕಗೊಳ್ಳಲು ಕಾರಣವಾಯಿತು. ಅಲ್ಲಿನ ಸ್ಥಳೀಯ ಗೌಡ ಸಾರಸ್ವತ ಬ್ರಾಹ್ಮಣರ ಮಕ್ಕಳಿಗೂ ಮುಂಜಿ ಶಾಸ್ತ್ರ ಮಾಡುವುದಕ್ಕೂ ಅಂಜುವ ಪರಿಸ್ಥಿತಿಯನ್ನು ಗೋಯೆಸ್ ಉಂಟು ಮಾಡಿದನು.

ಜೊತೆಗೆ ಪೋರ್ಚುಗೀಸರ ಆಡಳಿತಕ್ಕೆ ಒಳಪಟ್ಟ ಗೋವೆಯಲ್ಲಿ ಬೇರೆ ಯಾರೇ ಜನಾಂಗದವರು ಉನ್ನತ ಅಧಿಕಾರಿಯಾದವರು ಕೂಡಾ ತಕ್ಷಣ ಕ್ರಿಶ್ಚಿಯನ್ ಆಗಬೇಕಿತ್ತು. ಆಗದಿದ್ದರೆ ಕೂಡಲೇ ಕೆಲಸದಿಂದ ತೆಗೆದು ಹಾಕಲಾಗುತ್ತಿತ್ತು. ಈ ಪರಿಸ್ಥಿತಿಗೆ ಕಾದಂಬರಿಯಲ್ಲಿ ಬರುವ ಅಣ್ಣು ಸಿನಾಯಿ ಎಂಬ ಅಧಿಕಾರಿ ಕೆಲಸ ಕಳೆದುಕೊಳ್ಳುವುದು, ಇದೇ ಕಾರಣಕ್ಕೆ ಈ ಮುಖಾಂತರ ಅಲ್ಲಿನ ಸ್ಥಳೀಯರಿಗೆ ಆರ್ಥಿಕವಾಗಿಯೂ ಏನೂ ದೊರಕಲಾರದ ಸ್ಥಿತಿಗೆ ತರುವುದು ಪೋರ್ಚುಗೀಸರ ನಿಲುವು ಆಗಿತ್ತು.

ಒಂದು ಕಡೆ ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ, ಸಾಂಸ್ಕೃತಿಕವಾಗಿಯೂ ಗೋವಾದ ಗೌಡ ಸಾರಸ್ವತರಿಗೆ ನೇರ ಮತ್ತು ಪರೋಕ್ಷ ದಬ್ಬಾಳಿಕೆಯ ಮೂಲಕ ಪೋರ್ಚುಗೀಸರು ಅಲ್ಲಿನ ಸ್ಥಳೀಯ ಜನರಿಗೆ ಕಂಟಕಪ್ರಾಯರಾದರು. ಪೋರ್ಚುಗೀಸರ ಕಾನೂನುಗಳು ಬಹಳ ಕಠಿಣವಾಗಿದ್ದವು. ಅವುಗಳಲ್ಲಿ ಬಹಳ ಮುಖ್ಯವಾದದ್ದು "ಗಂಡು ಮಕ್ಕಳಿಲ್ಲದ ಜನರು ತೀರಿಕೊಂಡರೆ ಅವರ ಆಸ್ತಿಯೆಲ್ಲಾ ರಾಜ್ಯಕ್ಕೆ ಸೇರಬೇಕು, ಆದರೆ ಹಾಗೆ ತೀರಿದವರಿಗೆ ಹೆಣ್ಣು ಮಕ್ಕಳಿದ್ದು ಅವರು ಕ್ರಿಶ್ಚಿಯನ್ನರಾಗಿ ಮತಾಂತರಗೊಂಡರೆ ಮಾತ್ರ ಆ ಆಸ್ತಿಯೆಲ್ಲವೂ ಅವರಿಗೆ ಸೇರಬಹುದು"[೧೧].

ಈ ರೀತಿಯ ಕಾನೂನುಗಳಿಂದ ಹೆಣ್ಣು ಮಕ್ಕಳ ಸ್ಥಿತಿ ಅತಂತ್ರರನ್ನಾಗಿಸಿ ಆ ಮೂಲಕ ಬೇರೆ ವಿಧಿಯೇ ಇಲ್ಲದೆ ಆ ಕುಟುಂಬದಲ್ಲಿನ ಹೆಣ್ಣು ಮಕ್ಕಳು ಮನಸ್ಸಿಲ್ಲದಿದ್ದರೂ ಕ್ರೈಸ್ತ ಮತಕ್ಕೆ ಬರುವಂತೆ ಮಾಡಲಾಗುತ್ತಿತ್ತು. ಕಾರಣ ಹೆಣ್ಣು ಮಕ್ಕಳು ಆರ್ಥಿಕವಾಗಿ ಅಬಲರಾದರೆ ಅವರ ಜೀವನ ನಿರ್ವಹಣೆ ಬಲು ಕಷ್ಟ ಎನ್ನುವುದು ಪೋರ್ಚುಗೀಸರಿಗೆ ಗೊತ್ತಿರುವ ವಿಷಯವೇ.

ಜೊತೆಗೆ ಗೋವಾದಲ್ಲಿದ್ದ ದೇವಾಲಯಗಳ ಆದಾಯವೆಲ್ಲಾ ರಾಜ್ಯದ ಬೊಕ್ಕಸಕ್ಕೆ ಹೋಗಬೇಕು. ಆದರೆ ಹಾಳು ಬಿದ್ದ ದೇವಾಲಯಗಳ ಜೀರ್ಣೋದ್ಧಾರಕ್ಕೆ ಹಣ ಸಿಗಬಾರದು, ಹಾಗೂ ಅಂಥ ಸ್ಥಳಗಳಲ್ಲಿ ಚರ್ಚುಗಳನ್ನು ಕಟ್ಟಲು ಅನುಮತಿ ನೀಡುತ್ತಿದ್ದರು. ಇಲ್ಲಿಯೂ ಕೂಡಾ ವ್ಯತಿರಿಕ್ತ ಕಾನೂನು ಬಳಕೆ ಮಾಡಲಾಗುತ್ತಿತ್ತು. ದೇವಾಲಯಗಳ ಆದಾಯ ರಾಜ್ಯ ಬೊಕ್ಕಸಕ್ಕೆ ಆದರೆ ದೇವಸ್ಥಾನದ ಜೀರ್ಣೋದ್ದಾರಕ್ಕೆ ಯಾವುದೇ ಸಹಾಯ ಹಸ್ತ ನೀಡದೇ ಆ ಸ್ಥಳಗಳಲ್ಲಿ ಚರ್ಚು ನಿರ್ಮಿಸುವ ಏಕಮುಖ ರೀತಿಯ ಕಾನೂನುಗಳು ಜಾರಿಗೆ ಬಂದವು. ಅವುಗಳನ್ನು ಯಾರು ಕೂಡಾ ಪ್ರಶ್ನಿಸುವ ಅಧಿಕಾರವಿಲ್ಲದೇ ಅಲ್ಲಿನ ಸ್ಥಳೀಯ ಜನರು ನಿರಂಕುಶ ಪ್ರಭುತ್ವಕ್ಕೆ ಒಳಗಾದರು.

ಶ್ರೀಧರ ಕಾಳೆ ಎಂಬವರು ತೀರಿಕೊಂಡಾಗ ಆ ಶವ ಸಂಸ್ಕಾರಕ್ಕೆ ದೇವಸ್ಥಾನದ ಪುರೋಹಿತ ಕೃಷ್ಣ ಶರ್ಮರು ಬಾಗವಹಿಸಕೂಡದೆಂದು ಗೋಯೆಸ್ ಎಂಬ ಸೈನ್ಯಾಧಿಕಾರಿ ಆಜ್ಞೆ ಮಾಡಿದನು. ಏಕೆಂದರೆ ಕೃಷ್ಣ ಶರ್ಮರು ಧಾರ್ಮಿಕ ವಿಧಿವಿಧಾನಗಳನ್ನು ಅನುಸರಿಸುತ್ತಾರೆ ಎಂದು ಈ ರೀತಿ ಮಾಡಲಾಯಿತು. ಹೀಗೆ ಒಬ್ಬ ಬ್ರಾಹ್ಮಣ ವ್ಯಕ್ತಿ ಸತ್ತಾಗ ಅವನ ದೇಹಕ್ಕೆ ಧಾರ್ಮಿಕ ವಿಧಿವಿಧಾನಗಳನ್ನು ಮಾಡುವಂತಿರಲಿಲ್ಲ. ಈ ರೀತಿಯ ದಬ್ಬಾಳಿಕೆಗಳು ಅಲ್ಲಿನ ಸಾರಸ್ವತರಿಗೆ ನುಂಗಲಾರದ ಬಿಸಿ ತುಪ್ಪವಾಗಿ ಮಾರ್ಪಟ್ಟಿತ್ತು. ಒಮ್ಮೊಮ್ಮೆ ಶವಸಂಸ್ಕಾರಕ್ಕೋಸ್ಕರ ಪೋರ್ಚುಗೀಸರ ಕಣ್ಣಿಗೆ ಬೀಳದಂತೆ ಒಂದು ಬಾಳೆಯ ದಿಂಡನ್ನು ಸತ್ತವನೆಂದು ತಿಳಿದು ಮಗನಿಂದ ಅದಕ್ಕೆ ವಿಧಿಪೂರ್ವಕ ಸಂಸ್ಕಾರ ಮಾಡಲಾಗುತ್ತಿತ್ತು. ಈ ರೀತಿಯ ಪರಿಸ್ಥಿತಿಗೆ ಅಲ್ಲಿನ ಜನರು ಒಳಗಾಗಿದ್ದರು.

ಕಾದಂಬರಿಯಲ್ಲಿ ಬರುವ ಕೃಷ್ಣ ಶರ್ಮರಿಗೆ ಗೋಯಸ್ ಪಂಚಮಿಯ ದಿನ ಸಂಜೆ ಮಾಂಸ ತಿನ್ನು ಎಂದು ಸಾರಸ್ವತರ ಕುಲದೇವರಾದ ಮ್ಹಾಳಶಿಮಾಯಿಯ ವಠಾರಕ್ಕೆ ತಂದು ಅವನಿಗೆ ತಿನ್ನಿಸಲು ಪ್ರಯತ್ನಿಸುವುದು, ಈ ರೀತಿಯ ವಿಷಯಗಳು ಅಲ್ಲಿ ಸರ್ವೆ ಸಾಮಾನ್ಯವಾಗಿತ್ತು. ಕುಡುಂಬಿಯರ ಬುದ್ದು ಅವನ ಕುಟುಂಬದವರೆಲ್ಲಾ ಕ್ರೈಸ್ತ ಮತಕ್ಕೆ ಮತಾಂತರ ಗೊಂಡರು. ಆದರೆ ಈತ ಮತಾಂತರಗೊಳ್ಳಲು ಬಹುಮುಖ್ಯ ಕಾರಣ ಈತನ ಬಡತನ, ಒಂದಷ್ಟು ಕಾಳುಕಡ್ಡಿ, ಮೈಗೆ ಬಟ್ಟೆ, ನಿಲ್ಲಲು ನೆಲೆ, ಎಲ್ಲಕ್ಕಿಂತ ಹೆಚ್ಚಾಗಿ ಕುಡಿಯಲು ಒಂದಷ್ಟು ಮದ್ಯ ಸಿಗುವ ಹಾಗಿದ್ದರೆ ಜಾತಿ ಕೆಟ್ಟರೆ ತಪ್ಪೇನು ಎಂಬ ವಿಚಾರ ಅವನದಾಗಿತ್ತು. ಹೀಗೆ ಹಿಂದುಳಿದವರ, ದಲಿತರ ಮತಪರಿವರ್ತನೆ ಎಂಬುದು ಸಣ್ಣ ಸಣ್ಣ ಆಸೆಗಳನ್ನು ಈಡೇರಿಸುವುದರ ಮೂಲಕ ನಡೆಯುತ್ತಿತ್ತು. ಬುದ್ದು ಜೊವಾ ದೆ ಕೋಸ್ತಾನಾಗಿ ಮತಾಂತರಗೊಂಡ ಮೇಲೆ ಹಲವು ಜನ ಮತಾಂತರಗೊಳ್ಳಲು ಹೆಚ್ಚೇನೂ ಸಮಯ ಹಿಡಿಯಲಿಲ್ಲ, ಚಪ್ಪೆಕಾರ ಸಾಂತು, ಮಾದಿಗರ ಭೈರು, ವಾದ್ಯದ ಲೋಕು, ಕುಂಬಾರರ ನಾರಪು ಮೊದಲಾದವರು ಸಂಸಾರ ಸಮೇತ ಕ್ರಿಶ್ಚಿಯನ್ನರಾದರು.

ಪೋರ್ಚುಗೀಸರ ಹಾವಳಿಯಿಂದಾಗಿ ತೀಸ್‌ವಾಡಿ ಎಂಬ ಪ್ರದೇಶದ ದೇವಸ್ಥಾನದಲ್ಲಿ ದೇವರ ಪ್ರಸಾದ ಕೊಡಲು ಯಾರೂ ಇರುತ್ತಿರಲಿಲ್ಲ. ಮುಂಜಾನೆ ಬೆಳಿಗ್ಗೆ ಗುಟ್ಟಾಗಿ ಬಂದು ಪೂಜೆ ಮುಗಿಸಿ ತಟ್ಟೆ, ತೀರ್ಥ ಎಲ್ಲವೂ ಇಟ್ಟು ಹೋಗುತ್ತಿದ್ದರು. ಭಕ್ತರು ಬಂದರೆ ತೀರ್ಥ ಪ್ರಸಾದ ತಾವೇ ಕೈ ಹಾಕಿ ತೆಗೆದುಕೊಳ್ಳಬೇಕಾಗಿತ್ತು. ನೆಮ್ಮದಿಯಿಂದ ದೇವರನ್ನು ಪ್ರಾರ್ಥಿಸಲು ಅವಕಾಶವಿರಲಿಲ್ಲ. ಸಾರಸ್ವತ ಜನರು ಭಯದಿಂದ ನಡೆದುಕೊಳ್ಳುವ ವಾತಾವರಣ ಇಡೀ ಗೋವಾದ ತುಂಬೆಲ್ಲಾ ಆವರಿಸಿತು.

ಒಮ್ಮೆ ಮದುವೆಯ ಮಂಟಪದಲ್ಲಿದ್ದ ಹೆಂಗಸರು ಮಕ್ಕಳು ಸೇರಿದಂತೆ ನಾಲ್ಕುನೂರ ಐವತ್ತು ಮಂದಿಯನ್ನು ಬಂಧಿಸಿ ಗೋವೆಯಲ್ಲಿ ಕಾರಾಗೃಹದಲ್ಲಿಡಲಾಗಿತ್ತು. "ಯಾವ ವಿಚಾರಣೆಯೂ ಮಾಡದೆ ಫಾದರ್ ಫ್ರಾನ್ಸಿಸ್ಕೊ ರಾಡ್ರಿಗಸ್ ಅವರಿಗೆ ಒಂದೋ ನೀವು ಕಿರಿಸ್ತಾನರಾಗಬೇಕು, ಇಲ್ಲವೇ ಆಜೀವ ಪರ್ಯಂತ ಕಾರಾಗೃಹದಲ್ಲಿರಬೇಕು ಎಂದು ಆಜ್ಞೆ ಕೊಟ್ಟು ಹೊರಟು ಹೋದರು"[೨]. ಈ ರೀತಿಯಲ್ಲಿಯೂ ಧಾರ್ಮಿಕ ಮುಖಂಡರ ನಿಲುವುಗಳು

ಇದ್ದಿತು. ಹೀಗೆ ಆಜ್ಞೆಗೆ ಹಾಗೂ ಕಾರಾಗೃಹದ ವಾಸಕ್ಕೆ ಹೆದರಿ ನಾನ್ನೂರ ಐವತ್ತು ಮಂದಿ ಕ್ರೈಸ್ತ ಮತ ಸ್ವೀಕರಿಸಿದರು. ಹೀಗೆ ಗೋವಾದಲ್ಲಿದ್ದ ಬಹುಸಂಖ್ಯಾತ ಸಾರಸ್ವತರೆಲ್ಲಾ ಕ್ರೈಸ್ತ ಮತವನ್ನು ವಿನಾಕಾರಣ ಒಪ್ಪಿಕೊಳ್ಳಬೇಕಾಯಿತು.

ಜೊತೆಗೆ ಈ ವೇಳೆಗೆ ಗೋವೆಗೆ ಮುದ್ರಣ ಯಂತ್ರವನ್ನು ಪೋರ್ಚುಗೀಸರು ತಂದರು. ಇದು ಬ್ರಾಹ್ಮಣರ ಹೊಟ್ಟೆಗೆ ಹೊಡೆಯುವ ಸಲುವಾಗಿ ಫರಂಗಿಗಳು ಮಾಡಿದ ಕುತಂತ್ರ ಎಂಬ ಭಾವನೆ ಸಾರಸ್ವತರಲ್ಲಿತ್ತು. ಇದಕ್ಕೆ ಕಾರಣ ಇಷ್ಟು ವರ್ಷ ಓದು ಬರಹವೆಲ್ಲಾ ಬ್ರಾಹ್ಮಣರ ಕೈಯಲ್ಲಿತ್ತು. ಕಾವಳೆ ಎನ್ನುವ ಮಠದಲ್ಲಿ ನೂರಾರು ಬ್ರಾಹ್ಮಣರು ಸಾಲಾಗಿ ಕುಳಿತು ತಾಳೆ ಗರಿಯ ಕಟ್ಟನ್ನು ಸಿದ್ಧ ಮಾಡುತ್ತಿದ್ದರು. ಈ ಮುದ್ರಣ ಯಂತ್ರದಿಂದ ಅವರೆಲ್ಲಾ ಕೆಲಸವಿಲ್ಲದೆ ಉಪವಾಸ ಬಿದ್ದು ಮತಾಂತರಗೊಳ್ಳಲಿ ಎಂಬ ಭಾವನೆ ಇವರಲ್ಲಿ ಮೂಡಿತ್ತು. ಜೊತೆಗೆ ಮುಂದೆ ಓದು ಬರಹಗಳಿಗೆ ಕೀಳು ಜಾತಿಯವರು ಬರುತ್ತಾರೆ ಇದರಿಂದ ತಮ್ಮ ವಿದ್ಯೆಗೆ ಕಂಟಕ ಪ್ರಾರಂಭವಾಯಿತು ಎಂದು ಭಾವಿಸಿಕೊಳ್ಳುತ್ತಾರೆ. ಇದು ಕೂಡಾ ವಲಸೆಗೆ ಬಹುಮುಖ್ಯ ಕಾರಣವಾಯಿತು. ಮುದ್ರಣ ಯಂತ್ರ ಬಂದುದು ಕೂಡಾ ಅಲ್ಲಿನ ಬ್ರಾಹ್ಮಣರಿಗೆಲ್ಲ ತುಂಬಾ ಯೋಚನೆಗೆ ಹಚ್ಚಿಸಿತು.

ಮುಂದೆ ಗೋವೆ, ವೆರಣೆ ಮುಂತಾದ ಕಡೆ ಪೋರ್ಚುಗೀಸರು ತಮ್ಮ ಮಕ್ಕಳು ಹಾಗೂ ಸ್ಥಳೀಯ ಕ್ರೈಸ್ತರ ಮಕ್ಕಳಿಗೆ ಅನುಕೂಲವಾಗಲಿ ಎಂದು ಶಾಲೆ ತೆರೆದರು. ಇದು ಕೂಡಾ ಮುಂದೆ ತಮ್ಮ ವೇದಾಧ್ಯಯನಕ್ಕೆ ತೊಂದರೆಯಾಗುವುದೆಂದು ಅಲ್ಲಿನ ಸಾರಸ್ವತರು ಭಾವಿಸತೊಡಗಿದರು. ಗೋವೆಯಲ್ಲಿ ಹೆಚ್ಚು ಬ್ರಾಹ್ಮಣರ ಮನೆಗಳು ಉಳಿದಿರಲಿಲ್ಲ. ಕತ್ತಲೆ ಕೋಣೆಯಲ್ಲಿ ಕಸ ಬಳಿದರೆ ಅಲ್ಲಲಿ ಉಳಿಯುವ ಹಾಗೆ ಒಂದೆರಡು ಸಂಸಾರಗಳು ಇದ್ದವು. ಹೀಗೆ ಒಂದು ಕಾಲದಲ್ಲಿ ಬ್ರಾಹ್ಮಣರ ಅಗ್ರಹಾರವಾಗಿದ್ದ ಗೋವೆ ಈಗ ಕ್ರೈಸ್ತರ ವಾಡೆಯಾದುದು ಉಳಿದ ಸಾರಸ್ವತರಿಗೆ ಭಯ ಹುಟ್ಟಿಸಿತು. ತಮ್ಮ ಜನಾಂಗ, ಧರ್ಮ, ಸಂಪ್ರದಾಯ ಎಲ್ಲಿ ಅಳಿದು ಹೋಗುತ್ತದೆಯೋ ಎಂಬ ಭಾವನೆ ಮೂಡಿತು.

ಕ್ರೈಸ್ತರಾಗಿ ಮತಾಂತರಗೊಂಡವರಿಗೂ ಅಲ್ಲಿ ಉಳಿಗಾಲವಿಲ್ಲ ಎಂಬ ಭಾವನೆ ಮೂಡಿತು. ಇದಕ್ಕೆ ಪ್ರಬಲ ಕಾರಣ ಇನ್‌ಕ್ವಿಸಿಷನ್ ಎಂಬ ಧಾರ್ಮಿಕ ಕಾನೂನು ಜಾರಿ ಮಾಡಿದ್ದು. ಇನ್‌ಕ್ವಿಸಿಷನ್ ಎಂದರೆ ನ್ಯಾಯಸ್ಥಾನ. ಇದರಲ್ಲಿ ಬಹುಮುಖ್ಯವಾಗಿ ಯೇಸುವನ್ನು ನಂಬದವರಿಗೆ ಬೇರೆ ದೇವರನ್ನು ನಂಬುವ ಕ್ರೈಸ್ತರಿಗೆ ವಿಚಾರಣೆಯಾಗಿ ಕಠಿಣವಾದ ಶಿಕ್ಷೆಯನ್ನು ವಿಧಿಸುವುದು. ಇದು ಸ್ಥಳೀಯ ಕ್ರೈಸ್ತರಿಗೆ ಭಯವನ್ನು ಹುಟ್ಟಿಸಿತು. ಕಾರಣವೆಂದರೆ ಕ್ರೈಸ್ತ ಮತಕ್ಕೆ ಮತಾಂತರಗೊಂಡ ನಂತರವೂ ಅವರು ಸ್ಥಳೀಯ ಸಂಪ್ರದಾಯ, ತಮ್ಮ ಮೂಲ ದೇವರನ್ನು ಆರಾಧಿಸುತ್ತಿದ್ದರು, ಇನ್‌ಕ್ವಿಸಿಷನ್ ಮುಖಾಂತರ ಸ್ಥಳೀಯ ಮತಾಂತರಗೊಂಡ ಕ್ರೈಸ್ತರನ್ನು ತಮ್ಮ ಧಾರ್ಮಿಕ ಚೌಕಟ್ಟಿನ ಹತೋಟಿಗೆ ತರಲು ಪೋರ್ಚುಗೀಸರು ಇದನ್ನು ಬಳಸಿದರು.

ಉನ್ನತ ದರ್ಜೆಯ ಪೋರ್ಚುಗೀಸರಿಗೆ ಇಲ್ಲಿನ ಸ್ಥಳೀಯ ಹೆಣ್ಣು ಮಕ್ಕಳನ್ನು ಮದುವೆ ಮಾಡಿಸುವುದರಿಂದ ಸ್ಥಳೀಯ ಹೆಣ್ಣು ಮಕ್ಕಳು ಕ್ರೈಸ್ತ ಧರ್ಮವನ್ನು ಸ್ವೀಕರಿಸುವಂತೆ

ಮಾಡಲಾಯಿತು. ಆಸ್ತಿ, ಸಂಪತ್ತು, ಬೇಕಾದರೆ ತಮ್ಮ ಧರ್ಮ ಸಂಪ್ರದಾಯಗಳನ್ನು ಬಿಡಬೇಕು. ಧರ್ಮ, ಸಂಪ್ರದಾಯ ಬೇಕಾದರೆ ತಮ್ಮ ಸ್ವಂತ ಸ್ಥಳ, ಸಂಪತ್ತು ಬಿಡಬೇಕು. ಈ ರೀತಿಯ ಸಂದಿಗ್ಧ ಪರಿಸ್ಥಿತಿಗೆ ಅಲ್ಲಿನ ಸ್ಥಳೀಯರು ಒಳಗಾಗುತ್ತಾರೆ. ನಂತರ ನಗ್ನ ಬೇತಾಳನ ಆಜ್ಞೆಯ ಮೇರೆಗೆ ದಕ್ಷಿಣದ ಕಡೆಗೆ ವಲಸೆ ಹೊರಡುತ್ತಾರೆ. ಪೋರ್ಚುಗೀಸರ ದಾಳಿಯಿಂದ ಕಿರಿಸ್ತಾನರಾಗಿ ಧರ್ಮ ನಂಬಿಕೆಗಳಿಗೆ ಏಟು ತಿಂದು ಒದ್ದಾಡುವ ಹಿಂದೂ ಬ್ರಾಹ್ಮಣರ ಸಮುದಾಯ ಒಂದು ಕಡೆಯಾದರೆ ಅದರ ಜೊತೆಗೆ ಶಿವಾಜಿ ಮಹಾರಾಜ ಗೆದ್ದಾಗ ಅದೇ ಗೋವಾದಿಂದ ಕ್ರೈಸ್ತರಾದ ಮಾಜಿ ಹಿಂದೂಗಳು ಸೇರಿದಂತೆ ಅನೇಕರು ಸಂದಿಗ್ಧತೆಗೆ ಸಿಲುಕುವುದು. ಹಿಂದೂ ನಂಬಿಕೆಗಳು ಕ್ರಿಶ್ಚಿಯನ್ ಪರವಾಗಿ ಪೋರ್ಚುಗೀಸರಿಂದ ದಾಳಿಗೆ ಒಳಗಾದಂತೆ ನೆಲೆ ಊರುತ್ತಿದ್ದ ಕ್ರಿಶ್ಚಿಯನ್ ನಂಬಿಕೆಗಳು ಹಿಂದೂ ರಾಜರಿಂದ ದಾಳಿಗೆ ಒಳಗಾಗುತ್ತವೆ.

ಈ ಎಲ್ಲಾ ಕಾರಣಗಳು ಸ್ವಪ್ನ ಸಾರಸ್ವತ ಕಾದಂಬರಿಯಲ್ಲಿ ವಲಸೆಯ ಪ್ರಕ್ರಿಯೆಗೆ ಕಾರಣವಾಗಿವೆ.

೪.೨ ಸ್ವಪ್ನ ಸಾರಸ್ವತ ಕಾದಂಬರಿಯಲ್ಲಿ ವಲಸೆ ಪ್ರಕ್ರಿಯೆ: ಇಕ್ಕಟ್ಟು, ಬಿಕ್ಕಟ್ಟು

ಗೌಡ ಸಾರಸ್ವತರ ವಲಸೆಯಲ್ಲಿ ಬಹಳ ಪ್ರಮುಖ ದಾರಿಯನ್ನು ತೋರಿಸುವುದು ಕಾದಂಬರಿಯಲ್ಲಿ ಬರುವ ನಗ್ನ ಬೇತಾಳನ ಪಾತ್ರ. ಇದು ಅಧ್ಯಾತ್ಮಿಕ ಸನ್ಯಾಸಿಯ ಪಾತ್ರವಾಗಿದ್ದರೂ ಗೋವೆಯಲ್ಲಿದ್ದ ಬ್ರಾಹ್ಮಣರು ಮತಾಂತರವಾಗುವುದನ್ನು ಸ್ವಲ್ಪ ಮಟ್ಟಿಗೆ ತಡೆದು ಅವರನ್ನು ದಕ್ಷಿಣಾಭಿಮುಖವಾಗಿ ವಲಸೆ ಹೋಗಲು ಪ್ರೇರೇಪಿಸುತ್ತದೆ. ಯಾರಿಗೆ ಧರ್ಮ, ನೆಲ, ಭಾಷೆಗಳ ಅಭಿಮಾನವಿದೆಯೋ ಅಂಥವರು ಗೋವೆಯನ್ನು ಬಿಟ್ಟು ಹೊರಡಬೇಕು ಎಂದು ಆಜ್ಞಾಪಿಸಿದನು. ಇದಕ್ಕೆ ಕಾರಣ ಗೋವೆಯಲ್ಲಿಯೇ ಉಳಿದರೆ ಅವರ ಮೂಲ ಧರ್ಮ, ಭಾಷೆ, ಎಲ್ಲವನ್ನೂ ಬಿಡಬೇಕಾಗುತ್ತದೆ ಎಂಬ ಉದ್ದೇಶದಿಂದ. ಈ ಕಾದಂಬರಿಯಲ್ಲಿ ಮೊದಲು ವಲಸೆ ಹೋಗುವುದು ವಿಟ್ಠು ಪೈಯವರ ಮಾವ ಅಪ್ಪಣ್ಣ ಭಟ್ಟರು. ಒಮ್ಮೆ ಅವರು ವೆರಣೆಗೆ ತಮ್ಮ ಎಲ್ಲಾ ಸಾಮಾನುಗಳು ತುಂಬಿಕೊಂಡು ಬಂದರು. ಬಂದವರಿಗೆ ಗೋವಾದ ರವಳನಾಥ ದೇವಸ್ಥಾನದ ಕಥೆ ಮುಗಿಯಿತು, ಅಲ್ಲಿಯ ಮೂರ್ತಿಯನ್ನು ಮಾಂಡೊವಿ ನದಿಗೆ ಎಸೆದಿದ್ದಾರೆ. ಅಲ್ಲಿ ಯೇಸುವಿನ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ ಎಂದು ತಮ್ಮ ದುಃಖವನ್ನು ತೋಡಿಕೊಂಡರು. ಜೊತೆಗೆ ಗೋವೆಯ ಅಧಿಕಾರಿಗಳು ಉಳಿದಂಥ ಬ್ರಾಹ್ಮಣರಿಗೆ ಒಂದು ಕ್ರೈಸ್ತರಾಗಬೇಕು ಇಲ್ಲವೇ ದೇಶಭ್ರಷ್ಟರಾಗಿ ಹೋಗಬೇಕು ಎಂದು ಆಜ್ಞೆ ಮಾಡಿದ್ದಾರೆ. ಹಾಗಾಗಿ ನಾವು ಅಲ್ಲಿಂದ ಹೊರಟೆವು ಎಂದು ಮಾಳಪ್ಪಯ್ಯನಿಗೆ ತಿಳಿಸಿದರು. ಈ ಕಥೆಯನ್ನು ಕೇಳಿದ ನಗ್ನ ಬೇತಾಳ ಅವರನ್ನು ಕರೆದುಕೊಂಡು ಹೋಗಿ ಕುಂಭಕೋಣದ ಮಠದ ಸುರೀಂದ್ರ ತೀರ್ಥ ಸ್ವಾಮಿಗಳು ವ್ಯಾಸರಾಜ ಮಠದ ಒಬ್ಬರಿಗೆ ಸನ್ಯಾಸ ದೀಕ್ಷೆ ಕೊಟ್ಟು ಇಪ್ಪತ್ತು ವರ್ಷಗಳಾಗಿವೆ, ಅವರ ಹೆಸರಲ್ಲೊಂದು ಮಠವಿದೆ. ಕಾಶಿಮಠವೆಂದು ಹೆಸರು. ಅದರ ಮೊದಲ ಸ್ವಾಮಿಗಳಾದ ಯಾದವೀಂದ್ರ ತೀರ್ಥರು ಕೇಶವೇಂದ್ರ ತೀರ್ಥರೆಂಬುವರನ್ನು ಶಿಷ್ಯರನ್ನಾಗಿ ಪಡೆದ ಮೇಲೆ ಸಮಾಧಿ ಹೊಂದಿದರೆಂದು ಕೇಳಿದ್ದೇನೆ. ಕೇಶವೇಂದ್ರ ತೀರ್ಥರು ಪ್ರಸ್ತುತ ತೆಂಕಣದಲ್ಲಿ ಹೊನ್ನಾವರದ ಆಚೆ ಭಟ್ಕಳ ಎಂಬ ಊರಲ್ಲಿದ್ದಾರೆ, ಅಲ್ಲಿಗೆ ಹೋಗಿ, ಅವರೇ ನಿಮಗೆ ದಾರಿ

ತೋರಿಸುತ್ತಾರೆ, ನಿಮ್ಮ ಕುಟುಂಬ ಅಭಿವೃದ್ಧಿಯಾಗುತ್ತದೆ ಎಂದಾಗ ಅವರ ಮಾತಿಗೆ ಬೆಲೆ ಕೊಟ್ಟು ಆ ರಾತ್ರಿ ವೆರಣೆಯಲ್ಲಿಯೇ ಉಳಿದು ಐದು ವರ್ಷದ ಮೊಮ್ಮಗನನ್ನು ಕಣ್ತುಂಬಾ ನೋಡಿ ಅಪ್ಪಣ್ಣ ಭಟ್ಟರ ಸಂಸಾರ ಭಟ್ಕಳದತ್ತ ಹೊರಟಿತು. "ಇದಕ್ಕೂ ಮೊದಲು ಅವರಿಗೆ ಇದ್ದ ಆತಂಕವೆಂದರೆ ಅಪ್ಪಣ್ಣ ಭಟ್ಟರ ಕೊನೆಯ ಮಗಳು ಮದುವೆಗೆ ಬಂದ ವಯಸ್ಸಿನವಳು. ಹೋಗಬೇಕಾದರೆ ದಾರಿಯಲ್ಲಿ ಫರಂಗಿಯವರಿಂದ ಏನು ತೊಂದರೆಯಾಗುತ್ತದೆ ಎಂಬ ಆತಂಕ. ಜೊತೆಗೆ ಅವಳನ್ನು ಹಿರಿಯ ಮಗಳಾದ ತುಳಸೀ ಬಾಯಿಯ ಮನೆಯಲ್ಲಿ ಬಿಟ್ಟು ಹೋದರೆ ತಂಗಿಯನ್ನು ಅವಳು ಚೆನ್ನಾಗಿ ನೋಡಿಕೊಳ್ಳುವುದಿಲ್ಲವೇ. ಆದರೆ ಅವಳು ಹೆಣ್ಣು ಮಗಳು. ನಾಳೆ ಅವಳ ಮದುವೆಯಾಗಬೇಕು. ಅವಳ ಕನ್ಯಾದಾನ ಮಾಡುವಂತಹ ಕರ್ತವ್ಯ ನನ್ನದು. ಇನ್ನೊಬ್ಬರಿಗೆ ಈ ಜವಾಬ್ದಾರಿಯನ್ನು ಕೊಡುವುದು ಸರಿಯಲ್ಲ ಎಂದು ಭಾವಿಸಿ ತನ್ನ ನಿರ್ಧಾರವನ್ನು ಬದಲಾಯಿಸಿದರು".[೧೩] ಜೊತೆಗೆ ಮುಂದೆ ಏನು ಮಾಡುವುದು ಎಂಬ ಸಂದಿಗ್ಧತೆಗೆ ಸಿಲುಕಿಕೊಂಡರು.

ಮುಂದೆ ಇದೇ ವೇಳೆಗೆ ವೆರಣೆಯಲ್ಲಿಯೂ ಗೋಯೆಸ್‌ನ ಮತಾಂಧತೆ ಹೆಚ್ಚಾಯಿತು. ವೆರಣೆಯ ತುಂಬೆಲ್ಲಾ ತಮಟೆ ಬಾರಿಸುತ್ತಾ ಆಜ್ಞೆ ಹೊರಡಿಸಲಾಯಿತು. ಜನರು ಗಾಬರಿಗೊಳ್ಳುವಂತೆ ಮನೆ ದೇವರ ಪೂಜೆಗೆ ಮಂತ್ರ ಹೇಳುವುದಕ್ಕೆಲ್ಲಾ ನಿಷೇಧ ಬಂದಿದೆಯೆಂದೂ ವೆರಣೆಯಲ್ಲಿರುವ ಎಲ್ಲರೂ ಕ್ರೈಸ್ತರಾಗಬೇಕು ಎಂಬ ಆಜ್ಞೆಯಿಂದ ಅಲ್ಲಿದ್ದವರೆಲ್ಲರೂ ಏನೂ ಮಾಡಲಾಗದ ಸ್ಥಿತಿಗೆ ಬಂದು ತಲುಪಿದರು. ವೆರಣೆಗೆ ಫರಂಗಿಯವರ ಸೈನ್ಯ ತಲುಪಿತು. ಅಲ್ಲಿದ್ದ ಮ್ಹಾಳಶಿಮಾಂಯಿಯ ದೇವಸ್ಥಾನವನ್ನು ನಾಶಮಾಡಲಾಯಿತು. ಆದರೆ ಅಲ್ಲಿ ಮೂರ್ತಿಯೇ ಇರಲಿಲ್ಲ. ಆ ಮೂರ್ತಿಯನ್ನು ಧಡ್ಡ ನಗ್ನ ಬೇತಾಳನ ಆಜ್ಞೆಯ ಮೇರೆಗೆ ಮೊದಲೇ ಅಲ್ಲಿಂದ ಎತ್ತಿಕೊಂಡು ಪ್ರಯೋಳದ ಕಾಡಿನಲ್ಲಿ ಬಚ್ಚಿಟ್ಟಿದ್ದನು. ನಂತರ ಆ ಕಾಡಿನಲ್ಲಿಯೇ ಆ ಮೂರ್ತಿಯನ್ನು ಪ್ರತಿಷ್ಠಾಪಿಸಿದರು.

ಮುಂದೆ ನಗ್ನ ಬೇತಾಳ ವಿಟ್ಠು ಪೈಗೆ ಆಜ್ಞಾಪಿಸಿದನು. ವಿಟ್ಠು ಪೈ ವೆರಣೆಯ ಎಲ್ಲಾ ಬ್ರಾಹ್ಮಣರ ಮನೆಗಳಿಗೂ ಹೋಗಿ ಊರು ಬಿಡುವ ನಿರ್ಧಾರವನ್ನು ತಿಳಿಸಿದ. ಹೆಚ್ಚಿನವರೆಲ್ಲಾ ಆಗಲೇ ಗಂಟು ಮೂಟೆ ಕಟ್ಟಿದ್ದರು. ಉಳಿದ ಅನೇಕ ಮಂದಿ ಉತ್ತರದ ಕಡೆಗೆ ಹೊರಟು ಹೋಗಿದ್ದರು. ನಾಳೆ ಬೆಳಗಿನ ಜಾವ ಹೊರಡುವುದು ಎಂದು ತೀರ್ಮಾನಿಸಿದ.

ಅಶ್ವತ್ಥಾಮನಂತೆ ಬೆನ್ನಿಗೆ ಶಾಪಗಳನ್ನು ಕಟ್ಟಿಕೊಂಡು ಬೆಳಗಿನ ಜಾವದಲ್ಲಿ ವಿಟ್ಠು ಪೈ ವೆರಣೆಯನ್ನು ಬಿಟ್ಟಿದ್ದರು. ಒಟ್ಟು ನಲ್ವತ್ತು ನಾಲ್ಕು ಕುಟುಂಬಗಳು, ಮೂವತ್ತು ಮೂವತ್ತೈದು ಚಕ್ಕಡಿಗಳು ಅನ್ನು ಕಾಮಾತಿ ಸಿಕ್ಕಿದ ಸಮಯದಲ್ಲಿಯೇ ಸಾಕಷ್ಟು ದಿನಸಿ ಸಾಮಾನುಗಳನ್ನು ಪಾತ್ರೆ ಪಗಡಿಗಳನ್ನು ಸೇರಿಸಿದ್ದ. ಪ್ರತಿಯೊಂದು ಮನೆಯ ಹೆಂಗಸರು ಒಡವೆಗಳನ್ನು ವಸ್ತ್ರಗಳನ್ನು ಗಂಟು ಕಟ್ಟಿ ಭದ್ರಗೊಳಿಸಿದರು. ಜೊತೆಗೆ ಎಲ್ಲಿ ಪರಂಗಿಯವರು ಬಂದು ಸಾಲಾಗಿ ನಿಲ್ಲಿಸಿ ಗುಂಡಿಕ್ಕಿ ಕೊಲ್ಲುತ್ತಾರೋ ಎಂಬ ಭಯದಿಂದಲೇ ಇದ್ದರು. ಕಾಣಕೋಣದಲ್ಲಿಯೂ ಅವರಿದ್ದಾರೆ. ಕುಕ್ಕಾಳಿಯ ತನಕವೂ ಅವರದೇ ರಾಜ್ಯ. ಆಚೆ ಮಾಜಿಗಾಯಿಯ ಸರಹದ್ದು ದಾಟುವ ತನಕ ಈ ಭೀತಿಯಿಂದ ಬಿಡುಗಡೆಯಿಲ್ಲ. ಬದುಕಿ ಉಳಿದರೆ ಮುಂದಿನ ಊರುಗಳಲ್ಲಿ ತಮ್ಮ ಜನರ ಭವಿಷ್ಯ

ನಿರ್ಧಾರವಾಗಬೇಕು ಎಂಬ ಮನಸ್ಸಿನ ತುಮುಲದಲ್ಲಿಯೇ ಅನ್ನು ಕಾಮಾತಿ ನೂರು ನೂರೈವತ್ತು ರಾಸುಗಳನ್ನು ಅವರ ಜೊತೆ ಹೊರಡಿಸಿದ್ದ. ಸಂತೆಯಲ್ಲಿ ಬೆಲ್ಲ ಮಾರುತ್ತಿದ್ದ ಮಾಧೋ ಪೋರೋಬು ನಾಲ್ಕಾರು ತರುಣರನ್ನು ಕಟ್ಟಿಕೊಂಡು ಅವುಗಳನ್ನು ಹೊಡೆಯುವ ಜವಾಬ್ದಾರಿಯನ್ನು ವಹಿಸಿಕೊಂಡಿದ್ದ. "ವಿಟ್ಠು ಪೈ ಒಂದು ಮರದ ಕೆಳಗೆ ನಿಂತು ತನ್ನವರನ್ನೇ ನೋಡಿದ. ಒಟ್ಟು ನಲವತ್ತನಾಲ್ಕು ಕುಟುಂಬಗಳು. ಇದರಲ್ಲಿ ಒಬ್ಬ ಕಮ್ಮಿಯಾದನಲ್ಲವೇ? ಯಾವಾಗಲೂ ಚಟುವಟಿಕೆಯಿಂದ ಇರುತ್ತಿದ್ದ ಒರಟು ಮುಖದ ಗುಂಗುರು ಕೂದಲಿನ ಧಡಿಯ ಆ ಧಡ್ಡ. ಇಡೀ ಸಾರಸ್ವತ ಕುಲಕ್ಕೆ ಅವನೇ ಮೂಲಪುರುಷನಂತೆ. ಎಲ್ಲದಕ್ಕೂ ಅವನನ್ನೇ ನಗ್ನ ಬೇತಾಳ ಜವಾಬ್ದಾರಿಯಾಗಿ ಮಾಡಿದ ಘೋರವಾದ ಪರಂಗಿಗಳ ಹಿಂಸೆಯಿಂದ ಸತ್ತ. ಜೊತೆಗೆ ಅಲ್ಲಿನ ಮುಗ್ಧತೆಯ ಮಕ್ಕಳನ್ನು ಕಂಡು ಈಗಿಂದೀಗ ವೆರಣೆಗೆ ಹಿಂತಿರುಗಿ ಕ್ರೈಸ್ತನಾಗಿ ಬಿಡಲೇ? ಅಲ್ಲಿ ಅಲ್ವೀರಾ ಇದ್ದಾಳೆ, ಜೀವನ ನಿರಾಳವಾಗಿ ಬಿಡುತ್ತದೆ. ಈ ದಾರಿದ್ರ್ಯ, ಈ ನೋವು, ತಮ್ಮ ಸ್ವಂತ ಸ್ಥಳ ಯಾಕೆ ಬಿಟ್ಟು ಹೋಗಬೇಕು ಎಂಬ ಭಾವನೆ ಅವನಲ್ಲಿ ಮೂಡಿತು. ಅದೇ ಸಮಯಕ್ಕೆ ಯಾವ ಪುರುಷಾರ್ಥವೂ ಇಲ್ಲದಿದ್ದರೆ ಧಡ್ಡ ಯಾಕೆ ಪ್ರಾಣ ಕೊಡಬೇಕಾಗಿತ್ತು ಎಂಬ ಅನೇಕ ಯೋಚನೆಗಳು ವಿಟ್ಠು ಪೈಯಲ್ಲಿ ಮೂಡಿತು"[೧೪].

ಮುಂದೆ ಈ ರೀತಿಯ ನೆನಪುಗಳಲ್ಲೇ ದಾರಿ ಸಾಗಿತು. ಮುಂದೆ ಒಂದು ಊರು ಸಿಕ್ಕಿತು. ಅಲ್ಲಿ ಎಲ್ಲಾ ಹೆಂಗಸರು ಅಡುಗೆ ಕೆಲಸದಲ್ಲಿ ತೊಡಗಿದರು, ಇಂತಹ ಸಂದರ್ಭದಲ್ಲಿ ಅನ್ನು ಕಾಮಾತಿ ವಿಟ್ಠೊ ಕೊಚ್ಚಿಯಲ್ಲಿ ನಮ್ಮವರು ಇದ್ದಾರಂತೆ. ನಾವು ಅಲ್ಲಿಗೆ ಹೋಗೋಣ ಎಂದನು. ಅದಕ್ಕೆ ಇವನು ಯಾವುದೇ ಉತ್ತರ ಕೊಡಲಿಲ್ಲ. ಕಾರಣ ಕೊಚ್ಚಿಯು ಬಹಳ ದೂರದ ಪ್ರದೇಶವಾಗಿತ್ತು. ಪುನಃ ಕಾಮಾತಿ ಕೊಚ್ಚಿಯಲ್ಲಿ ಮಾಳ ಪೈ ಅಂತ ವ್ಯಾಪಾರಿ ಇದ್ದಾರಂತೆ. ತುಂಬಾ ಅನುಕೂಲಸ್ಥರು. ಅವರಿಗೆ ನಮ್ಮವರನ್ನು ಕಂಡರೆ ತುಂಬಾ ಪ್ರೀತಿ, ಅಭಿಮಾನವಂತೆ ಅಂದ. ಅದಕ್ಕೆ ವಿಟ್ಠು ಪೈ ದುಃಖದಿಂದಲೇ ಆಯಿತು ಎಂದು ಉತ್ತರಿಸಿದ. ಮುಂದೆ ಕೊಚ್ಚಿಯ ಕಡೆಗೆ ಪ್ರಯಾಣ ಎಂದು ನಿರ್ಧಾರವಾಯಿತು. ಮಳೆಗಾಲದ ಮೊದಲು ನಾವು ಉಳಿದುಕೊಳ್ಳಲು ವ್ಯವಸ್ಥೆಯಾಗಬೇಕು, ನಂತರ ಕೊಚ್ಚಿಯ ದಾರಿ ಹಿಡಿಯಬಹುದು ಎಂದು ನಿರ್ಧರಿಸಿದರು. ನಂತರ ಈ ವೇಳೆಗೆ ಮತ್ತು ನಾಲ್ಕು ಕುಟುಂಬಗಳು ಮರ್ತು ಕಿಣಿಯ ನೇತೃತ್ವದಲ್ಲಿ ಬಂದು ಸೇರಿದವು. ಒಟ್ಟು ನಲ್ವತ್ತನಾಲ್ಕು + ನಾಲ್ಕು = ನಲ್ವತ್ತೆಂಟು ಕುಟುಂಬಗಳು ಒಟ್ಟಿಗೆ ಸೇರಿದವು.

ಎರಡನೆಯ ರಾತ್ರಿ ಬೇತಾಳ ಬಸದಿಯಲ್ಲಿ, ಮೂರನೇ ರಾತ್ರಿ ಮಠ ಗ್ರಾಮದಲ್ಲಿ, ಚಿನ್ನಿನಿಯಲ್ಲಿ ನಾಲ್ಕನೆಯ ರಾತ್ರಿ, ಐದನೇ ರಾತ್ರಿ ಅಸ್ನೋಲನಕ್ಕೆ ತಲುಪಿದಾಗ ತಂದಿದ್ದ ದಿನಸಿ ಎಲ್ಲವೂ ಮುಗಿಯುತ್ತಾ ಬಂದಿತು. ದವಸ ತೆಗೆದುಕೊಳ್ಳಲು ದನಕನಕ ಹೊರಗೆ ತೆಗೆಯಬೇಕಾಯಿತು. ಒಬ್ಬನೇ ಹಣ ಕೊಡುವುದು ಸುಲಭದ ಮಾತಾಗಿರಲಿಲ್ಲ. ಎಲ್ಲರಲ್ಲೂ ಬೇಡಲು ವಿಟ್ಠು ಪೈಗೆ ಮನಸ್ಸಾಗಲಿಲ್ಲ. ಆ ಸಂದರ್ಭದಲ್ಲಿ ಮರ್ತು ಕಿಣಿ ಆಯಾಯಾ ಮನೆಯವರು ಅವರವರಿಗೆ ಬೇಯಿಸಬೇಕು ಎಂದರೆ ಒಗ್ಗಟ್ಟಿನಲ್ಲಿ ಒಡಕು ಮೂಡುತ್ತದೆ ಆದುದರಿಂದ ಇರುವ ವಿಚಾರವನ್ನು ಎಲ್ಲರಿಗೂ ತಿಳಿಸುವ ಎಂದು ನಿರ್ಧರಿಸಿದರು. ಜೊತೆಗೆ ಈ ವಿಚಾರವಾಗಿ ಬೆಳಿಗ್ಗೆ ಕೇಳಿದಾಗ ಮಂಗೇಶ ಕಾಳೆ ತನ್ನಲ್ಲಿದ್ದ ಎಲ್ಲಾ ಹಣವನ್ನು ನೀಡಿ ನನ್ನ ಹತ್ತಿರ ಇರುವುದು ಇಷ್ಟು, ಮುಂದೆ ಹೋದ ಊರಲ್ಲಿ ಉದ್ಯೋಗ ಸಿಗುವ ತನಕ ತನ್ನ ಜನ ಕೈ

ಬಿಡುವುದಿಲ್ಲ ಎಂದನು. ಇದೇ ರೀತಿ ಅನೇಕರು ಹಣವನ್ನು ವಿಟ್ಠು ಪೈಗೆ ನೀಡಿದರು. ಈ ಸಂದರ್ಭದಲ್ಲಿ ಎರಡು ದಿನಗಳ ಬಳಿಕ ಕುಕ್ಕಾಳಿ ಎಂಬ ಪ್ರದೇಶಕ್ಕೆ ಬಂದಾಗ ವಿಟ್ಠು ಪೈಯ ತಂದೆ ಮಾಳಪ್ಪಯ್ಯ ತೀರಿಕೊಂಡರು. ಇದು ಮತ್ತಷ್ಟು ನೋವು ಉಂಟು ಮಾಡಿತು. ಎಲ್ಲರೂ ಸೇರಿ ಶವಸಂಸ್ಕಾರ ಮಾಡಿ ಮುಂದೆ ಬಾಲಿ ಎಂಬ ಪ್ರದೇಶಕ್ಕೆ ಬರುವ ವೇಳೆಗಾಗಲೇ ಎಲ್ಲರಲ್ಲೂ ಸಂಪೂರ್ಣ ಸೋತ ಮನಸ್ಥಿತಿಯುಂಟಾಗಿತ್ತು. ಒಂದು ಕ್ಷಣ ಎಲ್ಲಿಗೆ ಹೋಗುತ್ತಿದ್ದೇವೆ? ಏಕೆ ಹೋಗುತ್ತಿದ್ದೇವೆ? ಇದೆಲ್ಲದರ ಅರ್ಥವೇನು? ಎಂದು ಅವನಿಗೆ ತಿಳಿಯಲಿಲ್ಲ. ಜೊತೆಗೆ ಈ ಗುಂಪಿನಲ್ಲಿ ನಾಗೇಶ ಹೆಗಡೆಯ ಸಂಸಾರ ದೊಡ್ಡ ಸಂಸಾರವಾಗಿತ್ತು. ತನ್ನ ಹದಿನಾಲ್ಕರ ವಯಸ್ಸಿನ ಮಗಳ ಮೈ ನೆರೆದಿದ್ದರೂ ಅದನ್ನು ಆತ ಗುಟ್ಟಾಗಿಯೇ ಇರಿಸಿದ್ದ. ಇಂತಹ ಸಂದರ್ಭದಲ್ಲಿ ಹಣವೆಲ್ಲಾ ಖಾಲಿಯಾದ ಸಂದರ್ಭದಲ್ಲಿ ಮಂಗೇಶ ಕಾಳೆಗೆ ಹೆಚ್ಚು ಚಿಂತೆ ಹತ್ತಿತ್ತು.

ಆಗ ವಿಟ್ಠು ಪೈಯೊಡನೆ ಹತ್ತಿರದಲ್ಲಿಯೇ ಪರ್ತಗಾಳಿ ಎಂಬ ಸ್ಥಳವಿದೆ. ಅಲ್ಲಿ ನಮ್ಮವರು ಇದ್ದಾರೆ, ಅವರಿಂದ ಏನಾದರೂ ಸಹಾಯ ಪಡೆದು ಬರುತ್ತೇನೆ ಎಂದು ಹೇಳಿ ಹೊರಟನು. ಮೂರು ದಿನಗಳ ಸತತ ಪ್ರಯಾಣದಿಂದ ಅವರು ಪೋಳೆಗೆ ಬಂದು ಮುಟ್ಟಿದ್ದರು. ಪೋಳೆ ಗೋವೆಯ ಸರಹದ್ದಿನಲ್ಲಿತ್ತು. ವಿಟ್ಠು ಪೈಗೆ ಆ ಸಂದರ್ಭದಲ್ಲಿ ತನ್ನ ತಂದೆಯ ನೆನಪಾಗಿ ಕಣ್ಣೀರು ಬಂತು. ಅವರು ಸತ್ತು ಹದಿಮೂರನೇಯ ದಿವಸ. ವೆರಣೆಯಲ್ಲಿದ್ದರೆ ಶ್ರಾದ್ಧ ಮಾಡಿ ಊರಿನ ಎಲ್ಲಾ ಬ್ರಾಹ್ಮಣರಿಗೂ ಸಂತರ್ಪಣೆ ಮಾಡಿಸಿ, ಅನ್ನದಾನ, ಗೋದಾನ, ಕನಕದಾನ ಮಾಡಿ ಸದ್ಗತಿ ಒದಗಿಸಬಹುದಿತ್ತು. ಆದರೆ ಇವತ್ತು ಈಗ ನನಗೆ ಆ ಯೋಗತ್ಯೆಯು ಇಲ್ಲ. ತನ್ನಲ್ಲಿರುವುದು ಗಡಿಗೆಯಲ್ಲಿ ಮುಚ್ಚಿಟ್ಟ ಅಸ್ತಿಗಳು ಮಾತ್ರ ಎಂದು ದುಃಖಿಸಿದ. ಇಂತಹ ಸಂದರ್ಭದಲ್ಲಿ ಬೆಲ್ಲದ ಮಾಧೋ ಪೋರೋಬುವಿನ ಹೆಂಡತಿ ಆ ರಾತ್ರಿ ಒಂದು ಗಲಾಟೆ ಎಬ್ಬಿಸಿದಳು. ಅವಳ ಒಡವೆಗಳು ಕಾಣೆಯಾಗಿದ್ದವು. ಅದನ್ನು ಮಂಗೇಶ ಕಾಳೆಯೇ ಕದ್ದಿರಬೇಕು ಎಂದು ಎಲ್ಲರ ಮುಂದೆ ಜೋರು ಮಾಡಿದಳು. ಇದು ಅವರ ಒಕ್ಕೂಟದಲ್ಲಿ ಸ್ವಲ್ಪ ಮಟ್ಟಿಗೆ ಒಡಕು ಮೂಡಲು ಕಾರಣವಾಯಿತು. ಇದನ್ನು ಮನಗಂಡ ಮರ್ತು ಕಿಣಿ ಈ ಗುಂಪಿನ ನಾಯಕತ್ವವನ್ನು ವಿಟ್ಠು ಪೈ ತೆಗೆದುಕೊಳ್ಳಬೇಕು ಇಲ್ಲದಿದ್ದರೆ ಕೊಚ್ಚಿಯ ತನಕ ಮುಟ್ಟಲು ಸಾಧ್ಯವಿಲ್ಲ ಎಂದು ಮನವರಿಕೆ ಮಾಡಿ ಕೊಟ್ಟನು. ಮಾರನೆಯ ಬೆಳಿಗ್ಗೆ ಚಂದಪ್ಪ ಗೋರೆಯ ಸಣ್ಣ ಮಗುವಿಗೆ ಜ್ವರ. ಪಕ್ಕದಲ್ಲಿ ಗಂಡನು ಇರಲಿಲ್ಲ. ಮದ್ಯಾಹ್ನದ ಬಿಸಿಲಿನಿಂದಾಗಿ ಮತ್ತಷ್ಟು ಜ್ವರ ಏರಿ ಆ ಮಗು ಯಾವುದೇ ಆರೈಕೆಗೆ ಸ್ಪಂದಿಸದೆ ಸಾವನ್ನಪ್ಪಿತು, ಗೋರೆಯ ಹೆಂಡತಿಯ ಅಳು ಮುಗಿಲು ಮುಟ್ಟಿತು, ಮರ್ತು ಕಿಣಿ ಮಗುವನ್ನು ಮಣ್ಣು ಮಾಡಿದನು. ನಂತರದ ಎರಡು ದಿನಗಳಲ್ಲಿ ಮತ್ತೆರಡು ಸಾವುಗಳು ಉಂಟಾದವು. ಇದರಿಂದ ಯಾರಿಗೂ ನೆಮ್ಮದಿ ಇಲ್ಲದಾಯಿತು. ಅಂತಹ ಸಂದರ್ಭದಲ್ಲಿ ಮಂಗೇಶ ಕಾಳೆ ಬಂದು ಆ ಗುಂಪಿಗೆ ಸೇರಿದನು. ಆ ಸಂದರ್ಭದಲ್ಲಿ ಮಾಧೋ ಪೋರೋಬುವಿನ ಹೆಂಡತಿ ಒಡವೆಗಳು ಸಿಗಲಿಲ್ಲವೇ ಎಂಬ ಉದ್ಗಾರ ತೆಗೆದಳು. ಈ ಸಂದರ್ಭದಲ್ಲಿ ಮಂಗೇಶ ಕಾಳೆ ತನ್ನ ಮೇಲೆ ಒಡವೆಯ ಕಳ್ಳತನ ಬಂದದ್ದರಿಂದ ಆ ಗುಂಪಿನಿಂದ ಹೊರಹೋಗಲು ನಿರ್ಧರಿಸುತ್ತಾನೆ. ಆಗ ವಿಟ್ಠು ಪೈ ತಡೆಯುತ್ತಾನೆ. ನಂತರ ಇವರು ಬಂದು ಸೇರಿದ್ದು ಚಿಳ್ಳುಡೆಗೆ.

"ಹಸುರು ಹಸುರು ಭೂಮಿ: ಸಂತೃಪ್ತ ಜೀವನ: ಹರವಾದ ಎದೆ: ಮುಖತುಂಬಾ ಗಂಡು ಮೀಸೆ: ಥಳಥಳಿಸುವ ಕಪ್ಪು ಬಣ್ಣ: ಹೊಳೆಹೊಳೆಯುವ ಕಣ್ಣುಗಳು: ವೀರಗಾಸೆ ಹಾಕಿ ನಡೆಯುತ್ತಿದರೆ ನಲುಗುತ್ತದೇನೋ ಎಂಬ ನಡಿಗೆ: ಇದು ಕನ್ನಡ ನಾಡಂತೆ: ಇಲ್ಲಿ ಪೋರ್ಚುಗೀಸರ ಆಕ್ರಮಣವಾಗಿಲ್ಲವಂತೆ: ಬ್ರಾಹ್ಮಣರಿಗೆ ತುಂಬಾ ಮರ್ಯಾದೆಯಂತೆ: ದೇವಸ್ಥಾನಗಳನ್ನು ಕಟ್ಟಿಸಿ ಬಾಳುವೆ ಮಾಡಬಹುದಂತೆ"[೧೫] ಎಂದು ಕನ್ನಡ ನಾಡಿನ ಬಗ್ಗೆ ಕೇಳಿ ತಿಳಿದಿದ್ದ ಸಾರಸ್ವತ ಬ್ರಾಹ್ಮಣರಿಗೆ ಮಳೆಗಾಲದ ಆರಂಭದ ದಿನಗಳಲ್ಲಿ ಚಿಳ್ಳುಡೆಗೆ ಬಂದು ಮುಟ್ಟಿದ ಗೋವೆಯ ಸಾರಸ್ವತರಿಗೆ ಸಿಕ್ಕಿದ್ದು ಸೌಮ್ಯ ಸ್ವಾಗತ, ಆತ್ಮೀಯ ಉಪಚಾರ, ಜೊತೆಗೆ ವಿಜಯನಗರದ ಅರಸರ ಆಳ್ವಿಕೆಯಲ್ಲಿ ಗೋವೆ ಇದ್ದುದರಿಂದ ಕನ್ನಡ ಭಾಷೆಯ ಪರಿಚಯವೂ ಇವರಿಗಿತ್ತು.

ಚಿಳ್ಳುಡೆ ಹೊನ್ನಾವರದ ರಾಣಿಯಾದ ಚೆನ್ನ ಭೈರಾದೇವಿಯ ಕೈಯಲ್ಲಿತ್ತು. ಚಿಳ್ಳುಡೆಯಲ್ಲಿ ರತ್ನಾಕರ ನಾಯಕ ಎಂಬ ದಂಡನಾಯಕನನ್ನು ಇಟ್ಟು ಆಳುತ್ತಿದ್ದಳು. ಮುಂದೆ ಇಲ್ಲಿ ಒಂದು ಕೋಟೆಯನ್ನು ಕಟ್ಟಿಸಬೇಕು ಎಂದು ರಾಣಿ ತೀರ್ಮಾನಿಸಿದಳು. ಕಾರಣವೆಂದರೆ ಗೋವೆಯಿಂದ ಪೋರ್ಚುಗೀಸರ ದಾಳಿಯನ್ನು ತಡೆಗಟ್ಟಲು ಹಾಗೂ ಚೆನ್ನಾದೇವಿ ಪೋರ್ಚುಗೀಸರ ಬದ್ಧ ದ್ವೇಷಿಯಾಗಿದ್ದಳು.

ಸಾರಸ್ವತರು ಹೆಂಗಸರು ಮಕ್ಕಳೊಟ್ಟಿಗೆ ಒಟ್ಟಾಗಿ ಬಂದವರನ್ನು ಚಿಳ್ಳುಡೆ ಸೈನಿಕರು ನಿರಾಶ್ರಿತರು ಎಂದು ಮನವರಿಕೆ ಮಾಡಿಕೊಂಡು ಅವರಲ್ಲಿ ನಾಲ್ಕಾರು ಜನರನ್ನು ರತ್ನಾಕರ ನಾಯಕನ ಬಳಿ ಕರೆದು ತಂದರು. ಆಗ ಅವರನ್ನು ವಿಚಾರಣೆ ಮಾಡಿ "ಆಶ್ರಿತರನ್ನು ನಾವು ಕೈ ಬಿಡುವುದಿಲ್ಲ, ಅನುಕೂಲವಾದ ಏನು ಕೆಲಸ ಬೇಕಾದರೂ ಮಾಡಿ, ಕಾಳು ಮೆಣಸಿನ ವ್ಯಾಪಾರ ಇಲ್ಲಿ ದಂಡಿಯಾಗಿದೆ. ಅದಕ್ಕೆ ಕೈ ಹಾಕಿದವರು ಸೋತದ್ದು ಕಾಣೆ"[೧೬] ಎಂದು ತಿಳಿಸಿ ಅವರಿಗೆ ಆ ದಿನಕ್ಕೆ ಬೇಕಾದ ಅಕ್ಕಿ, ಕಾಯಿ, ಎಲ್ಲವನ್ನೂ ಉಗ್ರಾಣದಿಂದ ತೆಗೆದುಕೊಡಲು ಅನುಮತಿ ಮಾಡಿದನು. ಹೀಗೆ ಚಿಳ್ಳುಡೆಯಲ್ಲಿ ಸಾರಸ್ವತರ ವಾಸ ಆರಂಭವಾಯಿತು. ಮಳೆಗಾಲ ಮುಗಿಯುವವರೆಗೂ ಇಲ್ಲೇ ನಿಂತು ದಕ್ಷಿಣದ ಕೊಚ್ಚಿಯ ಕಡೆಗೆ ಸಾಧ್ಯವಾದಷ್ಟು ಬೇಗ ಹೋಗಿ ಸೇರಬೇಕು ಎಂದು ನಿರ್ಧರಿಸಿದರು. ಚಿಳ್ಳುಡೆಯಲ್ಲಿ ಕಾಳು ಮೆಣಸಿನ ವ್ಯಾಪಾರವನ್ನು ಮರ್ತು ಕಿಣಿ ಮಾಧೋ ಪೋರೋಬು ತೊಡಗಿ ಅಲ್ಲಿ ಲಾಭವನ್ನು ಗಳಿಸಿದರು. ವಿಟ್ಠು ಪೈ ಕಾರವಾರ, ಅಂಕೋಲಾ, ಹೊನ್ನಾವರ, ಮೊದಲಾದ ಕಡೆ ತಿರುಗಿ ಅಲ್ಲಿದ್ದ ಸಾರಸ್ವತರಿಂದ ಸಹಾಯವನ್ನು ಪಡೆದುಕೊಂಡನು.

ಮಳೆಗಾಲ ಕಳೆದ ಸ್ವಲ್ಪ ದಿನಗಳ ಬಳಿಕ ಚಿಳ್ಳುಡೆಯ ಸಂತೆಯಲ್ಲಿ ಹೊಗೆಸೊಪ್ಪು ವ್ಯಾಪಾರ ಮಾಡುತ್ತಿದ್ದಾಗ ದೂರದಲ್ಲಿ ಒಬ್ಬ ತೆಳ್ಳನೆಯ ಮೈಯ ಆಳನ್ನು ಕಂಡ ವಿಟ್ಠು ಪೈಗೆ ಆತನನ್ನು ಎಲ್ಲಿಯೋ ನೋಡಿದ ಹಾಗಿದೆ ಎಂದುಕೊಂಡು ಆತನನ್ನು ಕಾವಳೆಯಲ್ಲಿಯೋ? ಮಠಗ್ರಾಮದಲ್ಲಿಯೋ? ಜೊನ್ನದಲ್ಲಿಯೋ? ಎಲ್ಲಿಯೋ ನೋಡಿದ್ದೇನೆ ಎಂದು ಮರ್ತು ಕಿಣಿಯ ಹತ್ತಿರ ಈ ವಿಷಯ ಪ್ರಸ್ತಾಪಿಸಿದನು. ಮೂರು ನಾಲ್ಕು ದಿನ ಕಳೆದ ನಂತರ ಅದೇ ವ್ಯಕ್ತಿ ಸಿಕ್ಕಿದ. ಹರಿದ ಬಟ್ಟೆ, ಹಣ್ಣಾದ ಕೂದಲು, ಸೊರಗಿದ ಮೈ, ಎಪ್ಪತ್ತರ ವಯಸ್ಸಿನವನು. ಅವನನ್ನು

ಮಾತನಾಡಿಸಿ ಬಿಡುವ ಎಂದು ನಿರ್ಧರಿಸಿ ಕೊಂಕಣಿಯಲ್ಲಿ ಮಾತನಾಡಿಸಿದ. ಆಗ ಆತ ಸಪೂರ ಸಾಂತಯ್ಯ ಪೋರೋಬು ಎಂದು ತಿಳಿದು ವೆರಣೆ ಬಿಟ್ಟ ಮೇಲೆ ಮೊತ್ತ ಮೊದಲ ಬಾರಿಗೆ ವಿಟ್ಠು ಪೈ ಸಂತೋಷಪಟ್ಟನು. ಚಿಳ್ಕುಡೆಯಲ್ಲಿ ಉಳಿಯುವ ಮನಸ್ಸು ಯಾರಿಗೂ ಇರಲಿಲ್ಲ, ಕಾರಣವೆಂದರೆ ಪೋರ್ಚುಗೀಸರು ಹತ್ತಿರದಲ್ಲೇ ಇದ್ದರು. ಯಾವಾಗ ಅವರು ಈ ಕಡೆಗೆ ಅಕ್ರಮಣ ಮಾಡುತ್ತಾರೋ ಎಂಬ ಭಯ, ಜೊತೆಗೆ ವ್ಯಾಪಾರದಿಂದ ಅಂಥ ಆದಾಯವೂ ಬರುತ್ತಿರಲಿಲ್ಲ. ಮರ್ತು ಕಿಣಿ ಮೊದಲಾದವರು ಹೊಟ್ಟೆ ಪಾಡಿಗಾಗಿ ದಿನ ದಿನ ಅಲೆಯುತ್ತಿದ್ದರು. ಇದರಿಂದ ಬೇಸತ್ತು ಮಳೆಗಾಲ ಮುಗಿದಿದ್ದರಿಂದ ಶ್ರಾವಣದ ದಿನಗಳಲ್ಲಿ ನಡೆಯುವುದು ಅಷ್ಟು ಕಷ್ಟವಾಗುವುದಿಲ್ಲ. ಮುಂದಿನ ಮಳೆಗಾಲದ ವೇಳೆಗೆ ಕೊಚ್ಚಿಯನ್ನು ತಲುಪುವ ಎಂದು ನಿರ್ಧರಿಸಿಕೊಂಡರು. ಸಾಂತಯ್ಯ ಪೋರೋಬು ಈ ವಿಷಯ ಕೇಳಿ ಸ್ವಲ್ಪ ನಕ್ಕು ಕೊಚ್ಚಿ ಇಲ್ಲಿಂದ ಬಹಳ ದೂರವಿದೆ ಎಂದನು. ನಂತರ ಇವರ ಪಯಣ ಪ್ರಾರಂಭವಾಗಿ ಹೊಳೆ ದಾಟಿ ಕಾರವಾರಕ್ಕೆ ಬಂದರು. ಇಲ್ಲಿ ಒಂದರಡು ಕುಟುಂಬಗಳು ಕಾರವಾರ ಅಂಕೋಲಗಳಲ್ಲಿಯೇ ಉಳಿದುಕೊಂಡವು. ಕಾರಣವೆಂದರೆ ಇಲ್ಲಿಯೇ ಉಳಿದರೆ ಮುಂದೊಂದು ದಿನ ತಮ್ಮ ಸ್ವಂತ ಹುಟ್ಟೂರನ್ನು ನೋಡಬಹುದು ಎಂಬ ಹಂಬಲದಿಂದ ಹಾಗೂ ಹೆಚ್ಚು ದೂರ ಬಂದಿಲ್ಲ ಎಂಬ ಭರವಸೆ. ಅಲ್ಲದೆ ಇಲ್ಲಿ ಸಾರಸ್ವತರು ತುಂಬಾ ಜನರಿದ್ದಾರೆ ಎಂಬ ನಂಬಿಕೆಯಿಂದ ಅಲ್ಲೇ ಉಳಿದರು.

ಅಂಕೋಲೆಗೆ ಬಂದಾಗ ಮಂಗೇಶ ಕಾಳಿಗೆ ಜ್ವರ ಬಂದಿತ್ತು. ಕಳ್ಳತನದ ಅಪವಾದ ಬಂದಿದ್ದರಿಂದ ಆತ ಮಾತನಾಡುವುದನ್ನು ಕಡಿಮೆ ಮಾಡಿದ್ದ ಜೊತೆಗೆ ಅಂಕೋಲಾದಲ್ಲಿಯೇ ಆತ ಉಳಿದ. ಸಾಧ್ಯವಾದರೆ ಗೋಕರ್ಣದಲ್ಲಿ ಬಂದು ನಮ್ಮನ್ನು ಸೇರು ಎಂದು ಹೇಳಿ ವಿಟ್ಠು ಪೈ ಮುಂದಿನ ದಾರಿ ಹಿಡಿದ.

ಹೀಗೆ ಆದರೆ ಕೊಚ್ಚಿಗೆ ಮುಟ್ಟುವಾಗ ತಾವು ಒಂದೆರಡು ಮನೆಗಳಷ್ಟೇ ಉಳಿಯಬಹುದೇ ಎಂಬ ಭೀತಿ ಅವನಲ್ಲಿ ಆವರಿಸಿತ್ತು. ಗೋಕರ್ಣದಲ್ಲಿ ಅವರು ಹದಿನಾರು ದಿನಗಳಿದ್ದರು. ಸತ್ತವರ ಅಸ್ಥಿಗಳನ್ನೆಲ್ಲಾ ವಿಸರ್ಜಿಸಲಾಯಿತು. ಇಲ್ಲಿ ಗಿಜಿಗುಡುವ ಜನ, ಗೋವೆಯ ನೂರಾರು ಸಾರಸ್ವತರು ಇಲ್ಲಿ ಉಳಿದುಕೊಂಡಿದ್ದರು. ಆದರಿಂದಾಗಿ ಗೋಕರ್ಣದಲ್ಲಿಯೂ ತುಂಬಾ ಜನರಿದ್ದರು. ಮುಂದೆ ಗೋಕರ್ಣದಿಂದ ಕುಮಟಾಗೆ, ಕುಮಟೆಯಿಂದ ಹೊನ್ನಾವರಕ್ಕೆ ಬಂದರು. ಹೊನ್ನಾವರದ ಬಂದರಿನಲ್ಲಿ ವ್ಯಾಪಾರ ಮಾಡುತ್ತಿದ್ದ ಮುಸಲ್ಮಾನರೊಡನೆ ಮರ್ತು ಕಿಣಿ ವ್ಯಾಪಾರಕ್ಕೆ ನಿಂತು ಅವರೊಡನೆ ಆತ್ಮೀಯನಾದನು. ಹೊನ್ನಾವರದಿಂದ ಕೊಚ್ಚಿಗೆ ಅರಬರ ಘತ್ತೆಮಾರಿ ಹೋಗುತ್ತದೆ, ಅದರಲ್ಲಿ ಜಾಗವಿದೆಯಂತೆ ಅದರಲ್ಲಿ ಕೊಚ್ಚಿಗೆ ಹೋಗುವ ಎಂದು ತಿಳಿಸಿ ಮುವತ್ತೈದು ಕುಟುಂಬಗಳು ದೋಣಿ ಏರಿದವು. ಆರೇಳು ಕುಟುಂಬಗಳು ಹೊನ್ನಾವರದಲ್ಲಿಯೇ ಉಳಿದವು, ಮತ್ತೆ ಕೆಲವರು ನಾವು ನಡೆದುಕೊಂಡು ಬರುತ್ತೇವೆ ಎಂದು ತೀರ್ಮಾನಿಸಿದರು.

ಕೊಚ್ಚಿಗೆಂದು ಅವರು ಹೊರಟರು. ಬಾರಕೂರು ಬಂದರಕ್ಕೆ ಮುಟ್ಟಿದಾಗ ಮಂಗಳೂರಿನ ಕಡೆಯಿಂದ ಬಂದ ಪೋರ್ಚುಗೀಸರ ಹಡಗೊಂದು ಅವರ ಮೇಲೆ ಆಕ್ರಮಣ ಮಾಡಿತು. ಅದರಿಂದ ಧೃತಿಗೆಟ್ಟ ಸಾರಸ್ವತರು ಆ ದೋಣಿಯಿಂದ ಇಳಿದು ಬಾರಕೂರನ್ನು ಸೇರಿದರು. ಬಾರಕೂರು ಹೇಳಿ ಕೇಳಿ ದೊಡ್ಡದಾದ ಊರು. ಅಗಲವಾದ ಬೀದಿಗಳಲ್ಲಿ ನೂರಾರು ಮನೆಗಳಿದ್ದವು. ಎಲ್ಲಿ ನಿಲ್ಲುವುದು ಎಂಬ ಚಿಂತೆಯು ಅವರನ್ನು ಕಾಡಿತು. ಒಂದು ಕಡೆ ಬೀಡು ಬಿಟ್ಟರು, ಆದರೆ ಬೆಳಿಗ್ಗೆ ಸಮಯಕ್ಕೆ ಯಾವನೋ ಕಳ್ಳ ಈ ಅಲೆಮಾರಿಗಳ ತಂಡಕ್ಕೆ ಲಗ್ಗೆ ಹಾಕಿ ಅವರಲ್ಲಿದ್ದ ಒಡವೆಗಳು, ವಸ್ತ್ರಗಳನ್ನೆಲ್ಲಾ ದೋಚಿ ಪರಾರಿಯಾದನು. ಎಲ್ಲಾ ಕಡೆಯಲ್ಲೂ ಹೆಂಗಸರ ಅಳು ಮಾರ್ದನಿಸಿತು. ಯಾವ ಕಡೆ ಸಮಾಧಾನ ಪಡಿಸಲಿ ಎಂದು ವಿಟ್ಠು ಪೈಗೆ ದಿಕ್ಕೇ ತೋಚದಂತಾಯಿತು. ಈ ವೇಳೆಗೆ ಆತನ ಹೆಂಡತಿ ತುಳಸೀಬಾಯಿ ಎಲ್ಲರನ್ನೂ ಸಮಾಧಾನ ಪಡಿಸಿದಳು.

ಮೂರು ದಿನದ ಬಳಿಕ ಮರ್ತು ಕಿಣಿ ಉಳಿದ ಗಂಡಸರೊಂದಿಗೆ ಬಂದು ಸೇರಿದ. ಕಳ್ಳತನದ ವಿಚಾರ ಆತನಿಗೂ ತಿಳಿಯಿತು. ಆಗ ಆತ "ವೆರಣೆಯಿಂದ ಹೊರಟ ನಿಮ್ಮನ್ನು ಬಂದು ಸೇರುವಾಗ ನನ್ನಲ್ಲಿ ಏನಿತ್ತು? ಹೇಳು, ಹರಿದು ಹೋದ ಈ ಅರಿವೆಯ ಒಳಗಿನ ಉಡಿದಾರಕ್ಕೆ ಕಟ್ಟಲು ಒಂದು ವಸ್ತ್ರವಿರಲ್ಲಿಲ್ಲ. ನಿನ್ನ ಹೆಂಡತಿಯ ಸೀರೆಯ ತುಂಡನ್ನೇ ತೆಗೆದು ಕಟ್ಟಿಕೊಂಡವ ನಾನು, ಅದಾಗಿ ಈಗ ಐದಾರು ತಿಂಗಳಾಗಲಿಲ್ಲವೇ? ಈ ಗೇಣು ಹೊಟ್ಟೆಗೆ ಕೂಡಾ ಅನ್ನ ಬೀಳಲಿಲ್ಲವೇ? ಬಿಡು"[೧೭], ಮರೆತುಬಿಡು, ಬಾರಕೂರಿಗೆ ಆಗಾಗ ಪೋರ್ಚುಗೀಸರು ಬಂದು ಕೊಳ್ಳೆ ಹೊಡೆಯುತ್ತಿರುತ್ತಾರೆ. ನಾವು ಇಲ್ಲಿರುವುದು ಕ್ಷೇಮವಲ್ಲ, ಆದಷ್ಟು ಬೇಗ ಈ ಊರನ್ನು ಬಿಡಬೇಕು, ಅದಕ್ಕೆ ಸಿದ್ಧನಾಗು ಎಂದು ಎಚ್ಚರಿಸಿದನು.

ಕೆಲವರು ಹಠ ಹಿಡಿದು ಕುಳಿತರು. ಕೊಚ್ಚಿಯು ಬೇಡ, ಕ್ಯೊಲಾಂಡಿಯೂ ಬೇಡ, ನಾವು ಗೋವೆಗೆ ಹೋಗುತ್ತೇವೆ, ಏನಿಲ್ಲ ಅಂದರೂ ವಾಸಕ್ಕೆಂದು ಮನೆಯಿದೆ, ಧರ್ಮ ಯಾವುದಾದರೇನು? ಈಶ್ವರನ ಬದಲು ಯೇಸು ಕ್ರಿಸ್ತನೂ ಆದೀತು ಎಂದು ಅಳತೊಡಗಿದರು. ಇದಕ್ಕೆ ಕಾರಣ ಅವರು ಅನುಭವಿಸಿದ ದುಃಖ, ಸಂಕಟ, ನೋವು ಮತ್ತು ಪರಸ್ಥಳಗಳಲ್ಲಿ ಅನುಭವಿಸಿದ ಯಾತನೆ. ಗೋವೆ ಬಿಟ್ಟು ಬಂದದ್ದು ಐದಾರು ತಿಂಗಳಾಗಿದ್ದರಿಂದಲೇನೋ ಅವರಿಗೆ ಗೋವೆಯ ನೆನಪು ಮರುಕಳಿಸಿತು. ಆಗ ವಿಟ್ಠು ಪೈ ಯು ನಡೆಯಿರಿ, ಗೋವೆಯಾದರೆ ಗೋವೆಗೆ ಎಂದು ಎಲ್ಲರನ್ನೂ ಎಬ್ಬಿಸಿ ಗೋವೆಯ ಹಾದಿ ಹಿಡಿದರು. ಮುಂದೆ ಕುಂದೇಶ್ವರದ ದೇವಸ್ಥಾನಕ್ಕೆ ತಲುಪಿದರು. ಅಲ್ಲಿನ ಜನರು ಇವರು ಬ್ರಾಹ್ಮಣರೆಂದು ಗುರುತಿಸಿ ತುಂಬಾ ಹಸಿವಾದ್ದರಿಂದ ಅವರಿಗೆ ಅಕ್ಕಿ, ಬೆಲ್ಲ, ಮೊದಲಾದ ಸಾಮಾನುಗಳನ್ನು ತಂದು ಕೊಟ್ಟರು. ಹಸಿವಿನಿಂದ ಕಂಗಾಲಾದ ಜನರು ಗಬಗಬ ಎಂದು ಉಂಡರು. ಹೆಂಗಸರು ಮಕ್ಕಳು ಎಲ್ಲಾ ನಿದ್ರೆ ಹೋದರು. ಆಗ ಸಪುರ ಶಾಂತಯ್ಯ ಗಂಡಸರನ್ನು ಉದ್ದೇಶಿಸಿ "ಗೋವೆಗೆ ಮರಳುವುದು ಸಲ್ಲದ ಮಾತು, ನಾನ್ನೂರು ವರ್ಷಗಳವರೆಗೆ ನಮಗೆ ಅಲ್ಲಿಂದ ಬಹಿಷ್ಕಾರವಿದೆ. ಅಲ್ಲಿಯ ನೀರು ಕುಡಿಯಬಾರದೆಂದು ಶಾಪವಿದೆ. ಇಷ್ಟು ದೂರ ಬಂದಿದ್ದೇವೆ, ಮತ್ತೆ ಹಿಂದೆ ಹೋಗುವುದು ಸಾಧ್ಯವಾಗದ ಕೆಲಸ. ಅಲ್ಲಿಯ ತನಕ ನಡೆಯುವುದಾದೀತೇ ಎನ್ನುವ ಪ್ರಶ್ನೆ ಬಂದು, ಹೋದರೂ ನಮ್ಮ ನಮ್ಮ ಬಾವಿಯ ನೀರು ಕುಡಿಯಲು ಸಿಕ್ಕೀತೇ ಎಂಬುದು ಇನ್ನೊಂದು ಪ್ರಶ್ನೆ. ನಾವೇ

ನಂಬಿದ್ದ ನಗ್ನ ಬೇತಾಳ ಏನು ಹೇಳಿಯಾನು? ಸತ್ತ ಧಡ್ಡನ ಆತ್ಮಕ್ಕೆ ತೃಪ್ತಿಯಾದೀತೇ? ಗೋವೆಯ ದಾರಿಯಲ್ಲಿ ಈಗಲೂ ಬರುತ್ತಿರುವ ಜನರು ನಮ್ಮನ್ನು ನೋಡಿ ನಗಲಾರರೇ? ಕ್ರೈಸ್ತರಾಗಬೇಕಾದರೆ ಇಲ್ಲಿಯ ತನಕ ಏಕೆ ಬರಬೇಕಾಗಿತ್ತು?''[೧೭] ಎಂದು ತಿಳಿಸಿ ಅವರಲ್ಲಿ ಆವರಿಸಿದ ಗೋವೆಯ ಪೊರೆಯನ್ನು ತೆಗೆದನು. ಗೋವೆಗೆ ಹೋಗಲು ಸಾಧ್ಯವಿಲ್ಲ ನಾವು ತೆಂಕ ದಿಕ್ಕಿಗೆ ಹೋಗೋಣ, ಯಾರು ಯಾರು ಎಲ್ಲಿ ನಿಲ್ಲುತ್ತಾರೆ ಅವರು ಅಲ್ಲಿ ನಿಂತು ಅಲ್ಲೇ ಗೋವೆಯನ್ನು ಸೃಷ್ಟಿ ಮಾಡಲಿ, ನಗ್ನ ಬೇತಾಳ ಅವರನ್ನು ಕಾಯುತ್ತಾನೆ. ಕೊಚ್ಚಿಯ ದಾರಿ ಹಿಡಿಯೋಣ ಎಂದು ತಿಳಿಸಿದನು. ಯಾರೂ ಬೇಡ ಎನ್ನಲಿಲ್ಲ ಕೊಚ್ಚಿಯ ಕಡೆಗೆ ಎಲ್ಲರೂ ಪಯಣ ಬೆಳೆಸಿದರು.

ನಂತರ ಕುಂದಾಪುರದ ಕೊಕ್ಕರ್ಣೆಗೆ, ಬ್ರಹ್ಮಾವರಕ್ಕೆ ಬಂದು ತಲುಪಿದರು. ಕುಂದಾಪುರದಿಂದ ಹೊರಟು ಆರು ದಿನಗಳು ಸ್ನಾನ, ಪೂಜೆಗಳಿಲ್ಲದೆ, ಊಟವಿಲ್ಲದೆ, ಬದಲಾಯಿಸಲು ಉಡುಪುಗಳಿಲ್ಲದೆ ಉಡುಪಿಗೆ ಬಂದು ಸೇರಿದರು. ನಂತರ ಉಡುಪಿಯಲ್ಲಿರುವ ಕೆರೆಯಲ್ಲಿ ಸ್ನಾನ ಮಾಡಿ ಮಠದಲ್ಲಿ ನಿಶ್ಚಿಂತರಾದರು. ಮುಂದೆ ಉಡುಪಿಯಲ್ಲಿ ನೆಲೆಸಿದ ಕೊಂಕಣಿ ಬ್ರಾಹ್ಮಣರನ್ನು ಭೇಟಿ ಮಾಡಿ ಸಹಾಯವನ್ನು ಬೇಡಿದರು. ಮರ್ತು ಕಿಣಿ ಸುಮ್ಮನೆ ಕೂರಲಿಲ್ಲ. ಉಡುಪಿಯ ಪೇಟೆಯಿಂದ ಎಲ್ಲರಿಗೂ ಎರಡೆರಡು ಕಚ್ಚೆ ವಸ್ತ್ರಗಳನ್ನು, ಹೆಂಗಸರಿಗೆ ಒಂದಷ್ಟು ಸೀರೆಗಳನ್ನು ಕೊಂಡು ತಂದ. ವಿಟ್ಠು ಪೈಗೆ ಉಡುಪಿಯಲ್ಲಿಯೇ ಉಳಿಯುವ ಮನಸ್ಸು ಆಯಿತು. ಅದಕ್ಕೆ ಶಾಂತಯ್ಯ ಪೋರೋಬು ಕೊಚ್ಚಿಗೆ ಹೋಗಲೇಬೇಕು. ಅಲ್ಲಿ ಸಾರಸ್ವತರ ಸಂಖ್ಯೆ ಹೆಚ್ಚು. ಅಲ್ಲಿ ಉಳಿದರೆ ನಮಗೆ ಯಾವುದೇ ತೊಂದರೆಯಾಗದು ಎಂದು ತಿಳಿಸಿದ. ಮುಂದೆ ಹೊರಡಲು ಎಲ್ಲರೂ ಸಿದ್ಧಗೊಂಡರು. ಆ ಸಂದರ್ಭದಲ್ಲಿ ಉಡುಪಿಯಲ್ಲಿ ನೆಲೆಸಿದ ಸಾರಸ್ವತರು ಇಲ್ಲೇ ನೆಲೆ ನಿಲ್ಲಿ, ನಮ್ಮದೇಯಾದ ಒಂದು ದೇವಸ್ಥಾನ ಕಟ್ಟಿಸೋಣ ಎಂದು ಹೇಳಿದರು. ಆಗ ಇವರು ನಾವು ಉಳಿಯ ಬಂದವರಲ್ಲ. ನಾಲ್ಕು ದಿನ ಎಂದೆವು. ದೀಪಾವಳಿ ಹತ್ತಿರ ಬಂತು, ಇನ್ನು ನಿಲ್ಲುವುದು ಸರಿಯಲ್ಲ. ಬೇಕಾದರೆ ನಮ್ಮವರಲ್ಲಿ ಕೆಲವೊಂದು ಕುಟುಂಬಗಳು ಇಲ್ಲಿಯೇ ನಿಲ್ಲುತ್ತವೆ. ಅವರಿಗೆ ಸಹಾಯ ಮಾಡಿ ಎಂದು ತಿಳಿಸಿ ಹೊರಟರು. ಹೀಗೆ ಹೊರಟ ನಂತರ ಉದ್ಯಾವರಕ್ಕೆ ಬಂದರು. ಅಲ್ಲಿ ಮಾರಮ್ಮನ ಗುಡಿಯೊಂದು ಇತ್ತು. ಇದಕ್ಕೆ ಯಾರು ಕೂಡಾ ಪೂಜೆ ಮಾಡುತ್ತಿರಲಿಲ್ಲ. ಆಗ ಶಾಂತಯ್ಯ ಪೋರೋಬು ಬ್ರಾಹ್ಮಣನಾಗಿ ಪೂಜೆ ಮಾಡಲಿಲ್ಲ ಎಂದರೆ ಹೇಗೆ ಎಂದು ಹೇಳಿ ಪೂಜೆ ಮಾಡಿ ಅಲ್ಲಿಯೇ ಒಂದು ಕುಟುಂಬ ಉಳಿಯುವಂತಾಯಿತು. ಆ ಕುಟುಂಬವೇ ಬಾಬ್ಬಂಟಿ ಕುಟುಂಬ ಎಂದು ಹೆಸರು ಪಡೆಯಿತು. ಆ ಊರಿನ ಕೆಲವರು ವಿಟ್ಠು ಪೈಗೆ ನೀವು ಇಲ್ಲಿ ನಿಲ್ಲಿ ಯಾವುದೇ ರೀತಿಯ ಯುದ್ಧದ ಭಯವಿಲ್ಲ. ದೇವಿಯ ಕೃಪೆಯಿಂದಾಗಿ ಮಳೆಬೆಳೆಗೆ ತೊಂದರೆಯಿಲ್ಲ ಎಂದರು. ಅದಕ್ಕೆ ಒಪ್ಪದೆ ವಿಟ್ಠು ಪೈ ಮೊದಲಾದವರು ಕೊಚ್ಚಿಯ ಮಾರ್ಗದ ಕಡೆಗೆ ಹೆಜ್ಜೆ ಹಾಕಿದರು.

ನಂತರ ಬಂದು ಸೇರಿದ್ದು ಮೂಲಿಕೆ ಎಂಬ ಪ್ರದೇಶಕ್ಕೆ. ಇಲ್ಲಿಗೆ ಬಂದಾಗ ನಾಗೇಶ ಹೆಗಡೆಯ ಹುಚ್ಚು ಹೆಚ್ಚಾಯಿತು, ಇದ್ದಕ್ಕಿದ್ದಂತೆ ಒಂದು ರಾತ್ರಿ ಎದ್ದು ಭಯಂಕರವಾದ ಯುದ್ಧ ನಡೆಯುತ್ತಿದೆ... ಏನು ಬೆಂಕಿ, ಏನು ಅಬ್ಬರ? ಧಡ್ಡನನ್ನು ನೋಡೋ ಎಂದು ಕಿರುಚುತ್ತಾ ಕತ್ತಲೆಯ ದಾರಿ ಬಹಳ ಪರಿಚಯವಿದ್ದಂತೆ ಕಿರಿದಾದ ರಸ್ತೆಯ ಮೇಲೆ ಹೊಳೆಯ ಕಡೆಗೆ ಹೋಗಿ

ಹೊಳೆಗೆ ದುಡುಮ್ಮನೆ ಜಿಗಿದ. ಅಲ್ಲಿಯೇ ಇದ್ದ ನಾವಿಕರು ಅವನನ್ನು ರಕ್ಷಿಸಿದರು. ಮೂರು ದಿನಗಳ ಮೂಲಿಕೆಯ ವಾಸವನ್ನು ವಿಟ್ಠು ಪೈ ಮುಂತಾದವರಿಗೆ ನರಕ ಸದೃಶ ಮಾಡಿ ಬಿಟ್ಟ. ವಿಟ್ಠು ಪೈ ಯಾರಾದರೂ ಸಾರಸ್ವತರು ಈ ಮೂಲಿಕೆಯಲ್ಲಿ ವಾಸವಾಗಿದ್ದಾರೆಯೇ ಎಂದು ವಿಚಾರಿಸಿಕೊಂಡು ಬಂದಾಗ ಧಾಕ್ಟೊ ಕಾಮಾತಿಯ ಮಗ ರಾಯಪ್ಪ ಕಾಮಾತಿಯ ಪರಿಚಯವಾಗುತ್ತದೆ. ಗೋವೆಯಲ್ಲಿ ಪೋರ್ಚುಗೀಸರ ದಬ್ಬಾಳಿಕೆ ಆರಂಭವಾದ ತಕ್ಷಣ ಗೋವೆಯಲ್ಲಿ ತಮಗೆ ಇದ್ದ ಆಸ್ತಿಯನ್ನೆಲ್ಲಾ ಮಾರಿ ದಕ್ಷಿಣಕ್ಕೆ ಬಂದು ನೆಲೆಸಿದವರು ಧಾಕ್ಟೊ ಕಾಮಾತಿ ಕುಟುಂಬದವರು. ಇವರು ವಿಟ್ಠು ಪೈಗೆ ಹತ್ತಿರದ ರಕ್ತ ಸಂಬಂಧಿಗಳು ಆಗಿದ್ದರು. ನಾಗೇಶ ಹೆಗಡೆಯ ಹುಚ್ಚಿನ ವಿಚಾರವನ್ನು ರಾಯಪ್ಪ ಕಾಮಾತಿಗೆ ತಿಳಿಸಿ ಅವರಿಗೆ ಸ್ವಲ್ಪ ಬದುಕು ನಿರ್ವಹಿಸಲು ಸಹಾಯ ಹಸ್ತವನ್ನು ಬೇಡುತ್ತಾನೆ. ಜೊತೆಗೆ ರಾಯಪ್ಪ ನಿನ್ನ ಕುಟುಂಬದವರು ಎಂದಾದರೂ ಗೋವೆಗೆ ಹೋದಾಗ ಅವರನ್ನು ಸಹಾ ಜೊತೆಗೆ ಕರೆದುಕೊಂಡು ಹೋಗಲು ನೀನು ನಿನ್ನ ಮಕ್ಕಳಿಗೆ ತಿಳಿಸು. ಇವರ ಜವಾಬ್ದಾರಿ ನಿನ್ನದು ಎಂದು ತಿಳಿಸಿ ನಾಗೇಶ ಹೆಗಡೆಯ ಮಗನಾದ ಪಾಂಡು ಹೆಗಡೆಯ ಕೈಯಲ್ಲಿ ಒಂದಿಷ್ಟು ದಕ್ಷಿಣೆಯನ್ನಿಟ್ಟು ಅಲ್ಲಿಂದ ಹೊರಡುತ್ತಾನೆ. ಹೀಗೆ ಮೂಲಿಕೆಯಲ್ಲಿ ಒಂದು ಕುಟುಂಬ ನೆಲೆ ನಿಲ್ಲುತ್ತದೆ.

ಎರಡು ದಿನಗಳ ಬಳಿಕ ಅವರು ಮಂಗಳೂರು ಮುಟ್ಟಿದ್ದರು. ಕೂಳೂರು ಹೊಳೆ ದಾಟಿದ ಮೇಲೆ ಅವರಿಗೆ ಒಂದು ಸುದ್ದಿ ಸಿಕ್ಕಿತು. ಅದೆಂದರೆ ಮಂಗಳೂರಿನ ಮೇಲೆ ಕ್ಯಾಪ್ಟನ್ ರಾಡ್ರಿಗಸ್ ಎಂಬ ಪೋರ್ಚುಗೀಸನ ಸೈನ್ಯವೊಂದು ಮುತ್ತಿಗೆ ಹಾಕಿದೆ, ಊರಿಗೆ ಬೆಂಕಿ ಹಾಕಿದೆ ಎಂದು. ಇದರಿಂದ ಸಾರಸ್ವತರಿಗೆ ದಿಕ್ಕೇ ತೋಚದಾಯಿತು. ಕೂಳೂರಿನ ಜನ ಆನೆಕಾಲು ರೋಗಕ್ಕೆ ತುತ್ತಾಗಿ ನರಳುತ್ತಿದ್ದರು. ಇದನ್ನು ಕಂಡು ಮತ್ತಷ್ಟು ಭೀತಿ ಇವರಲ್ಲಿ ಮನೆಮಾಡಿತು. ಈ ಸಂದರ್ಭದಲ್ಲಿ ಆ ಊರಿನವರು ನೀವು ಇಲ್ಲಿ ನಿಲ್ಲಬೇಡಿ ಮೂಂದೆ ಚೌಟರ ರಾಣಿಯೊಬ್ಬಳ ದೇಶವಿದೆ. ಅದರ ಹೆಸರು ಉಳ್ಳಾಲವೆಂದು, ಉಳ್ಳಾಲದ ಆಚೆ ಮಂಜೇಶ್ವರ ಅಂತ ಊರಿದೆ ಅಲ್ಲಿ ನಿಮ್ಮ ಜನ ತುಂಬಾ ಇದ್ದಾರೆ, ಜೊತೆಗೆ ನಿಮ್ಮವರಿಗಾಗಿ ಒಂದು ಕಾರಣಿಕ ದೇವಸ್ಥಾನವು ಇದೆ. ಹೋಗಿ ಅಲ್ಲಿ ನೆಲೆಸಿ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೆಲವೊಬ್ಬರು ಇಲ್ಲಿಯೂ ಕೂಡಾ ಸಾರಸ್ವತರು ಹೆಚ್ಚಿದ್ದಾರೆ. ನಾವು ಇಲ್ಲೇ ನೆಲೆಸುವ ಎಂದು ತಿಳಿಸಿದರು. ಆದಕ್ಕೆ ವಿಟ್ಠು ಪೈ ಒಪ್ಪಲಿಲ್ಲ. ಕಾರಣವೆಂದರೆ ಇಲ್ಲಿಯ ನೀರು ಒಳ್ಳೆಯದಲ್ಲ, ಹಾಗೂ ಪೋರ್ಚುಗೀಸರ ಹಾವಳಿಯು ಇದೆ, ಹಾಗಾಗಿ ಬೇಡ ಎಂದ. ಅದಕ್ಕೆ ಕೆಲವರು ನನ್ನ ಹೆಂಡತಿಯ ತವರಿನವರು ಇಲ್ಲೇ ಇದ್ದಾರಂತೆ ಎಂದು ಪುಸಲಾಯಿಸಿದರು. ಅದಕ್ಕೆ ವಿಟ್ಠು ಪೈ ಒಪ್ಪಲಿಲ್ಲ. ಮುಂದೆ ಕೊಚ್ಚಿಯ ಕಡೆಗೆ ಹೋಗೋಣ ಬನ್ನಿ ಎಂದನು. ಆಗ ಸಾಂತಯ್ಯ ಪೋರೋಬು ನೀರಿನ ಋಣ ಎಲ್ಲಿದೆಯೆಂದು ಯಾರಿಗೆ ಗೊತ್ತು, ಇರಲಿ ಬಿಡು ಎಂದನು. ಜೊತೆಗೆ "ಬೆಕ್ಕುಗಳು ದಾರಿ ಸವೆಸುವ ರೀತಿ ಗೊತ್ತಾ ನಿನಗೆ? ದಾರಿ ಸಾಗುತ್ತಿದ್ದಂತೆ ಗುರುತಿಗಾಗಿ ಒಂದೊಂದು ಕಲ್ಲು ಇಟ್ಟು ಹೋಗುತ್ತವಂತೆ. ಹಿಂದೆ ಬರಲು ಆ ಕಲ್ಲುಗಳ ಜಾಡು ಹಿಡಿದೇ ಮನೆ ಸೇರುತ್ತವೆ. ನಾಗ್ಡೊ ಬೇತಾಳ ಅದಕ್ಕಾಗಿಯೇ ಪ್ರತಿ ಊರಲ್ಲೂ ಒಂದೊಂದು ಕುಟುಂಬದವರು ಬಿಟ್ಟು ಹೋಗಿ ಎಂದು ಹೇಳಿರಬೇಕಲ್ಲ"[೧೯] ಎಂದು ತಿಳಿಸಿದರು. ಇದರಿಂದಾಗಿ ಕೆಲವೊಂದು ಕುಟುಂಬಗಳು ಕೂಳೂರಿನಲ್ಲಿ ವಾಸ ಮಾಡತೊಡಗಿದವು. ಹೀಗೆ ಸಾರಸ್ವತರು

ಗೋವೆಯಿಂದ ಕೊಳೂರಿನ ತನಕ ಒಂದೊಂದು ಊರಿನಲ್ಲಿ ಒಂದೆರಡು ಕುಟುಂಬಗಳು ನೆಲೆಗೊಂಡವು.

ಮುಂದೆ ಮಂಗಳೂರಿಗೆ ಬಂದಾಗ ಅವರಿಗೆ ಮಲಗಲು ಯಾವುದೇ ಉತ್ತಮ ಸ್ಥಳ ದೊರಕಲಿಲ್ಲ. ಆ ಸಂದರ್ಭದಲ್ಲಿ ಬಂದು ಮಣ್ಣಗುಡ್ಡೆಯ ಮೇಲೆ ಎಲ್ಲರೂ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಒಬ್ಬ ಬಾಲಕ ಕಳ್ಳತನ ಮಾಡಲು ಬಂದು ಮರ್ತು ಕಿಣಿಗೆ ಸಿಕ್ಕಿ ಬಿದ್ದನು. ಈ ಮಂಗಳೂರಿನ ಸಹವಾಸ ಬೇಡ ಎಂದು ನಿರ್ಧರಿಸಿ ಉಳ್ಳಾಲದ ಕಡೆಗೆ ಪ್ರಯಾಣ ಬೆಳೆಸಿದರು. ದಕ್ಷಿಣ ದಿಕ್ಕು ಮತ್ತಷ್ಟು ಅವರಿಗೆ ಹೆದರಿಕೆ ಹುಟ್ಟಿಸುವಂತಿತ್ತು. ಕಾರಣವೆಂದರೆ ವಿಶಾಲವಾದ ನದಿ. ಅದನ್ನು ದಾಟಬೇಕಾದರೆ ದೋಣಿಗಳಿಂದಲೇ ದಾಟಬೇಕು. ಪಶ್ಚಿಮದಲ್ಲಿ ನದಿ ಸಮುದ್ರಕ್ಕೆ ಸೇರುವ ಜಾಗದಲ್ಲಿ ಫರಂಗಿಗಳ ದೊಡ್ಡ ಹಡಗುಗಳು, ಜೊತೆಗೆ ಫಿರಂಗಿಗಳು. ನದಿ ದಾಟಲು ಹೋದರೆ ಆ ಫಿರಂಗಿಗಳಿಂದ ಗುಂಡಿನ ಸುರಿಮಳೆ ಬೀಳುತ್ತದೆ, ಎದುರು ದಡದಲ್ಲಿ ಚೌಟರ ರಾಣಿ ಅಬ್ಬಕ್ಕ ದೇವಿಯ ಸೈನ್ಯ ಕಾಯುತ್ತಿದೆ. ದೋಣಿಯಲ್ಲಿ ಬರುವವರೆಲ್ಲಾ ತಮ್ಮ ವೈರಿಗಳೇ ಎಂದು ತಿಳಿದುಕೊಂಡಿದ್ದಾರೆ. ಹಾಗಾಗಿ ಆ ಕಡೆಯಿಂದಲೂ ಗುಂಡುಗಳು ಬರುತ್ತವೆ. ನಾವು ನಿಮ್ಮನ್ನು ಕರೆದುಕೊಂಡು ಹೋಗುವುದಿಲ್ಲ ಎಂದು ತಿಳಿಸಿದರು ದೋಣಿ ನಡೆಸುವವರು. ಕೊನೆಗೆ ಮರ್ತು ಕಿಣಿ ಅವರನ್ನು ಉಳ್ಳಾಲದ ತೀರ ಪ್ರದೇಶ ಸೇರಿದರಾಯಿತು ಎಂದು ತೀರ್ಮಾನಿಸಿ ರಾತ್ರಿಯಾಗುವವರೆಗೂ ಅಲ್ಲಿಯೇ ಕಾದು ಕುಳಿತರು. ರಾತ್ರಿಯಲ್ಲಿ ದೋಣಿಯಲ್ಲಿ ಸಾಗಬೇಕಾದರೆ ಸೈನ್ಯದಿಂದ ಗುಂಡಿನ ಸುರಿಮಳೆಯಾಯಿತು. ಹೇಗೋ ತಪ್ಪಿಸಿಕೊಂಡು ತೀರದ ದಡ ಸೇರಿದರು. ಮತ್ತೆ ಕೆಲವರು ಈ ಗುಂಡಿನ ಸದ್ದಿಗೆ ಹೆದರಿ ದೋಣಿಯನ್ನು ಹತ್ತಲಿಲ್ಲ. ಅವರು ಬಂಟ್ವಾಳ, ಪಾಣೆಮಂಗಳೂರಿನಲ್ಲಿ ನಮ್ಮ ಸಾರಸ್ವತರು ಇದ್ದಾರೆ, ನಾವು ಆ ಕಡೆಗೆ ಪಯಣ ಬೆಳೆಸುತ್ತೇವೆ, ಮುಂದೊಂದು ದಿನ ಕೊಚ್ಚಿಯ ಕಡೆಗೆ ಬಂದಾಗ ಭೇಟಿಯಾಗುತ್ತೇವೆ ಎಂದು ತಿಳಿಸಿ ಎಂದು ದೋಣಿಕಾರರಿಗೆ ಹೇಳಿ ಬಂಟವಾಳದ ಕಡೆ ಕೆಲವು ಕುಟುಂಬಗಳು ಬಿರುಸಿನ ನಡೆ ಪ್ರಾರಂಭಿಸಿ ಅಲ್ಲಿ ಕೆಲವೊಂದು ಕುಟುಂಬಗಳು ನೆಲೆನಿಂತವು. ಇತ್ತಕಡೆ ವಿಟ್ಠು ಪೈ ಉಳಿದ ಕುಟುಂಬದವರನ್ನು ಹೊತ್ತೇರಿದಾಗ ಹತ್ತಾರು ಜನ ಸೈನಿಕರು ಬಂಧಿಸಿ ಎಳೆದುಕೊಂಡು ಚೌಟರ ರಾಣಿ ಅಬ್ಬಕ್ಕ ದೇವಿಯ ಮುಂದೆ ತಂದು ನಿಲ್ಲಿಸಿದರು. ಆಗ ಇವರನ್ನು ಕಂಡು ನೀವು ಕೊಂಕಣಿಗಳೋ? ಪೋರ್ಚುಗೀಸರ ವೈರಿಗಳು ನಮ್ಮ ವೈರಿಗಳಲ್ಲ, ನೀವು ಆಶ್ರಿತರು, ಹಾಗಾಗಿ ನಿಮ್ಮನ್ನು ಕಾಪಾಡುವ ಹೊಣೆ ನಮ್ಮದು ಎಂದು ತಿಳಿಸಿದಳು. ಆಗ ವಿಟ್ಠು ಪೈ ನಾವು ಕೊಚ್ಚಿಯ ಕಡೆಗೆ ಹೊರಟಿರುವವರು ಎಂದು ತಿಳಿಸಿದನು ಮತ್ತು ಉಳ್ಳಾಲದಲ್ಲೂ ಒಂದೆರಡು ಕುಟುಂಬಗಳು ನಿಂತವು.

ಸೈನಿಕರು ಬೆಂಗಾವಲಿನಲ್ಲಿ ಊರಗಡಿಯ ತನಕ ತಂದು ಬಿಟ್ಟರು. ಗುಡ್ಡ ಹತ್ತಿ ಇಳಿದು ಅವರೆಲ್ಲಾ ಮಂಜೇಶ್ವರಕ್ಕೆ ತಲುಪುವಾಗ ಅನಂತೇಶ್ವರನ ಪೂಜೆ ನಡೆಯುತ್ತಿತ್ತು. ಅಲ್ಲಿಯೇ ಪೂಜೆಯಲ್ಲಿ ಪಾಲ್ಗೊಂಡರು. ಅದುವರೆವಿಗೂ ಅಷ್ಟು ಮಂದಿ ಸಾರಸ್ವತರು ಮಂಜೇಶ್ವರದಲ್ಲಿ ನೆಲೆಸಿದ್ದಾರೆ ಎಂದು ವಿಟ್ಠು ಪೈಗೆ ನಂಬಿಕೆಯೇ ಇರಲಿಲ್ಲ. ಕೊನೆಗೆ ಅಲ್ಲಿಯ ಸ್ವಾಮೀಜಿಯನ್ನು ಮಾತನಾಡಿಸಿ ಇವರ ಗೋವೆಯ ವಿಚಾರಗಳನ್ನು ತಿಳಿಸಿದರು. ನಂತರ ಏಳು ದಿನ ಮಂಜೇಶ್ವರದಲ್ಲಿ ನಿಂತರು. ಕೊಚ್ಚಿಯ ಕಡೆಗೆ ಹೋಗಿ ಬಂದವರಲ್ಲಿ ಕೊಚ್ಚಿಯು ದೂರವಿಲ್ಲ,

ಕಣ್ಣೂರಿನಲ್ಲಿ, ಕಲ್ಲಿಕೋಟೆಯಲ್ಲಿ ಒಂದಷ್ಟು ತೊಂದರೆಯಾಗಬಹುದು, ಆದರೆ ಅಲ್ಲಿ ನಮ್ಮ ಸಾರಸ್ವತರು ತುಂಬಾ ಮಂದಿ ಇದ್ದಾರೆ ಎಂದು ತಿಳಿಸಿದರು. ಕೆಲವರಿಗೆ ಮಂಜೇಶ್ವರದಲ್ಲಿಯೇ ನಿಲ್ಲುವ ಮನಸ್ಸಾಯಿತು. ಕೊಚ್ಚಿಯ ಕಡೆಗೆ ಹೋಗುವುದು ಬೇಡ ನಗ್ನ ಬೇತಾಳ ಹೇಳಿರುವುದು ತೆಂಕ ದಿಕ್ಕಿಗೆ ತಾನೇ, ನಾವು ಇಲ್ಲೇ ನಿಲ್ಲೋಣ ಎಂದರು. ಅದಕ್ಕೆ ಸಾಂತಯ್ಯ ಪೋರೋಬು ಒಪ್ಪಲಿಲ್ಲ. ವಿಟ್ಠು ಪೈ ಗಂಟು ಮೂಟೇ ಕಟ್ಟಿಕೊಂಡು ಹೊರಟಾಗ ನಲ್ವತ್ತನಾಲ್ಕು ಕುಟುಂಬಗಳಿದ್ದವು. ಮಂಜೇಶ್ವರದಿಂದ ಹೊರಟಾಗ ಗುಂಪಿನಲ್ಲಿ ಲೆಕ್ಕ ಮಾಡಿದಾಗ ಒಟ್ಟು ಎಂಟು ಸಂಸಾರಗಳು ಅಥವಾ ಮನೆಯವರು ಇದ್ದರು. ಮುಂದೆ ಕುಂಬಳೆಯ ಕಡೆಗೆ ಪಯಣ ಪ್ರಾರಂಭವಾಯಿತು.

ಕುಂಬಳೆಯ ಗೋಪಾಲಕೃಷ್ಣ ದೇವಸ್ಥಾನದ ವಠಾರದಲ್ಲಿದ್ದ ಮರವೊಂದರ ಕೆಳಗೆ ಉಳಿದುಕೊಂಡಾಗ ನರಳಾಟದಲ್ಲಿಯೇ ಮರ್ತು ಕಿಣಿ ವಿಟ್ಠು ಪೈಗೆ ನಾನು ಸತ್ತರೆ ನನ್ನ ಹೆಂಡತಿ ಮಕ್ಕಳಿಗೆ ಯಾರೂ ಇಲ್ಲ, ಅವರನ್ನು ಕೈ ಬಿಡಬೇಡ. ಅವರು ತಪ್ಪು ಮಾಡಿದರೆ ಕ್ಷಮಿಸು, ಅವರನ್ನು ನೀನು ನೋಡಿಕೊಳ್ಳಬೇಕು ಎಂದು ಹೇಳಿ ಜ್ವರದಿಂದ ಸತ್ತು ಹೋದನು. ಆಗ ವಿಟ್ಠು ಪೈಗೆ ಏನು ಮಾಡುವುದು ಎಂದು ದಿಕ್ಕೇ ತೋಚದಂತಾಯಿತು. ಮುಂದೆ ಸಾಗಲು ಅವನಿಗೆ ಸಾಧ್ಯವಾಗಲಿಲ್ಲ.

ಇಂತಹ ಸಂದರ್ಭದಲ್ಲಿ ಮರ್ತುಕಿಣಿಯ ಶ್ರಾದ್ಧ ಮಾಡಿಸಲು ಹನ್ನೊಂದು ಮಂದಿ ಬ್ರಾಹ್ಮಣರನ್ನು ಹುಡುಕಲು ಅನ್ನು ಕಾಮಾತಿಯೊಡನೆ ಕುಂಬಳೆಯಲ್ಲೆಲ್ಲಾ ಹುಡುಕಾಡಿದನು. ಆಗ ಯಾರೋ ಸಮುದ್ರ ದಂಡೆಯ ಬಳಿ ಒಂದೆರಡು ಜೋಪಡಿಗಳು ಇವೆ ಅಲ್ಲಿ ಕೊಂಕಣಿಗಳು ಇದ್ದಾರೆ ಎಂದು ತಿಳಿಸಿದರು. ಆಗ ಎದುರಿಗೆ ಸಿಕ್ಕಿದವರೇ ಅಪ್ಪಣ್ಣ ಭಟ್ಟರು. ತುಳಸೀಬಾಯಿಯ ತಂದೆ, ವಿಟ್ಠು ಪೈಗೆ ಹೆಣ್ಣು ಕೊಟ್ಟ ಮಾವ. ಆ ಸಂತೋಷ ಅವನಿಗೆ ಹೇಳತೀರದು, ಕೊನೆಗೆ ಎಲ್ಲರೂ ಸೇರಿ ಮರ್ತು ಕಿಣಿಯ ಶ್ರಾದ್ಧ ಮಾಡಿಸಿದರು. ನಂತರ ಸಾಂತಯ್ಯ ಪೊರೋಬು ಇನ್ನು ಕೊಚ್ಚಿಯ ಕಡೆಗೆ ಪ್ರಯಾಣ ಬೆಳೆಸುವ ಎಂದನು. ವಿಟ್ಠು ಪೈಗೆ ಹೋಗುವ ಮನಸ್ಸಾಗಲಿಲ್ಲ ಕಾರಣ ಜೀವದ ಗೆಳೆಯ ಮರ್ತು ಕಿಣಿಯ ಸಾವು ಅವನಿಗೆ ಹೊರಡುವ ಮನಸ್ಸು ಮಾಡಿಸಲಿಲ್ಲ. ಕೊನೆಗೆ ಸಪೂರ ಶಾಂತಯ್ಯ ಪೋರೋಬು ಅವನ ತಮ್ಮನ ಮಗ ಬೆಲ್ಲದ ಮಾಧೋ ಪೋರೋಬು ಕೊಚ್ಚಿಯ ಹಾದಿ ಹಿಡಿದರು.

ಕುಂಬಳೆಯಲ್ಲಿ ಉಳಿದವರು ಪೈ, ಕಾಮಾತಿ, ಮ್ಹಾಲ್ಲೊ ಮತ್ತು ಕಿಣಿ. ಜೊತೆಗೆ ಮೊದಲೇ ಅಪ್ಪಣ್ಣ ಭಟ್ಟರು ಉಳಿದಿದ್ದರು. ಹೀಗೆ ಐದು ಕುಟುಂಬಗಳು ಕುಂಬಳೆಯಲ್ಲಿ ನಿಂತಾಗ ಅವನ ಜೊತೆ ನಿಂತವರು ಅನ್ನು ಕಾಮಾತಿ ಮತ್ತು ವೆಂಕು ಮ್ಹಾಲ್ಲೊ. ಸುದೀರ್ಘ ಪ್ರಯಾಣದಿಂದ ಆಯಾಸಗೊಂಡು ವೆಂಕು ಮ್ಹಾಲ್ಲೊ ಸಂಸಾರದೊಡನೆ ಮುಂದುವರಿಯಲು ಧೈರ್ಯವಿಲ್ಲದೆ ನೆಲೆನಿಂತ, ಅನ್ನು ಕಾಮಾತಿ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಒಂದೇ ಉದ್ದೇಶದಿಂದ ವಿಟ್ಠು ಪೈ ಒಟ್ಟಿಗೆ ನೆಲೆನಿಂತ. ಜೊತೆಯಲ್ಲಿ ಮರ್ತು ಕಿಣಿಯ ಸಂಸಾರ ಬೇರೆ ದಾರಿಯಿಲ್ಲದೆ ಇವರೊಟ್ಟಿಗೆ ನಿಂತಿತ್ತು. ಸಪೂರ ಶಾಂತಯ್ಯ ಕೊಚ್ಚಿಗೆ ಮುಟ್ಟುವ ಮೊದಲೇ ತೀರಿಕೊಂಡ. ಜೊತೆಗೆ ಆತನ ತಮ್ಮನ ಮಗ ಮಾಧೋ ಪೋರೋಬು ನೀಲೇಶ್ವರದಲ್ಲಿ ಚರ್ಡಪ್ಪ ಶೇಣಾವಿಗಳ ಮಗಳನ್ನು ಮದುವೆಯಾಗಿ ಅಲ್ಲೇ ನೆಲೆ ನಿಂತನು.

ಹೀಗೆ "ಗಂಗೊಳ್ಳಿಯಲ್ಲಿ ಶೇಣಾವಿಗಳು, ನಾಯಕರು, ಉಡುಪಿಯಲ್ಲಿ ಪೈಗಳೂ, ಪಡಿಯಾರರು, ಪಾಂಗಳದಲ್ಲಿ ನಾಯಕರು, ಕಾರ್ಕಳದಲ್ಲಿ ಚೋಲ್ಪಾಡಿ ಕಾಮತರು, ಬಂಟವಾಳದಲ್ಲಿ ಬಾಳಿಗರು, ಮೂಲ್ಕಿಯಲ್ಲಿ ಕಾಮತರು, ಮಂಗಳೂರಿನಲ್ಲಿ ಭಟ್ಟರು, ಪಾಣೆಮಂಗಳೂರಿನಲ್ಲಿ ಕುಡ್ವರು, ಉಳ್ಳಾಲದಲ್ಲಿ ಕಿಣಿಯವರು, ಮಲ್ಯರು, ಮಂಜೇಶ್ವರದಲ್ಲಿ ಶಾನುಭಾಗರು, ಕುಂಬಳೆಯಲ್ಲಿ ಭಕ್ತರು, ಕಾಸರಗೋಡಿನಲ್ಲಿ ಪಟ್ಟಣಶೆಟ್ಟರು, ನೀಲೇಶ್ವರದಲ್ಲಿ ಪೈಗಳು, ಪ್ರಭುಗಳು, ತಲಚೇರಿಯಲ್ಲಿ ಭಂಡಾರಿಗಳು, ಕೊಚ್ಚಿಯಲ್ಲಿ ಮಲ್ಯರು, ಅಲ್ಪಳ್ಳಿಯಲ್ಲಿ ಪ್ರಭುಗಳು, ಹೀಗೆ ಕುಂದಾಪುರದಿಂದ ಕೊಚ್ಚಿಯ ತನಕ ಹಲವು ಹದಿನೆಂಟು ಪೇಟೆಗಳಲ್ಲಿ ಸಾರಸ್ವತ ಬ್ರಾಹ್ಮಣರು ಹರಡಿ ಬೆಳೆದ ಕಥೆಯನ್ನು ವಿಟ್ಠು ಪೈ ತನ್ನ ಮೊಮ್ಮಗ ರಾಮಚಂದ್ರ ಪೈಗಳಿಗೆ ತಿಳಿಸಿದನು"[೨೦].

ಜೊತೆಗೆ "ಕನ್ನಡ ನಾಡಿನ ಬಾರಕೂರು, ಬಸರೂರುಗಳ ಒಡೆಯರು, ಕಟಪಾಡಿಯ ದೊರೆಗಳು, ಪಡುಬಿದ್ರೆಯ ಬಲ್ಲಾಳರು, ಮೂಲ್ಕಿಯ ಸಾವಂತರು, ವೇಣೂರಿನ ಚೌಟರು, ನಂದಾವರದ ಬಂಗೇರರು, ಬೆಳ್ತಂಗಡಿಯ ಮಲ್ಲರು, ಕಾರ್ಕಳದ ಭೈರರು, ವಿಟ್ಲದ ಹೆಗ್ಗಡೆಯವರು, ಕುಂಬಳೆ, ನೀಲೇಶ್ವರದ ಅರಸರು ಇವರಿಗೆ ಆಶ್ರಯ ನೀಡಿದರು. ಆ ಮೂಲಕ ಸಾರಸ್ವತ ಕುಲ ಉಳಿಯಿತು"[೨೧].

ಮುಂದೆ ಗೋವೆಯಲ್ಲಿ ಪೋರ್ಚುಗೀಸರ ದಬ್ಬಾಳಿಕೆಗೆ, ಮತಾಂಧತೆಗೆ ಸಿಲುಕಿದ ಇಲ್ಲಿನ ಸಾರಸ್ವತರು ಕ್ರೈಸ್ತ ಧರ್ಮವನ್ನು ಸ್ವೀಕರಿಸಿದರು. ಆದರೆ ಮುಂದೆ ಮರಾಠರ ಶಿವಾಜಿಯ ಆಳ್ವಿಕೆ ಆರಂಭವಾದ ಮೇಲೆ ಆತ ಗೋವೆಯನ್ನು ವಶಪಡಿಸಿಕೊಂಡನು. ಗೋವೆಯಲ್ಲಿದ್ದ ಕ್ರೈಸ್ತರಿಗೆ ಮತ್ತೊಂದು ಸಂಕಟ ಎದುರಾಯಿತು. ಮರಾಠರ ಸೈನ್ಯದ ದಬ್ಬಾಳಿಕೆಯಿಂದಾಗಿ ಅಲ್ಲಿನ ಕ್ರೈಸ್ತರಿಗೆ ಉತ್ತರಕ್ಕೆ ಮರಾಠರು, ಪೂರ್ವದಲ್ಲಿ ಬಿಜಾಪುರದ ಸುಲ್ತಾನ, ಪಶ್ಚಿಮದಲ್ಲಿ ಭೋರಿಡುವ ಸಮುದ್ರ. ಬಂದರೆ ಅವರು ತೆಂಕಣಕ್ಕೆ ಬರಬೇಕು. ಹಾಗಾಗಿ ಸಾವಿರಾರು ಮಂದಿ ಮಂಗಳೂರಿನ ಕಡೆ ವಲಸೆ ಬಂದರು.

ಇದನ್ನು ಕಂಡ ವಿಟ್ಠು ಪೈಯ ಮೊಮ್ಮಗ ರಾಮಚಂದ್ರ ಪೈಗೆ "ಈ ಕಿರಿಸ್ತಾನ ಮಂದಿ ಕಿರಿಸ್ತಾನರಾಗಿಯೂ ಸುಖ ಪಡಲಿಲ್ಲವಲ್ಲ"[೨೨] ಎನಿಸಿತು. ಹೀಗೆ ಒಂದು ಕಡೆ ಪೋರ್ಚುಗೀಸರ ದಬ್ಬಾಳಿಕೆಯಿಂದ ನೋವು ಅನುಭವಿಸಿ ಕ್ರೈಸ್ತರಾದರು, ಕ್ರೈಸ್ತರಾದ ಮೇಲೂ ಅವರಿಗೆ ಸುಖ, ನೆಮ್ಮದಿಯ ಬಾಳ್ವೆ ದೊರಕಲಿಲ್ಲ. ನಂತರ ಶಿವಾಜಿಯ ಆಡಳಿತದಲ್ಲಿ ನೋವು ಅನುಭವಿಸಬೇಕಾದ್ದು ಒಂದು ದುರ್ವಿಧಿಯೇ ಆಗಿದೆ. ರಾಮಚಂದ್ರ ಪೈ ಒಬ್ಬ ಗೋವೆಯ ಕ್ರೈಸ್ತ ಮುದುಕನನ್ನು ಭೇಟಿಯಾದಾಗ ಆತ "ನಮ್ಮದು ಗೋವೆ, ಮರಾಠಿ ಜನರು ನಮ್ಮನ್ನೋಡಿಸಿದರು. ಅಲ್ಲಿ ನಮಗೆ ಬೇಸಾಯ ಇತ್ತು. ಆದರೆ ಓಡಿ ಬರುವಾಗ ಆ ನೆಲ ಹಿಡಿದುಕೊಂಡು ಬರಲು ಸಾಧ್ಯವೇ? ಬಹಳ ಕಷ್ಟಪಟ್ಟು ಇಲ್ಲಿಯತನಕ ಬಂದೆವು. ನೀವೆಲ್ಲಾ ಇಲ್ಲಿದ್ದೀರೆಂದು ಉಳಿದಿದ್ದೇವೆ, ನಮ್ಮ ಅವಸ್ಥೆ ನಿಮಗೆ ತಿಳಿಯದು. ಜೀವ ಉಳಿದದ್ದು ದೊಡ್ಡದು, ಮಂಗಳೂರಿಗೆ ಬಂದಾಗ ಸೋತು ಸುಣ್ಣವಾಗಿದ್ದೆವು. ಯೇಸುವಿನ ದಯೆಯಿಲ್ಲದಿದ್ದರೆ ನಮ್ಮ ಹೆಣ ತೇಲುತ್ತಿತ್ತೋ ಏನೋ? ಇಲ್ಲಿ ಅಲ್ಲಲ್ಲಿ ನಮ ಜನ ಗುಂಪು ಗುಂಪಾಗಿ ವಾಸಿಸುತ್ತಿದ್ದಾರೆ;

ಕಂಕನಾಡಿಯಲ್ಲಿ, ಎಲ್ಲಾದರೂ ಒಂದು ಗುಡಿಸಲು ಕಟ್ಟಿ ಇರಿ ಎಂದರು ಯಾರೋ; ಇದ್ದೇವೆ. ಈಗ ಏನು ಕೆಲಸವೂ ಇಲ್ಲ, ಏನು ಕೊಟ್ಟರೂ ಮಾಡಿಯೇನು ಸ್ವಾಮಿ, ಹೊಟ್ಟೆಗಾಗಿ ಮಾಡಬೇಕಲ್ಲ? ದಾರಿಯಲ್ಲಿ ನನ್ನ ಇಬ್ಬರು ಮಕ್ಕಳು ತೀರಿಕೊಂಡರು, ಮಗಳೊಬ್ಬಳು ಓಡಿ ಹೋದಳು"[೩೩]. ಮುದುಕ ಹೇಳುತ್ತಾ ಹೋದ. ಈ ಪರಿಸ್ಥಿತಿಗೆ ಗೋವೆಯ ವಲಸೆ ಕ್ರೈಸ್ತರು ಒಳಪಟ್ಟರು. ಹಾಗೆಯೇ ಅನೇಕ ಕಷ್ಟ, ದುಃಖ, ನೋವುಗಳನ್ನು ಅನುಭವಿಸಿದರು. ಈ ರೀತಿಯಾಗಿ ವಲಸೆ ಪ್ರಕ್ರಿಯೆಯು ಕಾದಂಬರಿಯ ಶಿಲ್ಪದಲ್ಲಿ ಮೂಡಿದೆ.

೪.೩ ವಲಸೆ ಪ್ರಕ್ರಿಯೆಯಿಂದಾಗಿ ಉಂಟಾದ ಸಾಂಸ್ಕೃತಿಕ ಪಲ್ಲಟ

ಸಾರಸ್ವತ ಸಮುದಾಯ ಕನ್ನಡ ನಾಡಿನ ಪ್ರದೇಶಕ್ಕೆ ಬಂದು ಸೇರಿದ ನಂತರ ಅವರ ಮೂಲಕ ಸಾಂಸ್ಕೃತಿಕ ವಿಚಾರಧಾರೆಗಳಲ್ಲಿ ಸ್ವಲ್ಪ ಮಟ್ಟಿಗೆ ಬದಲಾವಣೆಗೆ ಒಳಪಟ್ಟರು. ಯಾವುದೇ ಒಂದು ಸಮುದಾಯವು ತನ್ನ ಮೂಲ ನೆಲೆ ಬಿಟ್ಟು ಬೇರೊಂದು ನೆಲೆಗೆ ಬಂದು ನೆಲೆಸಿದ ಬಳಿಕ ಅಲ್ಲಿನ ಸಾಂಸ್ಕೃತಿಕ ವಿಷಯಗಳಿಗೆ ಸ್ವಲ್ಪ ಮಟ್ಟಿಗೆ ತನ್ನನ್ನು ತಾನು ತೆರೆದುಕೊಳ್ಳುತ್ತದೆ. ಹಾಗೆಯೇ ಗೋವಾದ ಸಾರಸ್ವತ ಸಮುದಾಯವು ಕೂಡಾ ಕರ್ನಾಟಕದ ಕರಾವಳಿ ತೀರ ಪ್ರದೇಶಕ್ಕೆ ಬಂದು ಸೇರಿದ ಮೇಲೆ ಅವರಲ್ಲೂ ಸಾಂಸ್ಕೃತಿಕ ಪಲ್ಲಟಗೊಂಡ ವಿಷಯವು ಈ ಕಾದಂಬರಿಯಲ್ಲಿ ವ್ಯಕ್ತವಾಗಿರುವುದನ್ನು ನಾವು ಇಲ್ಲಿ ಗಮನಿಸಬಹುದು ಹಾಗೂ ಅದನ್ನು ಇಲ್ಲಿ ಚರ್ಚಿಸಲಾಗುವುದು.

ಧಡ್ಡನನ್ನು ಕೂರಿಸುವ ಪದ್ಧತಿ ಬೆಳೆದು ಬಂದುದು

ಕಾದಂಬರಿಯಲ್ಲಿ ಬರುವ ಮಾಳಪ್ಪಯ್ಯ ಮತ್ತು ರಾಧ ಬಾಯಿ ಎಂಬ ದಂಪತಿಗಳಿಗೆ ಸಿಕ್ಕಿದ ಅನಾಥ ಮಗು ಧಡ್ಡ. ವಿಟ್ಠು ಪೈಗಿಂತ ಸ್ವಲ್ಪ ಮಟ್ಟಿಗೆ ವಯಸ್ಸಿನಲ್ಲಿ ದೊಡ್ಡವನು. ಅವನಿಗೆ ಕಿವಿಯು ಕೇಳುತ್ತಿರಲಿಲ್ಲ, ಮಾತು ಕೂಡಾ ಬರುತ್ತಿರಲಿಲ್ಲ. ಆದ್ದರಿಂದ ಅವನಿಗೆ ಮಾಳಪ್ಪಯ್ಯನವರು ಧಡ್ಡ ಎಂದು ಹೆಸರಿಟ್ಟರು. ವಿಟ್ಠು ಪೈ ಬಾಲ್ಯವೆಲ್ಲಾ ಕಳೆದುದು ಈ ಧಡ್ಡನ ಜೊತೆಯಲ್ಲಿಯೇ. ಮಾಳಪ್ಪಯ್ಯನವರು ಧಡ್ಡನನ್ನು ತನ್ನ ಮಗನಂತೆಯೇ ಸಾಕಿ ಸಲಹಿದರು. ಧಡ್ಡನಿಗೆ ಅತ್ಯಂತ ಉತ್ಸಾಹದ ಕ್ಷಣವೆಂದರೆ ಮದುವೆ, ಮುಂಜಿಗಳ ಮಂಟಪದಲ್ಲಿ ಪುರೋಹಿತರ ಬಳಿಯಲ್ಲಿ ಕುಳಿತು ಅವರಿಗೆ ಸಹಾಯ ಮಾಡುವುದು ಆಗಿತ್ತು. ಹೀಗೆ ಎಲ್ಲಾ ಚಟುವಟಿಕೆಗಳಲ್ಲಿಯೂ ಮನೆಯಲ್ಲಿ ರಾಧಬಾಯಿಗೆ, ಹಾಗೂ ವ್ಯವಸಾಯದಲ್ಲಿಯೂ ಕೂಡಾ ಉತ್ತಮವಾಗಿ ಕೆಲಸ ಮಾಡುತ್ತಿದ್ದನು. ವಿಟ್ಠು ಪೈ ಈತನನ್ನು ಅಣ್ಣನೆಂದು ತಿಳಿದುಕೊಂಡಿದ್ದನು. ಹತ್ತು ಜನ ಮಾಡುವ ಕೆಲಸವನ್ನು ಧಡ್ಡನೊಬ್ಬನೇ ಮಾಡುತ್ತಿದ್ದನು.

ಪೋರ್ಚುಗೀಸರು ಗೋವೆಯಲ್ಲಿನ ಬಾರ್ದೇಶ, ಸಾಸಷ್ಟಿ, ಜೊನ್ನ ಮೊದಲಾದ ಎಲ್ಲಾ ಪ್ರದೇಶಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡು ಅಲ್ಲಿನ ಪ್ರಮುಖ ದೇವಸ್ಥಾನಗಳನ್ನು ನಾಶ ಮಾಡಿ ಆ ಜಾಗದಲ್ಲಿ ಚರ್ಚುಗಳನ್ನು ಕಟ್ಟಲು ಆರಂಭಿಸಿದರು. ಹಾಗೆಯೇ ಅಲ್ಲಿನ ಸಾರಸ್ವತರೆಲ್ಲಾ ಪೋರ್ಚುಗೀಸರ ದಬ್ಬಾಳಿಕೆಯನ್ನು ತಡೆಯಲಾಗದೆ ಒಂದು ಕ್ರೈಸ್ತರಾಗಬೇಕು

ಇಲ್ಲ ಗೋವೆಯನ್ನು ಬಿಡಬೇಕಾಗಿ ಬಂತು. ಇದೇ ರೀತಿ ವಿಟ್ಠು ಪೈ ವಾಸವಾಗಿದ್ದ ವೆರಣೆಯ ಪರಿಸ್ಥಿತಿಯು ಇದಕ್ಕಿಂತ ಹೊರತಾಗಿರಲಿಲ್ಲ.

ವೆರಣೆಯಲ್ಲಿ ವಿಟ್ಠು ಪೈ ಕುಟುಂಬ ಆರ್ಥಿಕವಾಗಿ ಸಾಮಾಜಿಕ ಉನ್ನತ ಮಟ್ಟದಲ್ಲಿತ್ತು. ಆ ಊರಿನ ಮಹಾಲಸಾ ದೇವಸ್ಥಾನದಲ್ಲಿ ಗ್ರಾಮದೇವತೆಯಾದ ಹಾಗೂ ಸಾರಸ್ವತರ ಕುಲದೇವತೆಯಾದ ಮ್ಹಾಳ ಶಿಮಾಂಯಿಯ ದೇವಸ್ಥಾನವನ್ನು ಪೋರ್ಚುಗೀಸರು ಒಂದು ದಿನ ಕೆಡುವುದು ಎಂದು ನಿರ್ಧರಿಸಿದರು. ಇದನ್ನು ಗಮನಿಸಿದ ನಗ್ನ ಬೇತಾಳ ಧಡ್ಡನಿಗೆ ಆಜ್ಞೆಯನ್ನು ಮಾಡಿರುತ್ತಾನೆ. ಅದರಂತೆ ಧಡ್ಡ ಯಾರಿಗೂ ತಿಳಿಯದ ಹಾಗೆ ಆ ದೇವಸ್ಥಾನದಲ್ಲಿದ್ದ ಮೂರ್ತಿಯನ್ನು ಒಂದು ಮಧ್ಯರಾತ್ರಿ ಎತ್ತಿಕೊಂಡು ಹೋಗಿ ಅದನ್ನು ಪ್ರಿಯೋಳದ ಕಾಡಿನಲ್ಲಿ ಮಹರರ ಕೇರಿಯಲ್ಲಿ ಇಟ್ಟು ಬಂದಿರುತ್ತಾನೆ. ಒಂದೇ ಸಮನೆ ಆ ಕಾಡಿಗೆ ಮೂರ್ತಿಯನ್ನು ಒಬ್ಬನೇ ಎತ್ತಿಕೊಂಡು ಹೋಗಿ ಮತ್ತೆ ವೆರಣೆ ತಲುಪುತ್ತಾನೆ. ಈ ವಿಷಯ ಗೊತ್ತಿಲ್ಲದ ವಿಟ್ಠು ಪೈ ಆತನಿಗೆ ಬೈಯುತ್ತಾನೆ. ಹೊಟ್ಟೆ ಹಸಿವು ಅಂತ ಧಡ್ಡ ಕೇಳಿದರೂ ಆ ಸಂದರ್ಭದಲ್ಲಿ ಊಟ ಕೊಡುವುದಿಲ್ಲ. ನಗ್ನ ಬೇತಾಳ ಬಂದು ಹೋಗಿ ಪುಲ್ಲಾ ನದಿಯಲ್ಲಿ ಸ್ನಾನ ಮಾಡಿ ಬಾ ಎಂದು ಧಡ್ಡನಿಗೆ ತಿಳಿಸುತ್ತಾನೆ. ಆತ ಪುಲ್ಲಾ ನದಿಗೆ ಸ್ನಾನ ಮಾಡಲು ಹೋದಾಗ ಅಲ್ಲಿಗೆ ಪೋರ್ಚುಗೀಸರ ಸೈನಿಕರು ಬಂದು ಅವನನ್ನು ಹಿಡಿದುಕೊಂಡು ಹೋಗುತ್ತಾರೆ. ಕಾರಣವೆಂದರೆ ಆ ವೇಳೆಗೆ ವಿಟ್ಠು ಪೈಗೆ ಪೋರ್ಚುಗೀಸರು ಮ್ಹಾಳಶಿಮಾಂಯಿ ಮೂರ್ತಿಯನ್ನು ಯಾರು ಎತ್ತಿಕೊಂಡುಹೋದರು ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಭಯಂಕರವಾದ ಹಿಂಸೆ ಕೊಟ್ಟರು. ಆ ಹಿಂಸೆಯನ್ನು ತಡೆಯಲಾರದೆ ವಿಟ್ಠು ಪೈ ಧಡ್ಡನ ಹೆಸರನ್ನು ಹೇಳುತ್ತಾನೆ.

ನಂತರ ಧಡ್ಡನನ್ನು ಕರೆದುಕೊಂಡು ಹೋಗಿ ಭಯಂಕರವಾದ ಹಿಂಸೆ ಕೊಡುತ್ತಾರೆ ಅವನು ಮೂಕನೆಂದು ತಿಳಿಯದೆ ವಿಷಯವನ್ನು ಬಾಯಿ ಬಿಡುತ್ತಿಲ್ಲವೆಂದು ನಾನಾ ರೀತಿಯ ಚಿತ್ರಹಿಂಸೆ ಕೊಡುತ್ತಾರೆ ಕೊನೆಗೆ ಧಡ್ಡ ಸಾಯುತ್ತಾನೆ. ಇದರಿಂದ ನಗ್ನ ಬೇತಾಳನಿಗೆ ಕೋಪ ಬಂದು ವಿಟ್ಠು ಪೈ ತನ್ನ ಜೀವ ಉಳಿಸಲು ಧಡ್ಡನನ್ನು ಬಲಿ ಕೊಟ್ಟನು ಮನೆ ದೇವರನ್ನು ಉಳಿಸಿದ ಧಡ್ಡನ ಜೊತೆ ಸಂಬಂಧ ಕಡಿದುದಕ್ಕೆ ವೆರಣೆಯ ನೀರು ನಿಷಿದ್ಧ ಎಂದು ಶಾಪ ನೀಡುತ್ತಾನೆ. ಜೊತೆಗೆ ನಿನ್ನ ಸಂತಾನ ನಾಲ್ವರಲ್ಲಿ ಒಂದರಂತೆ ನಿಶ್ಶೇಷವಾಗಿ ಹೋಗಲಿ ಎಂದು ಶಪಿಸುತ್ತಾನೆ. ಇದರಿಂದ ಬೆದರಿದ ವಿಟ್ಠು ಪೈ ತನ್ನ ತಪ್ಪನ್ನು ಕ್ಷಮಿಸು ಎಂದು ಬೇಡಿ ಮುಂದೆ ಏನು ಮಾಡಬೇಕು ಎಂದು ಕೇಳುತ್ತಾನೆ. ಆಗ ನಗ್ನ ಬೇತಾಳ ಪ್ರಯೋಳದ ಕಾಡಿನಲ್ಲಿ ಮಹರರ ಕೇರಿಯಲ್ಲಿ ಮ್ಹಾಳಶಿಮಾಂಯಿಯನ್ನು ಅಲ್ಲಿಯೇ ಪ್ರತಿಷ್ಠಾಪಿಸಬೇಕು, ಅಲ್ಲಿಯತನಕ ಮೂರ್ತಿಯನ್ನು ನೋಡಿಕೊಂಡಿದ್ದಕ್ಕೆ ಸಂವತ್ಸರದಲ್ಲಿ ಬಂದು ತಿಥಿಯಂದು ಅವರಿಗೆ ಪೂಜೆ ಮಾಡುವ ಹಕ್ಕನ್ನು ಆ ದಲಿತರಿಗೆ ಕೊಡಬೇಕೆಂದು ತಿಳಿಸುತ್ತಾನೆ.

ನಿಮ್ಮ ಮನೆ ದೇವರಿಗಾಗಿ ಪ್ರಾಣತೆತ್ತ ಧಡ್ಡನನ್ನು ಇನ್ನು ಮುಂದೆ ಸಾರಸ್ವತರು ದೇವರೆಂದು ಪೂಜಿಸಬೇಕು. ಅವನು ಸಾರಸ್ವತ ಬ್ರಾಹ್ಮಣರಿಗೆಲ್ಲಾ ಸೇರಿದವನು. ಮುಂದೆ ಗೋವೆಯಲ್ಲಿ ಏಳು ಕಡೆ ಅವನಿಗಾಗಿ ಗುಡಿ ಕಟ್ಟಿಸುತ್ತೇನೆ. ಅವನ ಪೂಜೆ ಮಾಡಿದವರಿಗೆ ಸುಖ, ಶಾಂತಿ ಕೊಡಿಸುತ್ತೇನೆ. ಮದುವೆ, ಮುಂಜಿಗಳಲ್ಲಿ ಅವನ ನೆನಪು ಮಾಡಿಕೊಳ್ಳಬೇಕು, ಮದುವೆ ಮುಂಜಿ ಮುಂತಾದ ಶುಭ ಸಮಾರಂಭಗಳಲ್ಲಿ ಧಡ್ಡನ್ನು ಮರೆಯಬೇಡಿ, ಪುರೋಹಿತರ

ಸಮೀಪವೇ ಅವನನ್ನು ಕುಳ್ಳಿರಿಸಿ, ಮುಂದೆ ನಿಮ್ಮ ನಿಮ್ಮ ಸಂತಾನದವರು ಗೋವೆಗೆ ಕುಲದೇವರ ದರ್ಶನಕ್ಕಾಗಿ ಬಂದಾಗ ಧಡ್ಡನ ಎದುರು ಅಡ್ಡ ಬಿದ್ದು ಹೋಗಬೇಕೆಂದು ಹೇಳಿ. ಯಾವ ದಿನ ಇದನ್ನು ತಪ್ಪಿಸುತ್ತೀರೋ ಆ ದಿನದಿಂದಲೇ ನಿಮ್ಮ ಹೆಂಗಸರ ಗರ್ಭಗಳು ನಿರ್ಬಲವಾಗುತ್ತವೆ ಎಂದು ನಗ್ನ ಬೇತಾಳ ಆಜ್ಞಾಪಿಸುತ್ತಾನೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಸಾರಸ್ವತರು ಮದುವೆ ಮುಂಜಿಗಳಲ್ಲಿ ಧಡ್ಡನನ್ನು ಕೂರಿಸುವ ವಾಡಿಕೆಯು ಆರಂಭವಾಯಿತು. ಅವನಿಗಾಗಿ ಮಧ್ಯಭಾಗದಲ್ಲಿ ಅಗ್ರಸ್ಥಾನ ಕೊಡಬೇಕು ಎಂಬ ನಂಬಿಕೆ ಸಾರಸ್ವತರ ಮನೆಮನೆಗಳಲ್ಲಿ ಕಾಣತೊಡಗಿತು.

ಜೊತೆಗೆ ನಗ್ನ ಬೇತಾಳ ಸಾರಸ್ವತರಲ್ಲಿ ಒಗ್ಗಟ್ಟು ಇರಲೆಂದು ಹಾಗೂ ಮಾತೃಭಾಷೆ ಬೇರೆಡೆಗೆ ಹೋದಾಗ ಮರೆಯಬಾರದೆಂದು ಕೊಂಕಣಿಗಳು ಎಲ್ಲಿ ಸಿಗುವರೋ ಅಲ್ಲಿ ಅವರೊಟ್ಟಿಗೆ ಕೊಂಕಣಿ ಭಾಷೆಯಲ್ಲಿಯೇ ಮಾತನಾಡಬೇಕು, ಜೊತೆಗೆ, ಒಬ್ಬರನ್ನೊಬ್ಬರು ಮಾಮ್ಮಾ, ಮಾಂಯ್ಯೇ ಎಂದು ಸಂಭೋಧಿಸಲು ಮರೆಯಬಾರದೆಂದು ತಿಳಿಸುತ್ತಾನೆ.

ಇಲ್ಲಿ ನಗ್ನ ಬೇತಾಳ ಪ್ರಮುಖವಾಗಿ ಬೇರೊಂದು ಪ್ರದೇಶಕ್ಕೆ ಹೋದಾಗ ಅಲ್ಲಿಯ ಸ್ಥಳೀಯ ಭಾಷೆ ಕಲಿತು ಕೊಂಕಣಿ ಭಾಷೆಯನ್ನು ಮರೆಯುತ್ತಾರೆಂದು, ತಮ್ಮ ಮಾತೃ ಭಾಷೆಯನ್ನು ಉಳಿಸಿಕೊಳ್ಳಲು ಹಾಗೂ ತಮ್ಮ ಜನಾಂಗದವರು ಸಂಧಿಸಿದಾಗ ಅವರೊಡನೆ ಆತ್ಮೀಯ ಸಂಬಂಧಗಳು ಏರ್ಪಡಲಿ ಎಂದು ಅವರಿಗೆ ಗೌರವವಾಗಿ ಸಂಭೋಧಿಸಲು ತಿಳಿಸುತ್ತಾನೆ. ಆ ಮೂಲಕ ಭಾಷೆ ಮತ್ತು ಜನಾಂಗ ನಾಶ ಹೊಂದಬಾರದೆಂದ ವಿಷಯಗಳನ್ನು ಗಮನಿಸಬಹುದಾಗಿದೆ. ಜೊತೆಗೆ ಧಡ್ಡನನ್ನು ಕೂರಿಸುವುದು ಮುಂದೆ ಒಂದು ಸಂಪ್ರದಾಯವಾಯಿತು.

ಕಾಶಿಮಠಕ್ಕೆ ನಡೆದುಕೊಳ್ಳುವುದು

ಕೈವಲ್ಯಮಠ ಅಥವಾ ಕವಳೆ ಮಠವು ಸಾರಸ್ವತ ಸಮಾಜದ ಪ್ರಾಚೀನ ಮಠವಾಗಿತ್ತು. ಗೋವಿಂದ ಭಗವತ್ಪಾದರ ಶಿಷ್ಯ ವಿವರಣಾನಂದ ಸ್ವಾಮಿಗಳು ಈ ಮಠವನ್ನು ಗೋವಾದ ಕುಶಸ್ಥಲಿ ಎಂಬಲ್ಲಿ (ಕೆಲೋಶಿಯ ಸಮೀಪ) ಸ್ಥಾಪಿಸಿದರು. ಈ ಯತಿಗಳೂ ಕಾಶ್ಮೀರದಿಂದ ಬಂದವರೆಂದು ನಂಬಲಾಗಿದೆ. ಕುಶಸ್ಥಲಿಯಲ್ಲಿದ್ದ ಮೂಲಮಠವು ಪೋರ್ಚುಗೀಸರಿಂದ ನಾಶಗೊಳಿಸಲ್ಪಟ್ಟುದ್ದರಿಂದ ಅವರು ಮತ್ತು ಅವರ ಶಿಷ್ಯರು ರತ್ನಗಿರಿ ಜಿಲ್ಲೆಯ ಗೋಲ್ವಾಣಾದಲ್ಲಿ ನೆಲೆಸಿದರು.

ಕೌಂಶ ಗೋತ್ರದ ಮಹಾಲಸಾ ದೇವಿಯ ಕುಲದವನಾದ ಮಾಳಶರ್ಮರ ಮರಿಮಗ, ನರಸಪ್ಪಯ್ಯನವರ ಮರಿಮೊಮ್ಮಗ ಮಾಳಪ್ಪಯ್ಯನವರ ಮಗ ವಿಟ್ಠು ಪೈನ ಒಟ್ಟಿಗೆ ನಲವತ್ತನಾಲ್ಕು ಕುಟುಂಬಗಳು ನಗ್ನ ಬೇತಾಳನಿಗೆ ನಮಸ್ಕರಿಸಿ ತೆಂಕ ದಿಕ್ಕಿನ ಕಡೆಗೆ ಹೊರಟರು. ಇವರು ಗೋವೆಯಲ್ಲಿನ ಕವಳೆ ಮಠಕ್ಕೆ ತಾತನ ಕಾಲದಿಂದಲೂ ನಡೆದುಕೊಳ್ಳುತ್ತಿದ್ದರು. ಆದರೆ ಇವರು ತೆಂಕ ದಿಕ್ಕಿಗೆ ಬಂದ ನಂತರ ಕಾಶಿಮಠಕ್ಕೆ ನಡೆದುಕೊಳ್ಳಲು ಪ್ರಾರಂಭಿಸಿದರು. ಕಾಶಿಮಠವು ಕರ್ನಾಟಕದ ಕರಾವಳಿಯಾದ ಮಂಜೇಶ್ವರದಲ್ಲಿ ಒಂದು ಮಠವಿದೆ.

ಕುಂಭಕೋಣದ ಮಠದ ಸುರೀಂದ್ರ ತೀರ್ಥ ಸ್ವಾಮಿಗಳು ವ್ಯಾಸರಾಜ ಮಠದ ಒಬ್ಬರಿಗೆ ಸನ್ಯಾಸ ದೀಕ್ಷೆ ಕೊಟ್ಟು ಇಪ್ಪತ್ತು ವರ್ಷಗಳಾಗಿತ್ತು. ಆ ಮಠವೇ ಈ ಕಾಶಿಮಠ. ಇದರ ಮೊದಲ ಸ್ವಾಮಿಗಳಾದ ಯಾದವೇಂದ್ರ ತೀರ್ಥರು ಕೇಶವೇಂದ್ರ ತೀರ್ಥರೆಂಬುವರನ್ನು ಶಿಷ್ಯರನ್ನಾಗಿ ಪಡೆದ ಮೇಲೆ ಸಮಾಧಿ ಹೊಂದಿದರು. ಕೇಶವೇಂದ್ರ ತೀರ್ಥರು ಆ ಮಠದ ಸನ್ಯಾಸಿಯಾಗಿದ್ದರು. ಈ ಕಡೆ ಗೋವೆಯಲ್ಲಿ ಕವಳೆ ಮಠದ ಸ್ವಾಮಿಗಳು ಯಾವಾಗ ಪೋರ್ಚುಗೀಸರ ದಬ್ಬಾಳಿಕೆ ಹೆಚ್ಚಾಯಿತು ಆಗ ಅವರು ಕಾಶಿಗೆ ಹೋಗಿ ನೆಲೆಸಿದರು. ಮೊದಲಿಗೆ ವಿಟ್ಠು ಪೈಯ ಹೆಂಡತಿಯಾದ ತುಳಸೀಬಾಯಿಯ ತಂದೆ ಅಪ್ಪಣ್ಣ ಭಟ್ಟರು ದಕ್ಷಿಣಕ್ಕೆ ಬಂದು ಕಾಶಿಮಠದ ಸ್ವಾಮಿಗಳ ಆಶ್ರಯ ಪಡೆದರು. ಈ ಮಠ ಇಪ್ಪತ್ತು ಮೂವತ್ತು ವರ್ಷಗಳ ಹಿಂದೆ ಹುಟ್ಟಿಕೊಂಡಿದ್ದು. ದಕ್ಷಿಣದಲ್ಲಿ ಗೋವೆಯ ಕಡೆಯಿಂದ ದಕ್ಷಿಣಕ್ಕೆ ಬಂದ ಸಾರಸ್ವತರೆಲ್ಲರೂ ಹೆಚ್ಚಾಗಿ ಕಾಶಿಮಠಕ್ಕೆ ನಡೆದುಕೊಳ್ಳುತ್ತಿದ್ದರು.

ದಕ್ಷಿಣ ಕನ್ನಡ ಮತ್ತು ಕೇರಳದಲ್ಲಿ ಕಾಶಿಮಠದ ಬಹುಸಂಖ್ಯೆಯ ಶಿಷ್ಯವರ್ಗದವರಿದ್ದಾರೆ. ಕಾಶಿಮಠದ ಶಾಖಾ ಮಠಗಳು ಕಾಶಿ ಪ್ರಯಾಗ, ಹರಿದ್ವಾರ, ಭಟ್ಕಳ, ಬಸ್ರೂರು, ಹೆಮ್ಮಾಜೆ, ಬಂಟ್ವಾಳ, ಮಂಜೇಶ್ವರ, ಪಣಂಬೂರು, ರಾಮೇಶ್ವರ, ಕಾರ್ಕಳ, ಭಾಗಮಂಡಲ (ಕೊಡಗು), ನಾರಾವಿ, ಆಲೆಪ್ಪಿ, ಕೊಂಚಾಡಿ, ತಿರುಪತಿ, ಬೆಂಗಳೂರುಗಳಲ್ಲಿವೆ. ಮಂಗಳೂರು ಮತ್ತು ಕಾರ್ಕಳಗಳಲ್ಲಿ ಪೌರೋಹಿತ್ಯ ಕಲಿಸುವ ಒಂದು ಶಾಖೆಯನ್ನು ಕಾಶಿಮಠವು ನಡೆಸುತ್ತದೆ.

ಸಮಾಜದ ಮೇಲೆ ಉತ್ತಮ ಸಂಸ್ಕಾರಗಳನ್ನು ಬಿಂಬಿಸುವಲ್ಲಿ ಮಠಗಳ ಪಾತ್ರವು ಮುಖ್ಯವಾಗಿದೆ. ಆಧ್ಯಾತ್ಮಿಕ ಮತ್ತು ನೈತಿಕ ಮೌಲ್ಯಗಳನ್ನು ಇಂದಿನ ಭೌತಿಕ ಲೋಲುಪತೆಯು ತುಂಬಿರುವ ಜಗತ್ತಿನಲ್ಲಿ ಎತ್ತಿ ಹಿಡಿಯುವ ಕಾರ್ಯವನ್ನು ಮಠಗಳು ಮಾಡಿವೆ. ಸಂಪತ್ತಿನ ಶೇಖರಣೆ ಮತ್ತು ಮನೋಕಾಮನೆ ಪೂರ್ತಿಯಾದಾಗ ಧರ್ಮವನ್ನು ಮರೆಯಬಾರದು. ಮನುಷ್ಯನ ಪರಮಗಮ್ಯವು ಮೋಕ್ಷವೆಂಬುದನ್ನು ಯಾವಾಗಲೂ ಅಲಕ್ಷಿಸಬಾರದೆಂದು ಮಠಗಳ ಸ್ವಾಮಿಗಳು ಪದೇ ಪದೇ ಉಪದೇಶಿಸಿ ಜಾಗೃತಿ ಉಂಟು ಮಾಡಿದ್ದಾರೆ. ಆ ಮೂಲಕ ಸಮಾಜ ಕೆಟ್ಟ ದಾರಿ ತುಳಿಯದಂತೆ ನೋಡಿಕೊಳ್ಳಲು ಮಠಗಳು ಸಹಕಾರಿಯಾಗಿವೆ.

ವೈಷ್ಣವಾರಾಧನೆ

ಸಾರಸ್ವತರು ಮೂಲತಃ ಶೈವ ಪಂಗಡಕ್ಕೆ ಸೇರಿದವರಾಗಿದ್ದ ಇವರು ಶಿವನ ಆರಾಧಕರಾಗಿದ್ದರು. ನಾನ್ನೂರು ವರ್ಷಗಳ ಹಿಂದೆ ಗೋವೆಗೆ ಮಧ್ವಾಚಾರ್ಯರು ಬಂದಿದ್ದರು. ಅವರು ಕವಳೆ ಮಠದ ಸ್ವಾಮಿಗಳನ್ನು ಕೊಂಕಣಿ ಭಾಷೆಯಲ್ಲಿಯೇ ವಾದ ಮಾಡಿ ಸೋಲಿಸಿದ್ದರಂತೆ. ಅದರಿಂದಾಗಿಯೇ ಸಾರಸ್ವತರು ಶಿವನ ಜೊತೆ ವಿಷ್ಣುವನ್ನು ಪೂಜಿಸುವ ವಿಷಯವು ಕಾದಂಬರಿಯಲ್ಲಿ ಬರುವ ಮರ್ತು ಕಿಣಿ ಪಾತ್ರ ಉಡುಪಿಗೆ ಬಂದಾಗ ತಿಳಿಸುತ್ತದೆ. ಇಲ್ಲಿ ಗೋವಾದಿಂದ ತೆಂಕ ದಿಕ್ಕಿಗೆ ಬಂದಾಗ ಗೋವಾದಲ್ಲಿರುವ ಇವರ ಮೂಲ ದೇವಸ್ಥಾನಗಳು ಈಶ್ವರನಿಗೆ ಅಥವಾ ಪಾರ್ವತಿಗೆ ಸಂಬಂಧಪಟ್ಟವು. ಬಂಗಾಳ, ಒರಿಸ್ಸಾದವರು, ವೈಷ್ಣವಾರಾಧಕರು, ಕೃಷ್ಣನ ಭಕ್ತರು, ಮಧ್ವಾಚಾರ್ಯರ ಶಿಷ್ಯ ಪರಂಪರೆಯ

ಪದ್ಮನಾಭಾಚಾರ್ಯರ ಪ್ರಭಾವದಿಂದ ಗೌಡ ಸಾರಸ್ವತರ ಒಂದು ವರ್ಗ ವೈಷ್ಣವಾರಾಧನೆಗೆ ಪರಿವರ್ತಿತರಾದರು. ಇದರಿಂದಾಗಿ ಅವರು ಲಕ್ಷ್ಮಿ ಹಾಗೂ ವೆಂಕಟರಮಣನ ದೇವಸ್ಥಾನಗಳನ್ನು ತುಳುನಾಡಿನಲ್ಲಿ ಕಟ್ಟಿಕೊಂಡರು. ಕ್ರಮೇಣ ವೈಷ್ಣವ ಸಂಪ್ರದಾಯದ ಕಾಶಿಮಠ ಹಾಗೂ ಗೋಕರ್ಣ ಪರ್ತಗಾಳಿ ಮಠಗಳನ್ನು ಇವರು ಸ್ಥಾಪಿಸಿಕೊಂಡರು.

ಆದರೂ ತಮ್ಮ ಮೂಲ ದೇವಸ್ಥಾನಗಳಲ್ಲಿರುವ ರಾಮನಾಥಿ, ಕಾಮಾಕ್ಷಿ ಮಂಗೇಶ, ಮಹಾದೇವ, ಮಹಾಲಕ್ಷ್ಮಿ, ಮಹಾಲಸಾ, ನಾಗೇಶ, ಸಪ್ತ ಕೋಟೇಶ್ವರ, ಗಣಪತಿ, ರವಳನಾಥ ಮುಂತಾದ ಶಿವಸ್ವರೂಪಿ ಕುಲದೇವರ ಆರಾಧನೆಯನ್ನು ಇವರು ಈ ತನಕವೂ ಕೈಬಿಟ್ಟಿಲ್ಲ. ಪ್ರಾಚೀನವಾದ ಗೋವೆಯ ಕೈವಲ್ಯಮಠ ಈಗಲೂ ಶೈವಾರಾಧನೆ ನಡೆಸುತ್ತದೆ. ಗೌಡ ಸಾರಸ್ವತರ ಒಂದು ವರ್ಗ ಕೈವಲ್ಯ ಮಠದ ಶಿಷ್ಯರಾಗಿದ್ದಾರೆ ಹಾಗೂ ಕಾಶಿಮಠದ ಸಾರಸ್ವತರು ವೈಷ್ಣವ ಆರಾಧಕರೂ ಕೂಡಾ ಆಗಿದ್ದಾರೆ.

ವಿಷ್ಣುಮೂರ್ತಿ ದೈವದ ಆರಾಧನೆ

ತುಳುನಾಡಿಗೆ ಒಳಪಟ್ಟ ದಕ್ಷಿಣ ಕನ್ನಡ, ಉಡುಪಿ ಹಾಗೂ ಕೇರಳದ ಕಾಸರಗೋಡಿನಲ್ಲಿ ನಾಗಾರಾಧನೆ ಮತ್ತು ಭೂತಾರಾಧನೆಗಳು ತುಳು ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿವೆ. ಇವೆರಡನ್ನು ಹೊರತುಪಡಿಸಿ ತುಳು ಸಂಸ್ಕೃತಿಯನ್ನು ನಾವು ಕಾಣಲು ಸಾಧ್ಯವಿಲ್ಲ, ಹಾಗೆಯೇ ಸಾರಸ್ವತ ಕುಟುಂಬಗಳು ಕರ್ನಾಟಕದ ತುಳುನಾಡಿನಲ್ಲಿ ಬಂದು ನೆಲೆಸಿದ ನಂತರ ಆ ಮನೆತನಗಳು ಕೂಡಾ ನಾಗಾರಾಧನೆ ಮತ್ತು ಭೂತಾರಾಧನೆಯ ಆಚರಣೆಯಲ್ಲಿ ತೊಡಗಿದವು. ಕುಂಬಳೆಯ ಪರಿಸರದಲ್ಲಿ ನೆಲೆನಿಂತ ವಿಟ್ಠು ಪೈ ಕುಟುಂಬ ಅವನ ಮೊಮ್ಮಗ ರಾಮಚಂದ್ರ ಪೈನಿಂದ ಹಿಡಿದು ಮುಂದಿನ ತಲೆಮಾರುಗಳು ಇಲ್ಲಿನ ಸ್ಥಳೀಯ ಸಂಸ್ಕೃತಿಯನ್ನು ತಮ್ಮ ಸಾರಸ್ವತ ಸಂಸ್ಕೃತಿಯೊಂದಿಗೆ ಮಿಳಿತಗೊಂಡವು. ಅದರಲ್ಲಿ ರಾಮಚಂದ್ರ ಪೈ ಬಂಬ ಮಣಿಯಾಣಿಯ ಬಳ್ಳಂಬೀಡಿನ ಜಮೀನು ಖರೀದಿಸಲು ಹೋದ ಸಂದರ್ಭದಲ್ಲಿ ಆತ ವಿಷ್ಣು ಮೂರ್ತಿ ದೈವದ ತಂಬಿಲದಲ್ಲಿ ಭಾಗವಹಿಸುತ್ತಾನೆ. ಸಾರಸ್ವತ ಸಮಾಜದಲ್ಲಿ ಹುಟ್ಟಿ ಆತ ಭೂತಾರದನೆಯಲ್ಲಿ ಪಾಲ್ಗೊಳ್ಳುವಂತಿಲ್ಲ ಏಕೆಂದರೆ ಭೂತಾರಾಧನೆಯನ್ನು ಮಾಡುವವರು ದಲಿತರು ಮತ್ತು ಶೂದ್ರರು. ಇಲ್ಲಿ ವಿಷ್ಣುಮೂರ್ತಿ ದೈವಾರಾಧನೆಯಲ್ಲಿ ರಾಮಚಂದ್ರ ಪೈಗೆ ಆಸಕ್ತಿ ಬೆಳೆದದ್ದು ಬಳ್ಳಂಬೀಡಿನ ಸಂಪದ್ಭರಿತ ಆಸ್ತಿಯನ್ನು ಕೊಳ್ಳಬೇಕು ಎಂಬ ಕಾರಣದಿಂದಲೇ. ಜೊತೆಗೆ ಇದೇ ಬಳ್ಳಂಬೀಡನ್ನು ಕಾಯುತ್ತಿರುವುದು ಈ ವಿಷ್ಣುಮೂರ್ತಿ ದೈವ ಎಂದು ಬಂಬ ಮಣಿಯಾಣಿ ಹೇಳುತ್ತಾನೆ. ಜೊತೆಗೆ ವಿಷ್ಣುಮೂರ್ತಿಯ ಕಥೆಯನ್ನು ಸಹ ರಾಮಚಂದ್ರ ಪೈಗೆ ತಿಳಿಸುತ್ತಾನೆ.

ವಿಷ್ಣುಮೂರ್ತಿ ದೈವ ಸಾಕ್ಷಾತ್ ವಿಷ್ಣು ದೇವರ ನರಸಿಂಹಾವಾತಾರ. ಕಾಸರಗೋಡಿನ ನೀಲೇಶ್ವರ ಎಂಬ ಊರಿನಲ್ಲಿ ಬಹಳ ಹಿಂದೆ ಕುರುವಟ್ಟಂ ಕುರುಪನೆಂಬ ಜಮೀನ್ದಾರನೊಬ್ಬನಿದ್ದ. ಜೊತೆಗೆ ಆತನ ಮನೆಯಲ್ಲಿ ಆಳುಕಾಳುಗಳು ಹಸುರಾಸುಗಳಿಗೂ ಏನೂ ಕಡಿಮೆಯಿರಲಿಲ್ಲ. ಅವರ ಆಳುಗಳಲ್ಲಿ ಒಬ್ಬ ತೀಯ ಜಾತಿಯ ಹುಡುಗನಾಗಿ ಜನ್ಮವೆತ್ತಿ ಬಂದವನು ಈ ವಿಷ್ಣುಮೂರ್ತಿ. ಈತನ ಹೆಸರು ಪಲಮತಾವಿ ಕಣ್ಣ ಎಂದು. ಕಣ್ಣಾ ಎಂದು

ಇವನನ್ನು ಕರೆಯುತ್ತಿದ್ದರು. ಕಣ್ಣಾ ದನಕಾಯುವ ಹುಡುಗ, ಹೇಳಿದ ಕೆಲಸ ಮಾಡಿಕೊಂಡು ಹಾಕಿದ ಅನ್ನ ಉಂಡು, ಚಾಪೆ ಬಿಡಿಸಿ ಬಿದ್ದುಕೊಳ್ಳುವವ, ಲಕ್ಷಣವಾದ ಹುಡುಗ, ಚುರುಕು ಬುದ್ದಿ, ಎಲ್ಲರಿಗೂ ಪ್ರೀತಿಪಾತ್ರನಾದವನು. ಕುರುವಟ್ಟಂ ಕುರುಪನಿಗೆ ಕೂಡಾ ಕಣ್ಣನೆಂದರೆ ತುಂಬಾ ಪ್ರೀತಿಯಿದ್ದಿತು. ಆದರೆ ಆ ಹುಡುಗ ಕುರುಪನ ಮಗಳ ಮೇಲೆ ಮೋಹಿತನಾದನು, ಜೊತೆಗೆ ಆಕೆಯೂ ಅವನ ಮೇಲೆ ಅನುರಕ್ತಳಾದುದರಿಂದ ದೇಹ ಸಂಬಂಧವು ಆಯಿತು. ಈ ವಿಷಯವು ಕುರುಪನಿಗೆ ತಿಳಿಯಿತು. ಇದರಿಂದ ಕುರುಪನಿಗೆ ವಿಪರೀತ ಸಿಟ್ಟು ಬಂದಿತ್ತು. ಈ ವಿಷಯ ಕಣನಿಗೂ ತಿಳಿಯಿತು. ಧನಿಯ ಶಿಕ್ಷೆಗೆ ಹೆದರಿ ಕಣ್ಣ ಊರು ಬಿಟ್ಟು ಉತ್ತರದ ದಿಕ್ಕಿಗೆ ಹೋದನು. ಆತ ದೂರವೇನೂ ಹೋಗಲಿಲ್ಲ. ಮಂಗಳೂರಿನಲ್ಲಿ ಒಬ್ಬ ಬ್ರಾಹ್ಮಣ ಹೆಂಗಸಿನ ಊಳಿಗಕ್ಕೆ ಸೇರಿಕೊಂಡನು. ಆ ಬ್ರಾಹ್ಮಣ ಹೆಂಗಸು ನರಸಿಂಹ ದೇವರ ಭಕ್ತೆ. ಮನೆಯಲ್ಲಿ ದಿನಾ ಪೂಜೆ ಪುನಸ್ಕಾರ ಮಾಡುತ್ತಿದ್ದಳು. ಕೆಲವು ವರ್ಷಗಳ ನಂತರ ಕಣ್ಣ ಊರಿಗೆ ಹೊರಡಲು ನಿರ್ಧರಿಸಿದ. ಆಗ ಬ್ರಾಹ್ಮಣ ಹೆಂಗಸಿಗೆ ಕಣ್ಣನ ಮೇಲೆ ಅತ್ಯಂತ ಪ್ರೀತಿ. ಹೊರಟು ನಿಂತ ಅವನಿಗೆ ದಾರಿಯ ಬಿಸಿಲಿನಿಂದ ರಕ್ಷಿಸಿಕೊಳ್ಳಲು ಒಂದು ಬೆಳ್ಗೊಡೆಯನ್ನು, ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಒಂದು ಖಡ್ಗವನ್ನು ಕೊಟ್ಟು ಕಣ್ಣೀರು ಹಾಕಿ ಹರಸಿ ಬೀಳ್ಕೊಟ್ಟಳು. ನೀಲೇಶ್ವರದ ಬಳಿಯ ಪದ್ಮ ಸರೋವರದಲ್ಲಿ ಮಿಂದು ಮೇಲೆದ್ದ ಕಣ್ಣ. ಅವನು ಬಂದ ವಿಚಾರ ಕುರುವಟ್ಟಂ ಕುರುಪ್‌ಗೆ ಯಾರೋ ತಿಳಿಸಿದರು. ವರುಷಗಳೂ ಕಳೆದಿದ್ದರೂ ಕುರುಪನ ದ್ವೇಷ ಆರಿರಲಿಲ್ಲ. ದನಕಾಯುತ್ತಿದ್ದ ಹುಡುಗ ಮರಳಿ ಬಂದಿದ್ದಾನೆಂದು ತಿಳಿಯುತ್ತಲೇ ಆತ ಕತ್ತಿ ಹಿಡಿದು ಏರಿ ಬಂದನು. ಕುರುಪ ಜಮೀನ್ದಾರನಾಗಿದ್ದರಿಂದ ಅವನ ಹಿಂದೆಯೇ ಅನೇಕ ಆಳುಗಳು ಕೂಡಾ ಬಂದರು. ಪಲಮತಾವಿ ಕಣ್ಣ ಒಬ್ಬನೇ ಆಗಿದ್ದರಿಂದ ಎಷ್ಟು ಹೋರಾಡಿಯಾನು. ಕುರುಪನ ಕತ್ತಿ ಅವನ ಎದೆ ಸೀಳಿತು. ಕಣ್ಣ ಕೆಳಗೆ ಬಿದ್ದ. ಆ ಸಂದರ್ಭದಲ್ಲಿ ಒಂದು ಪವಾಡ ನಡೆಯಿತು. ಕಣ್ಣನೇನೋ ಸತ್ತು ಬಿದ್ದಿದ್ದ. ಆದರೆ ಆ ಬ್ರಾಹ್ಮಣ ಹೆಂಗಸು ಹರಸಿ ಕೊಟ್ಟ ಖಡ್ಗ ಮಾತ್ರ ಗಾಳಿಯಲ್ಲಿ ಗರಗರ ತಿರುಗತೊಡಗಿತು. ಬಾಳೆಯ ದಿಂಡನ್ನು ಕಡಿದಂತೆ ಕುರುಪನ ರುಂಡವನ್ನು ಖಡ್ಗ ಕಡಿಯಿತು. ಅವನ ಆಳುಗಳು ಅಲ್ಲಿಂದ ಓಡಿ ಹೋದರು, ಆದರೆ ಖಡ್ಗ ಅವರನ್ನು ಓಡಿಸಿಕೊಂಡು ಹೋಯಿತು. ಒಬ್ಬೊಬ್ಬರನ್ನಾಗಿ ಕೊಲ್ಲುತ್ತಾ ಬಂದ ಖಡ್ಗ ಕಣ್ಣ ಇಳಿದು ಸ್ನಾನ ಮಾಡಿದ ಪದ್ಮ ಸರೋವರದ ಬಳಿಗೆ ಹೋಗಿ ಅಲ್ಲಿದ್ದ ಕಮಲದ ಹೂಗಳನ್ನು ಚೂರು ಚೂರು ಮಾಡಿತು. ಖಡ್ಗವೊಂದು ತಾನೇ ತಾನಾಗಿ ನೀರ ಮೇಲೆ ಹಾದು ಕಮಲದ ದಂಟುಗಳನ್ನು ಕತ್ತರಿಸಿಕೊಂಡು ಹೋಗುವುದನ್ನು ನೋಡಿದರೆ ಯಾರಿಗೆ ಹೆದರಿಕೆಯಾಗದೆ ಇದ್ದೀತು? ಕೊನೆಗೆ ಕೊಟ್ಟಪ್ಪುರಂ ಎಂಬ ಹಳ್ಳಿಯ ಬೆಸ್ತನ ಮನೆಗೆ ಹೋದ ಖಡ್ಗ ಶಾಂತವಾಯಿತು. ಕಣ್ಣನ ಸಾವಿನಿಂದ ಕುರುವಟ್ಟಂ ಕುರುಪನ ಮನೆಯಲ್ಲಿ ಭೀಕರ ಅನಾಹುತಗಳು ಉಂಟಾದವು. ನರಸಿಂಹ ಭಕ್ತ, ಸಾಕ್ಷಾತ್ ನರಸಿಂಹನೇ ಆದ ಕಣ್ಣ, ಅವನ ಕೋಪ ಕುರುಪನ ಸಂಸಾರದ ಮೇಲೆ ಬಿದ್ದು ಅವನ ಸಂಸಾರದವರೆಲ್ಲ ಕಾರಣವಿಲ್ಲದೆ ತೀರಿಕೊಂಡರು. ಹಟ್ಟಿ ತುಂಬಿದ ಹಸುಗಳಿಂದ ಹಿಡಿದು ತೊಟ್ಟಿಲ ಕೂಸು ಕೂಡಾ ಒಂದೊಂದಾಗಿ ಸತ್ತವು. ಕುರುವಟ್ಟಂ ಕುರುಪನ ಸಂತತಿ ನಿಶ್ಶೇಷವಾಗಿ ಹೋಯಿತು ಎಂಬ ವಿಷ್ಣುಮೂರ್ತಿ ದೈವದ ಕಥೆಯನ್ನು ಬಂಬ ಮಣಿಯಾಣಿ ತಿಳಿಸಿದ್ದನು.

ವಿಷ್ಣು ಮೂರ್ತಿ ತಂಬಿಲ ನಡೆಯುವ ಸಂದರ್ಭದಲ್ಲಿ ರಾಮಚಂದ್ರ ಪೈ ನಡುಗುತ್ತಾ ಕುಣಿಯುವ ಭೂತದ ಎದುರು ಅಡಕೆಯ ಹೂಗಳ ಗೊಂಚಲನ್ನು ಹಿಡಿದು ಕೈ ಜೋಡಿಸಿ ನಿಂತು ಬಳ್ಳಂಬೀಡಿನ ಆಸ್ತಿಯನ್ನು ತಾನು ಕೊಂಡರೆ ಊರ್ಜಿತನಾದೇನೇ ಎಂದು ಕೇಳುವ ತವಕದಲ್ಲಿದ್ದ. ಆದರೆ ಅದು ಮಣಿಯಾಣಿಗೆ ಗೊತ್ತಾಗಿ ವ್ಯವಹಾರಕ್ಕೆ ಮೋಸವಾದೀತು ಎಂದು ಬಾಯಿ ಮುಚ್ಚಿಕ್ಕೊಂಡ ಜೊತೆಗೆ ಆತ ಆ ಜಮೀನು ತೆಗೆದುಕೊಂಡರೆ ದೆವ್ವಗಳು ತುಂಬಿದ ಊರು, ಈ ದೆವ್ವಗಳನ್ನು ಭೂತಪ್ರೇತಗಳನ್ನು ಅಲ್ಲಿಯ ಜನ ಪೂಜಿಸುವರೇ. ಆದರೆ ಬ್ರಾಹ್ಮಣನಾಗಿ ತಾನು ಅವರ ತಂಬಿಲ, ಕೋಲ, ಇತ್ಯಾದಿ ನಡೆಸಲು ಸಾಧ್ಯವಾಗಲಿಕ್ಕಿಲ್ಲ. ಒಂದು ವೇಳೆ ಅದನ್ನು ನಡೆಸಲಿಲ್ಲ ಎಂದು ಅವುಗಳು ಮುನಿದುಕೊಂಡರೆ ಏನು ಮಾಡುವುದು ಎಂಬ ಹೆದರಿಕೆ. ಈ ರೀತಿಯು ಇರಬೇಕಾದರೆ ಕೊನೆಗೆ ಬಳ್ಳಂಬೀಡು ಕೊಂಡ ಮೇಲೆ ವಿಷ್ಣು ಮೂರ್ತಿ ದೈವಕ್ಕೆ ಸ್ವಲ್ಪ ಮಟ್ಟಿಗೆ ನಡೆದುಕೊಳ್ಳತೊಡಗಿದ.

ಮುಂದೆ ರಾಮಚಂದ್ರ ಪೈಯ ಎರಡನೇ ಮಗ ಮಂಗಲಪಾಡಿಯ ಅನಂತಯ್ಯನ ಮಗಳನ್ನು ಮೆಚ್ಚಿಕೊಂಡಿರುತ್ತಾನೆ. ಆತ ಅವಳನ್ನು ಮದುವೆಯಾಗಬೇಕೆಂದು ನಿರ್ಧರಿಸಿಕೊಂಡಿರುತ್ತಾನೆ. ಆದರೆ ಅದಕ್ಕೆ ರಾಮಚಂದ್ರ ಪೈ ಮತ್ತು ಅವನ ಪತ್ನಿ ಪಾರ್ವತಿ ಬಾಯಿ ಒಪ್ಪುವುದಿಲ್ಲ. ಕಾರಣವೆಂದರೆ ಅನಂತಯ್ಯನ ಮೊದಲ ಮಗಳನ್ನು ಇವರ ಹಿರಿಯ ಮಗನಿಗೆ ಮದುವೆ ಆಗಿರುವುದು ಅಕ್ಕ ತಂಗಿಯರನ್ನು ಅಣ್ಣ ತಮ್ಮಂದಿರಿಗೆ ತರುವುದು ಸರಿಯಲ್ಲ ಎಂದು ಈ ಸಂಬಂಧ ಬೇಡ ಎನ್ನುತ್ತಾರೆ. ಆದಕ್ಕೆ ತಿಮ್ಮ ಪೈ ಬೀರಣ್ಣ ಬಂಟನೊಡನೆ ವಿಷ್ಣು ಮೂರ್ತಿ ದೈವದ ತಂಬಿಲ ನಡೆಯುವ ಅಮಾವಾಸ್ಯೆಯಂದು ಹೋಗಿ ಅಲ್ಲಿ ವಿಷ್ಣುಮೂರ್ತಿ ದೈವದ ಮುಂದೆ ಪ್ರಶ್ನೆಯನ್ನು ಕೇಳುತ್ತಾನೆ. ಇಲ್ಲಿಯೂ ಕೂಡಾ ರಾಮಚಂದ್ರ ಪೈಗೆ ಕಸಿವಿಸಿ ಉಂಟಾಗುತ್ತದೆ. ತನ್ನ ಮಗ ಬ್ರಾಹ್ಮಣನಾಗಿ ಭೂತದ ಎದುರು ತಲೆಬಾಗುತ್ತಾನೆ ಎಂದು. ಆದರೆ ತಿಮ್ಮ ಪೈಗೆ ತಾನು ಬಯಸಿದ ಹೆಣ್ಣು ತನ್ನನ್ನು ಮದುವೆಯಾದರೆ ಸಾಕು ಎಂಬ ಭಾವನೆಯಲ್ಲಿ ವಿಷ್ಣುಮೂರ್ತಿ ದೈವವನ್ನು ನಂಬುತ್ತಾನೆ. ಅಮಾವಾಸ್ಯೆಯ ದಿನ ತಂಬಿಲ ನಡೆಯಿತು. ಗುತ್ತಿನ ಮಾಂಕುವಿನ ಮೈಮೇಲೆ ಬಂದ ವಿಷ್ಣುಮೂರ್ತಿ ದೈವದ ಎದುರು ನಿಂತು ಅವನು ಕೇಳಿದ ಪ್ರಶ್ನೆಗೆ ಅದು "ಗಂಡು ಹೆಣ್ಣು ಮನಸ್ಸು ಕೊಡುವುದು ಮುಖ್ಯ. ಜಾತಕ ಸೇರಿಲ್ಲ ಅನ್ನುವುದು ಸರಿಯಲ್ಲ. ಹುಟ್ಟಿದ ಘಳಿಗೆ ಅದರಲ್ಲಿ ಬರೆದದ್ದೇ ಹೇಗೆ? ಈ ಗಂಡಿಗೆ ಇದೇ ಹೆಣ್ಣು ಅಂತ ಮೊದಲೇ ಬರೆದಿದೆ ಅಂತಾದರೆ ಅದನ್ನು ತಪ್ಪಿಸುವವರು ಸುಖಪಡಲಾರರು" ಹದಿನೆಂಟು ಎಳನೀರು, ಮೂರು ಅಡಿಕೆಯ ಹೂವು, ಒಂದು ಗೊಂಚಲು ಹಣ್ಣಡಿಕೆ, ಒಂದು ಮುಡಿ ಅಕ್ಕಿ ನನಗೆ ಮುಟ್ಟಿಸಿ. ನೀವು ಬ್ರಾಹ್ಮಣರು ಹಾಗಾಗಿ ನಾನು ಕೋಳಿ ಕೇಳುವುದಿಲ್ಲ. ಅದರಂತೆ ತಿಮ್ಮ ಪೈ ದೈವ ಕೇಳಿದ ಎಲ್ಲವನ್ನೂ ನೀಡಿದನು. ಆ ಮುಖಾಂತರವಾಗಿ ದೈವಕ್ಕೆ ಕಾಣಿಕೆಯನ್ನು ಅರ್ಪಿಸಿದರು. ಎಷ್ಟೇ ವಿರೋಧಿಸಿದರೂ ತಂಬಿಲ ನಡೆದ ದಿನ ರಾಮಚಂದ್ರ ಪೈಯು ಅಲ್ಲಿಗೆ ಹೋಗಿದ್ದ. ಊರಿನ ಗುರಿಕಾರನಾಗಿ ಅವನಿಗೊಂದು ಮುಖ್ಯ ಸ್ಥಾನವಿತ್ತು. ದೈವಕ್ಕೆ ಎದುರಾಗಿ ಹೋಗುವ ಧೈರ್ಯವಿಲ್ಲದೆ ಅದು ಹೇಳಿದ್ದನ್ನೆಲ್ಲಾ ಆತ ಕೊಟ್ಟನು, ಆ ಮುಖಾಂತರ ದೈವಕ್ಕೆ ನಡೆದುಕೊಂಡನು.

ಧರ್ಮಸ್ಥಳದ ಮಂಜುನಾಥನನ್ನು ಕುಲದೈವವಾಗಿ ಸ್ವೀಕರಿಸುವುದು

ಕಾದಂಬರಿಯಲ್ಲಿ ಬರುವ ವಿಟ್ಠು ಪೈಯ ಕುಟುಂಬದವರು ಮೂಲತಃ ಗೋವೆಯವರು, ಕೌಂಶ ಗೋತ್ರದವರು. ಅವರ ಕುಲದೈವ ಮ್ಹಾಳಶಿಮಾಂಯಿ. ಆದರೆ ಅವರು ಕರ್ನಾಟಕದ ಕರಾವಳಿ ತೀರ ಪ್ರದೇಶಕ್ಕೆ ಬಂದು ನೆಲೆಸಿದ ನಂತರ ಧರ್ಮಸ್ಥಳದ ಮಂಜುನಾಥನನ್ನು ತಮ್ಮ ಕುಲದೈವವಾಗಿ ಸ್ವೀಕರಿಸುತ್ತಾರೆ. ಇದು ಕೂಡಾ ಅವರ ಸಾಂಸ್ಕೃತಿಕ ಪಲ್ಲಟವೇ ಆಗಿದೆ. ಇದಕ್ಕೆ ಬಹುಮುಖ್ಯ ಕಾರಣವಾಗುವುದು ತುಳುನಾಡಿನಲ್ಲಿ ಜೈನ ಅರಸರು ನಂಬಿಕೊಂಡಿದ್ದದ್ದು ಧರ್ಮಸ್ಥಳದ ಮಂಜುನಾಥನನ್ನು. ಸಹಜವಾಗಿಯೇ ಅವರ ಕೈಕೆಳಗಿದ್ದ ಬಲ್ಲಾಳರೂ ಮಂಜುನಾಥನನ್ನು ತಮ್ಮ ಆರಾಧ್ಯ ದೈವವಾಗಿ ಸ್ವೀಕರಿಸಿದರು. ತಾವು ಆಳುತ್ತಿದ್ದ ನೆಲದಲ್ಲಿ ಬೆಳೆದ ಫಸಲಿನ ಮೊದಲ ಒಂದು ಭಾಗವನ್ನು ಅವನಿಗೆ ತೆಗೆದಿಡುತ್ತಿದ್ದರು. ಯಾವುದೇ ಕಾರ್ಯ ಮಾಡುವ ಮುನ್ನ ಮಂಜುನಾಥನಿಗೆ ಕಾಣಿಕೆ ತೆಗೆದಿಡುವುದು ಅವರ ಕ್ರಮವಾಗಿತ್ತು. ಯುದ್ಧಕ್ಕೆ ಹೊರಡುವಾಗ ಮದುವೆ ನಿಶ್ಚಯಿಸಿದಾಗ, ರೋಗರುಜಿನಗಳು ಬಂದಾಗ ಮಂಜುನಾಥನನ್ನು ನೆನೆಯುತ್ತಿದ್ದರು. ಬಳ್ಳಂಬೀಡಿನಲ್ಲಿ ಬಲ್ಲಾಳರ ಆಳ್ವಿಕೆ ಇದ್ದಾಗ ಬಲ್ಲಾಳರು ವರ್ಷಂಪ್ರತಿ ಧರ್ಮಸ್ಥಳದ ಯಾತ್ರೆಗೆ ಹೋಗುತ್ತಿದ್ದರು. ಗಾಡಿಯ ತುಂಬಾ ತರಕಾರಿ, ಅಕ್ಕಿ, ಬೆಲ್ಲ, ಬಾಳೆ ಹಣ್ಣು, ಕಾಯಿ ಇತ್ಯಾದಿಗಳನ್ನು ಹೇರಿಕೊಂಡು ಹೋಗುತ್ತಿದ್ದರು. ಅದೇ ರೀತಿ ಬಂಬ ಮಣಿಯಾಣಿಯೂ ಮುಂದುವರೆಸಿಕೊಂಡು ಬಂದನು. ಧರ್ಮಸ್ಥಳವನ್ನು ದೊಡ್ಡ ಕಡೆಯೆಂದೂ ಅಲ್ಲಿಯ ದೇವರು ಕಾರಣಿಕಕ್ಕೆ ಹೆಸರಾದವರೆಂದೂ, ಅವನು ಮುನಿದರೆ ತಮ್ಮ ಅಂತ್ಯವಾಗುತ್ತದೆ ಎಂದೂ ಹೆದರಿ ದೇವರಿಗೆ ಪೂಜೆ ಸಲ್ಲಿಸುತ್ತಿದ್ದರು.

ಇಕ್ಕೇರಿಯ ವೆಂಕಟಪ್ಪ ನಾಯಕ ತುಳುನಾಡನ್ನು ಆಕ್ರಮಿಸಿಕೊಂಡ ಮೇಲೆ ಕಂದಾಯದ ರೂಪದಲ್ಲಿ ಹೊನ್ನನ್ನು ಕೊಡುವುದು ಆರಂಭವಾಯಿತು. ಬಂಬ ಮಣಿಯಾಣಿ ಧರ್ಮಸ್ಥಳದ ಹೆಗ್ಗಡೆಯವರೊಡನೆ ಹೇಳಿ ಹಣದ ರೂಪದಲ್ಲಿ ಹರಕೆ ಈಡೇರಿಸುತ್ತೇನೆ ಎಂದು ತಿಳಿಸಿದನು. ಹೆಗ್ಗಡೆಯವರು ಮಂಜುನಾಥನ ಇಚ್ಛೆ ಹೇಗೋ ಹಾಗೆ ಎಂದು ತಿಳಿಸಿದರು. ಅಂದಿನಿಂದ ಮಣಿಯಾಣಿ ಹಣದ ರೂಪದಲ್ಲಿ ದೇವರ ಕಾಣಿಕೆ ಅರ್ಪಿಸಿ ಹಿಂದಿನಿಂದ ಬೆಳೆದುಬಂದ ಪದ್ಧತಿಯನ್ನು ಮುಂದುವರಿಸಿದ್ದನು.

ಬೇಳಕಟ್ಟೆ ರಾಮಚಂದ್ರ ಪೈ ಬಳ್ಳಂಬೀಡಿನ ಆಸ್ತಿಯನ್ನು ಕೊಳ್ಳುವಾಗ ಮಣಿಯಾಣಿ "ಪೈಗಳೇ ಈ ಭೂಮಿ ಧರ್ಮಸ್ಥಳದ ಮಂಜುನಾಥನಿಗೆ ಸೇರಿದ್ದು. ಯಾರೇ ರಾಜರಾಗಿರಲಿ, ಯಾರಿಗೇ ಕಂದಾಯ ಕೊಡುವುದಾಗಿರಲಿ, ಮಂಜುನಾಥನಿಗೆ ಕಾಣಿಕೆ ಮುಟ್ಟಬೇಕು, ಅದು ಈ ಭೂಮಿಯನ್ನು ನಾವು ಅನುಭವಿಸುತ್ತಿರುವುದಕ್ಕೆ ನಾವು ಕೊಡುವ ಗೇಣಿ. ನೀವು ಅದನ್ನು ಮುಂದುವರಿಸಬೇಕು. ಹಾಗೆ ಮಾಡಿದರೆ ಭೂಮಿ ಪಡೆದ ನಿಮ್ಮ ಕುಟುಂಬವೂ ಕೊಟ್ಟ ನಮ್ಮ ಕುಟುಂಬವೂ ಅಭಿವೃದ್ಧಿಗೊಂಡೀತು" ಎಂದು ತಿಳಿಸಿದನು. ಅದರಂತೆ ಧರ್ಮಸ್ಥಳ ದೇವರ ಸನ್ನಿಧಿಯಲ್ಲಿಯೇ ಆಸ್ತಿ ಪರಭಾರೆ ಮಾಡಿ ಕೊಟ್ಟನು. ಅದೇ ರೀತಿ ತಾನು ಕೂಡಾ ನಡೆದುಕೊಳ್ಳುವುದಾಗಿ ಮಂಜುನಾಥನ ಮೇಲೆ ಹರಕೆ ಮಾಡಿದರು. ಧರ್ಮಸ್ಥಳದ ಮಂಜುನಾಥನ ಕೃಪೆಯಿಂದಾಗಿ ಬಳ್ಳಂಬೀಡುವಿನಲ್ಲಿ ಚಿನ್ನದ ಫಸಲು ಬಂದಿತ್ತು. ಹಂತಹಂತವಾಗಿ

ರಾಮಚಂದ್ರ ಪೈ ಕುಟುಂಬ ಆರ್ಥಿಕವಾಗಿ ಅಭಿವೃದ್ಧಿಯಾಯಿತು. ಅದರಂತೆ ವರ್ಷಂಪ್ರತಿ ಮಂಜುನಾಥನಿಗೆ ಕಾಣಿಕೆಯನ್ನು ಅರ್ಪಿಸತೊಡಗಿದ ಮುಂದೆ ಮನೆಯ ಎಲ್ಲಾ ಶುಭ ಸಮಾರಂಭಗಳಲ್ಲಿ ಮಂಜುನಾಥನನ್ನು ಪೂಜಿಸುವಂಥ ರೂಢಿ ಪ್ರಾರಂಭವಾಯಿತು. ನಂತರ ತಮ್ಮ ಕುಲ ದೇವರಾಗಿ ಸ್ವೀಕರಿಸಿದರು. ಅದರಂತೆ ನಡೆದುಕೊಂಡರು. ಮಂಜುನಾಥನ ಮೇಲೆ ಆಣೆ ಮಾಡಿದ ಶಿವಪ್ಪಯ್ಯ ಕೊನೆಯವರೆಗೂ ರಾಮಚಂದ್ರ ಪೈಯ ಮನೆಯ ಬಳ್ಳಂಬೀಡಿಗೆ ಬರಲಿಲ್ಲ. ಹಾಗೇ ಆಣೆ ಹಾಕಿದ ಹಾಗೆ ನಡೆದುಕೊಂಡರು. ಹೀಗೆ ಸಾರಸ್ವತ ಜನಾಂಗಕ್ಕೆ ಸೇರಿದ ರಾಮಚಂದ್ರ ಪೈ ಕುಟುಂಬ ತಮ್ಮ ಜೀವತಾವಧಿಯವರೆಗೂ ಧರ್ಮಸ್ಥಳದ ಮಂಜುನಾಥನನ್ನು ಕುಲದೈವವಾಗಿ ಸ್ವೀಕರಿಸಿ ಕಾಲಕಾಲಕ್ಕೆ ಕಾಣಿಕೆಗಳನ್ನು ಅರ್ಪಿಸಿ ಆ ದೇವರ ಒಲುಮೆಗೆ ಪಾತ್ರರಾದರು. ಇಲ್ಲಿ ನಾವು ಬಹಳ ಮುಖ್ಯವಾಗಿ ಗಮನಿಸಬೇಕಾದದ್ದು ಈ ಕಾದಂಬರಿಯ ಸಾರಸ್ವತ ಕುಟುಂಬಗಳ ಮೂಲ ನೆಲೆ ಗೋವಾ, ಆದರೆ ಅವರು ತುಳುನಾಡಿಗೆ ಬಂದು ನೆಲೆಸಿದ ನಂತರ ಇಲ್ಲಿಯ ದೇವರುಗಳನ್ನು ತಮ್ಮ ಕುಲದೈವಕ್ಕೆ ಕೊಟ್ಟಷ್ಟೇ ಪ್ರಾಶಸ್ತ್ಯವನ್ನು ಸ್ಥಳೀಯ ದೇವರಿಗೂ ಕೊಟ್ಟಿರುವುದನ್ನು ಕಾದಂಬರಿಯಲ್ಲಿ ಕಾಣಬಹುದು.

ಕಂಬಳದಲ್ಲಿ ಪಾಲ್ಗೊಳ್ಳುವುದು

ವಿಟ್ಮ ಪೈ ಕುಂಬಳೆಯಲ್ಲಿ ನೆಲೆನಿಂತ ಮೇಲೆ ಅವನಿಗಿದ್ದ ಮೂರು ಮಕ್ಕಳಲ್ಲಿ ಒಬ್ಬನಾದ ಮರ್ತುಪ್ಪಯ್ಯ ಮನೆಯಲ್ಲಿ ಯಾರ ಮಾತನ್ನೂ ಕೇಳುತ್ತಿರಲಿಲ್ಲ. ಆತ ತುಳುನಾಡಿನಲ್ಲಿ ಜರಗುತ್ತಿದ್ದ ಕಂಬಳವನ್ನು ಜಾತ್ರೆಯನ್ನು ನೋಡಲು ಹೋಗುತ್ತಿದ್ದನು. ಇಲ್ಲಿ ಸಾರಸ್ವತರಿಗೆ ಕಂಬಳದ ನೋಡುವಿಕೆ, ಅದರ ಜರಗುವಿಕೆ, ಅದರ ಹವ್ಯಾಸ ಬೆಳೆದಿದ್ದು ಇಲ್ಲಿ ಬಂದು ನೆಲೆಸಿದ ಮೇಲೆ. ತುಳುನಾಡಿನ ಸಾಂಸ್ಕೃತಿಕ ಆಟ ಅಥವಾ ಆಚರಣೆಯಾಗಿ ಬೆಳೆದು ಬಂದಿದ್ದ ಕಂಬಳವನ್ನು ಮರ್ತುಪ್ಪಯ್ಯ ನೋಡಲು ಹವಣಿಸುವುದು, ಜೊತೆಗೆ ಅದರಲ್ಲಿ ಪಾಲ್ಗೊಳ್ಳುವುದು ಇಲ್ಲಿನ ಸಂಸ್ಕೃತಿಯೊಂದಿಗೆ ಬೆರೆಯುವ ಮನಃಸ್ಥಿತಿ ವ್ಯಕ್ತವಾಗುವುದನ್ನು ನಾವು ಕಾಣಬಹುದು.

ಮರ್ತುಪ್ಪಯ್ಯ ತುಳು ಸಂಸ್ಕೃತಿಯ ಅವಿಭಾಜ್ಯ ಅಂಗಗಳಾದ ಜಾತ್ರೆ, ಕಂಬಳ, ಕೋಳಿ ಅಂಕ ಮೊದಲಾದವುಗಳಲ್ಲಿ ಭಾಗವಹಿಸಿ ಆನಂದಿಸುತ್ತಿದ್ದ. ಇದು ಒಂದು ಅನ್ಯ ಸಂಸ್ಕೃತಿ ಸಂಪ್ರದಾಯದಿಂದ ಬೆಳೆದು ಬಂದ ಸಾರಸ್ವತ ಸಮಾಜ. ನಂತರ ತಾವು ಬಂದು ನೆಲೆಸಿದ ಸ್ಥಳದ ಸಂಸ್ಕೃತಿಯೊಟ್ಟಿಗೆ ಹೊಂದಾಣಿಕೆ ಮಾಡಿಕೊಳ್ಳುವುದು, ಜೊತೆಗೆ ತಮ್ಮ ಸಂಸ್ಕೃತಿಯನ್ನು ಬಿಟ್ಟುಕೊಡದೆ ಸ್ವಲ್ಪ ಮಟ್ಟಿಗೆ ಬದಲಾವಣೆಗೆ ಒಳಪಟ್ಟದ್ದು ಆಗಿದೆ.

ಕರಾವಳಿ ಕರ್ನಾಟಕದ ದಕ್ಷಿಣ ಭಾಗದಲ್ಲಿ ನಡೆಯುವ ಓಟದ ಕೋಣದ ಸ್ಪರ್ಧೆಯನ್ನು 'ಕಂಬುಲ' ಎನ್ನುತ್ತಾರೆ. ಕಂಬಳ–ಕಂಬುಳ ಎಂದೂ ಜನರು ಇದನ್ನು ಕರೆಯುತ್ತಾರೆ. ಕುಂದಾಪುರದಿಂದ ಕಾಸರಗೋಡಿನವರೆಗೆ ಪಸರಿಸಿರುವ ತುಳುನಾಡಿನಲ್ಲಿ ಕಂಬುಲವು ಅಪಾರವಾದ ಜನಪ್ರಿಯತೆಯನ್ನು ಪಡೆದಿದೆ. ಕಾಲದ ದೃಷ್ಟಿಯಿಂದ ಕಂಬುಲಗಳು, ದೀಪಾವಳಿಯ ಅನಂತರ ಆರಂಭವಾಗಿ ಶಿವರಾತ್ರಿಯ ಹೊತ್ತಿಗೆ ಮುಕ್ತಾಯವಾಗುತ್ತದೆ. ತುಳುವಿನ ಕಾಲಮಾನ ಪದ್ಧತಿಯಲ್ಲಾದರೆ ಜಾರ್ದೆ ತಿಂಗಳಿನಿಂದ ಸುಗ್ಗಿ ತಿಂಗಳ ಮಧ್ಯೆ ಇವು ಜರಗುತ್ತವೆ. ಹೀಗೆ

ನಡೆಯುವ ಕಂಬುಲಗಳ ಒಟ್ಟು ಸಂಖ್ಯೆಯನ್ನು ನಿರ್ದಿಷ್ಟವಾಗಿ ಹೇಳಲು ಅಸಾಧ್ಯವಾದರೂ ಅವುಗಳ ಸಂಖ್ಯೆ ಸುಮಾರು ೩೦೦ರನ್ನು ಮೀರಬಹುದೆಂದು ಊಹಿಸಬಹುದು. ತುಳುನಾಡಿನ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಇವುಗಳ ಸಂಖ್ಯೆ ಹೆಚ್ಚು, ಪೂರ್ವದಲ್ಲಿ ಕಡಿಮೆ.

ಕಂಬಲ ನಡೆಯಬೇಕಾದ ದಿನವನ್ನು ಊರಿನ ಹಿರಿಯರು ಮತ್ತು ಮುಖ್ಯಸ್ಥರು ಜೊತೆ ಸೇರಿ ಚರ್ಚಿಸಿ ನಿರ್ಧರಿಸುತ್ತಾರೆ. ಕಂಬುಲವು ಯಾರ ಗದ್ದೆಯಲ್ಲಿ ನಡೆಯುತ್ತದೆಯೋ ಆ ಗದ್ದೆಯ ಯಜಮಾನನದ್ದು ಸಾಮಾನ್ಯವಾಗಿ ಈ ನಿಟ್ಟಿನಲ್ಲಿ ಅಂತಿಮ ಮಾತು. ಈಚಿನ ದಿನಗಳಲ್ಲಿ ಊರಿನ ಜಾತ್ರೆ, ಹಬ್ಬ ಮೊದಲಾದ ಸಂದರ್ಭಗಳಲ್ಲಿಯೂ ಕಂಬಳ ನಡೆಯುತ್ತಿದೆ. ಕಂಬಳದ ಸುದ್ದಿಯನ್ನು ಊರಿನ ಕೊರಗರು ನೀಡುತ್ತಾರೆ. ಈ ಕೊರಗರು ಕಂಬಳದ ಮುನ್ನಾದಿನ ಬೆಳಿಗ್ಗೆ ಬೇಗನೇ ಎದ್ದು ಸ್ನಾನ ಇತ್ಯಾದಿಗಳನ್ನು ಮಾಡಿ ಶುಚಿಯಾಗಿ ತಮ್ಮ ಕುಲದೈವವಾದ ಕೊರಗತನಿಯ ಭೂತಕ್ಕೆ ಕೈಮುಗಿದು ಒಳಿತಾಗಲೆಂದು ಪ್ರಾರ್ಥಿಸಿ ಡೋಲು ಬಾರಿಸಿ ಇಡೀ ಊರಿಗೆ ಕಂಬಲ ನಡೆಯುವ ದಿನದ ಬಗ್ಗೆ ಮಾಹಿತಿ ನೀಡುತ್ತಾರೆ.

ಕಂಬಳಕ್ಕೆ ಎಲ್ಲಾ ಸಿದ್ಧತೆಯಾದ ನಂತರ ಕೋಣಗಳನ್ನು ಸಿಂಗರಿಸುತ್ತಾರೆ. ಕೋಣಗಳ ಬೆನ್ನಿಗೆ ಬಣ್ಣಬಣ್ಣದ ಬಟ್ಟೆಗಳನ್ನು ಹಾಸಿರುತ್ತಾರೆ. "ಆ ಬಟ್ಟೆಯಲ್ಲಿ ಕೋಣಗಳ ಯಜಮಾನನ ಹೆಸರನ್ನು ಬರೆದಿರಲಾಗುತ್ತದೆ. ಈ ಬಟ್ಟೆಗೆ ಪಾವಡೆ ಎನ್ನುವರು. ಕೋಣದ ಕೋಡುಗಳಿಗೆ ಸುಣ್ಣದಲ್ಲಿ ಬಿಳಿ ಗೆರೆಗಳನ್ನು ಅಡ್ಡವಾಗಿ ಎಳೆದಿರುವುದಲ್ಲದೆ ಕೋಡಿನ ತುದಿಗೆ ಒಂದೊಂದು ನಿಂಬೆ ಹಣ್ಣನ್ನು ಕಟ್ಟಿರುತ್ತಾರೆ. ಕೆಲವು ಬಾರಿ ಹೂವಿನ ಗೊಂಚಲನ್ನು ಸಿಕ್ಕಿಸುತ್ತಾರೆ. ಖಡ್ಗಕ್ಕೆ ಹಾಕುವ ರೀತಿಯ ಬರೆಯನ್ನು ಕೋಡಿಗೆ ಹಾಕುವವರೂ ಇದ್ದಾರೆ. ಅದಕ್ಕೆ 'ಕೋಡಣಸು' ಎಂದು ಕರೆಯುತ್ತಾರೆ. ಕೋಣಗಳ ನೆತ್ತಿಗೆ ಹಗ್ಗವನ್ನು ಬಿಗಿಯುತ್ತಾರೆ. ಅದಕ್ಕೆ 'ನೆತ್ತಿಬಲ್ಲ್' ಎಂದು ಹೆಸರು. ಕೊರಳಿಗೆ ಕಟ್ಟಿದ ಹಗ್ಗಕ್ಕೆ 'ಜೂಲಿ' ಎನ್ನುತ್ತಾರೆ. ಮೂಗಿಗೆ ಹಗ್ಗ ಹಾಕಿರುತ್ತಾರೆ. ಅದಕ್ಕೆ 'ಮೂಂಕುದಾರ' ಇಲ್ಲವೇ 'ದುಡಿಪನೆ' ಎಂದು ಹೆಸರು"[೨೪]. ಕೊರಳಿಗೆ ಇಲ್ಲವೇ ಬಲದ ಕಾಲಿಗೆ ಹಳೆಯ ಚಪ್ಪಲಿನ ಒಂದು ಚೂರನ್ನು ಕಟ್ಟುತ್ತಾರೆ. ಜೊತೆಗೆ ಎಡಕಾಲಿಗೆ ಕಪ್ಪು ಬಟ್ಟೆಯ ತುಂಡನ್ನು ಕಟ್ಟುತ್ತಾರೆ. ಮಂತ್ರಿಸಿದ ನೂಲನ್ನು ಇಲ್ಲವೇ ತಾಯಿತವನ್ನು ಬಲದ ಕಾಲಿಗೆ ಕಟ್ಟುತ್ತಾರೆ. ದಾರಿಯಲ್ಲಿ ಬರುವಾಗ ಯಾರಾದರೂ ದೃಷ್ಟಿ ಹಾಕಿರಬಹುದೆಂದು ಭಾವಿಸಿದ್ದಲ್ಲಿ ಕಂಬುಲದ ಗದ್ದೆ ತಲುಪುತ್ತಲೇ ಕಬ್ಬಿಣವನ್ನು ಅದ್ದಿದ ನೀರನ್ನು ಸ್ವಲ್ಪ ಕುದಿಸುತ್ತಾರೆ. ಸಾಮಾನ್ಯವಾಗಿ ಕಂಬಳದಲ್ಲಿ ಪಾಲ್ಗೊಳ್ಳುವ ಕೋಣಗಳನ್ನು ವ್ಯವಸಾಯದ ಚಟುವಟಿಕೆಗೆ ಬಳಸಿಕೊಳ್ಳುವುದಿಲ್ಲ.

"ಕಂಬಲದ ಯಜಮಾನನು ತನ್ನ ಹತ್ತಿರದ ಬಂಧುಗಳೊಡಗೂಡಿ ಕಂಬುಲದ ಗದ್ದೆಯ ಸಮೀಪದಲ್ಲಿರುವ ನಾಗಬನಕ್ಕೆ ತೆರಳಿ ನಾಗನಿಗೆ ಕೈಮುಗಿದು ಕಂಬಳದ ಯಶಸ್ಸಿಗಾಗಿ ಪ್ರಾರ್ಥಿಸುತ್ತಾನೆ. ಜೊತೆಗೆ ಆ ಮನೆತನಕ್ಕೆ ಸೇರಿದ ಭೂತವು ತನ್ನ ಸಾಂಪ್ರದಾಯಿಕ ವೇಷಭೂಷಣಗಳೊಂದಿಗೆ ಮೂರ್ತದ ಎರುವಿನೊಂದಿಗೆ ಇರುತ್ತದೆ. ಆ ಮೂರ್ತಿಯ ಎರುವನ್ನು ಕಂಬುಲ ಗದ್ದೆಯ ಒಂದು ತುದಿಗೆ ಕೊಂಡೊಯ್ಯುತ್ತಾರೆ. ಆ ತುದಿಯನ್ನು 'ಗಂತ್' ಎಂದು

ಕರೆಯುತ್ತಾರೆ. ಗಂತ್‌ನಲ್ಲಿ ನಿಲ್ಲಿಸಿ ಕೋಣಗಳನ್ನು ಓಡಿಸುವುದಕ್ಕೆ 'ಕರೆ ಬುಡ್ಪಾವುನಿ' (ಕರೆ ಬಿಡಿಸುವುದು) ಎನ್ನುತ್ತಾರೆ. ಕಂಬುಲದ ಯಜಮಾನನ ಮನೆಗೆ ಸಂಬಂಧಿಸಿದವರಲ್ಲಿ ಯಾರಾದರೂ ಆ ಕೋಣವನ್ನು ಓಡಿಸುತ್ತಾರೆ. ಈ ಕೋಣಗಳಿಗೆ ಯಾವುದೇ ಸ್ಪರ್ಧೆ ಇಲ್ಲ. ಕೋಣಗಳು ಓಡಿ ಬಂದು ತಲುಪುವ ಸ್ಥಳ ಗದ್ದೆಗಿಂತ ಸ್ವಲ್ಪ ಎತ್ತರದಲ್ಲಿದ್ದು ಗದ್ದೆಯ ಕಡೆಗೆ ಇಳಿಮುಖವಾಗಿರುತ್ತದೆ. ಈ ಸ್ಥಳವನ್ನು 'ಮಂಜೊಟ್ಟಿ' ಎಂದು ಕರೆಯುತ್ತಾರೆ. ನಂತರ ಇವುಗಳನ್ನು ಕಂಬಳ ಮುಗಿಯುವವರೆಗೂ ಅಲ್ಲಿಯೇ ಕಟ್ಟಿಗೆ ತುಂಡಿಗೆ (ದರಿಗಂಟ) ಕಟ್ಟಿರುತ್ತಾರೆ. ಇದಾದ ನಂತರ ಕೋಣಗಳ ಓಟದ ಸ್ಪರ್ಧೆ ಆರಂಭವಾಗುತ್ತದೆ. ಕೋಣಗಳ ಪ್ರಾಯವನ್ನು ಅನುಸರಿಸಿ ಎರಡು ಪ್ರಬೇಧಗಳಾಗಿ ಮಾಡುತ್ತಾರೆ"[೨೫].

ಪ್ರಾಯದಲ್ಲಿ ಹಿರಿಯವನ್ನು 'ಮಲ್ಲ' (ಹಿರಿಯ) ಎಂದೂ, ಚಿಕ್ಕ ಪ್ರಾಯದ ಕೋಣವನ್ನು 'ಎಲ್ಯ' (ಕಿರಿಯ) ಎಂದೂ ಭಾಗ ಮಾಡುತ್ತಾರೆ. ಈ ಎರಡು ವಿಭಾಗದಲ್ಲಿ ನಾಲ್ಕು ರೀತಿಯ ಓಟಗಳನ್ನು ಮಾಡಲಾಗುತ್ತದೆ. ಅವೆಂದರೆ ಬಳ್ಳತವು, ಅಡ್ಡ ಪಲಾಯಿ, ನೇಗಿಲ ಓಟ, ಕಣೆ ಪಲಾಯಿ. ಈ ರೀತಿಯ ಕಂಬಳ ತುಳುನಾಡಿನ ಆಚರಣೆಗಳಲ್ಲಿ ಬಹಳ ಮುಖ್ಯವಾದದ್ದು. ಇಂತಹ ಆಚರಣೆಗಳಲ್ಲಿ ಸಾರಸ್ವತರು ಭಾಗವಹಿಸುವುದರೊಟ್ಟಿಗೆ ಸ್ಥಳೀಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದರು.

ಮೀನು ತಿನ್ನುವುದು

ರಾಮಚಂದ್ರ ಪೈ ಗೌಡ ಸಾರಸ್ವತ ಬ್ರಾಹ್ಮಣ ಜನಾಂಗಕ್ಕೆ ಸೇರಿದವನಾಗಿದ್ದರು. ಗೌಡ ಸಾರಸ್ವತರ ಮೂಲನೆಲೆಯಾದ ಗೋವೆಯಲ್ಲಿ ಇವರು ಮೀನು ತಿನ್ನುವುದು ಇವರ ಆಹಾರ ಪದ್ಧತಿಗಳಲ್ಲಿ ಒಂದಾಗಿತ್ತು. ಆದರೆ ತುಳುನಾಡಿಗೆ ಬಂದು ನೆಲೆಸಿದ ನಂತರ ಕದ್ದು ಮುಚ್ಚಿ ಮೀನು ತಿನ್ನುತ್ತಾರೆ. ಕಾರಣವೆಂದರೆ ಗೌಡ ಸಾರಸ್ವತರು ಮೀನು ತಿನ್ನುವವರು ಎಂಬುದು ತುಳುವ ಬ್ರಾಹ್ಮಣರ ಮುಖ್ಯ ಆಕ್ಷೇಪವಾಗಿತ್ತು. ವಲಸೆಯ ನಂತರದ ದಿನಗಳಲ್ಲಿ ಗೌಡ ಸಾರಸ್ವತರು ಮೀನು ತಿನ್ನುವುದನ್ನು ಗುಟ್ಟಾಗಿ ಮಾಡತೊಡಗಿದರೂ ಅವರ ಹೆಸರಿಗಂಟಿದ ಕಳಂಕ ದೂರವಾಗಿರಲಿಲ್ಲ. ಮಧ್ವಾಚಾರ್ಯರ ಶಿಷ್ಯ ಪದ್ಮನಾಭಾಚಾರ್ಯರ ಪ್ರಭಾವದಿಂದ ಗೌಡ ಸಾರಸ್ವತರು ವೈಷ್ಣವಾರಾಧಕರಾಗಿ ಅವರ ಪುರೋಹಿತ ವರ್ಗ ಸಂಪೂರ್ಣ ಶಾಖಾಹಾರಿಗಳಾದರೆ ಇತರ ಗೌಡ ಸಾರಸ್ವತರು ಹಬ್ಬ ಹರಿದಿನಗಳಲ್ಲಿ ಮೀನು ತಿನ್ನುವುದನ್ನು ಬಿಟ್ಟರು. ತುಳುನಾಡಿಗೆ ಪ್ರವೇಶ ಮಾಡಿದಂದಿನಿಂದಲೂ ಗೌಡ ಸಾರಸ್ವತರು ಹಾಗು ಮತ್ತಿತರ ಬಂಟ/ನಾಡವ ಮೊದಲಾದ ತುಳುವ ಜನಾಂಗದವರ ಜೊತೆ ಆತ್ಮೀಯ ಸಂಬಂಧವನ್ನು ಇಟ್ಟುಕೊಂಡಿದ್ದರು. ಆದರೆ ಪೌರೋಹಿತ್ಯದ ವಿಚಾರದಲ್ಲಿ ಗೌಡ ಸಾರಸ್ವತರನ್ನು ಬಂಟರು ಹಾಗೂ ಇತರ ತುಳುವ ಜಾತಿಯವರು ಇವರನ್ನು ದೂರವೇ ಇಟ್ಟಿದ್ದರು.

ತುಳು ಬ್ರಾಹ್ಮಣರಲ್ಲಿ ಷಟ್ಕರ್ಮಗಳನ್ನು ಮಾಡಲು ಅರ್ಹರಾದವರು ಮಾತ್ರ ಬ್ರಾಹ್ಮಣರೆನ್ನಿಸುತ್ತಾರೆ (ಪೌರೋಹಿತ್ಯ, ಯಜ್ಞ, ಅಧ್ಯಯನ, ಅಧ್ಯಾಪನ, ದಾನ ಕೊಡುವುದು, ದಾನ ಪಡೆಯುವುದು). ಅಂದರೆ ಗೌಡ ಸಾರಸ್ವತರು ತ್ರಿಕರ್ಮಗಳಿಗೆ ಮಾತ್ರ ಅರ್ಹರೆಂಬುದು

ತುಳುವರ ಬಲವಾದ ನಂಬಿಕೆಯಾಗಿತ್ತು. ಅದರಿಂದ ತುಳು ಜನಾಂಗದವರು ಗೌಡ ಸಾರಸ್ವತರನ್ನು ಯಜ್ಞಗಳಿಗೆ, ಪೌರೋಹಿತ್ಯಗಳಿಗೆ, ಅಧ್ಯಾಪನಗಳಿಗೆ ಅವಕಾಶ ನೀಡುತ್ತಿರಲಿಲ್ಲ.

ಸಾರಸ್ವತರು ಮೀನು ತಿನ್ನುವುದು ಕೂಡಾ ಬ್ರಾಹ್ಮಣರಲ್ಲಿ ಒಂದು ರೀತಿಯ ವಿಭಿನ್ನ ಮನೋಧರ್ಮವಾಗಿಯೇ ಆಗಿದೆ. ಅದು ಅವರ ಮೂಲ ನೆಲೆಯಿಂದ ಬಂದಿದ್ದ ಆಹಾರಪದ್ಧತಿಯಾಗಿದ್ದರೂ ತುಳುನಾಡಿನಲ್ಲಿ ಷಟ್ಕರ್ಮಗಳನ್ನು ಹೊಂದಿದ್ದ ಬ್ರಾಹ್ಮಣರಿಗೆ ಮಾತ್ರ ಒಂದು ಉತ್ತಮ ಸ್ಥಾನವನ್ನು ಕಲ್ಪಿಸಿದರು.

ನಾಗಶಾಪ ಮತ್ತು ನಾಗಾರಾಧನೆ

ಕಾದಂಬರಿಯಲ್ಲಿ ನಗ್ನ ಬೇತಾಳ ನರಸಪ್ಪಯ್ಯನವರಿಗೆ ಅವರ ಕುಟುಂಬದ ಮೇಲೆ ನಾಗ ಶಾಪವಿರುವ ವಿಚಾರವನ್ನು ತಿಳಿಸುತ್ತಾನೆ. ಅದು ಹಿರಿಯ ತಾತನಾದ ಮಾಳ ಶರ್ಮ ಮತ್ತು ಗಿರಿಜೆ ಎಂಬ ದಂಪತಿಗಳಿಗೆ ಇಪ್ಪತ್ತೆರಡನೆಯ ಸಂತಾನವಾಗಿ ಜನಿಸಿದ ಮಗು. ಆ ಮಗುವಿನ ಮುಖ ಮಾತ್ರ ಮನುಷ್ಯನದು, ಕೊರಳಿನಿಂದ ಪಾದದ ತನಕ ಹಾವಿನ ರೂಪವಾಗಿತ್ತು. ಅದಕ್ಕೆ ನಾಗಪ್ಪ ಎಂದು ಹೆಸರಿಟ್ಟರು. ಒಮ್ಮೆ ನಾಗರ ಪಂಚಮಿಯಂದು ಹಬ್ಬವು ಬಂತು. ಆ ಸಂದರ್ಭದಲ್ಲಿ ಆತನ ತಾಯಿ ಅದೇ ಊರಿನಲ್ಲಿ ತನ್ನ ಹಿರಿಯ ಮಗಳನ್ನು ಮದುವೆ ಮಾಡಿ ಕೊಟ್ಟಿರುತ್ತಾರೆ. ಅವಳನ್ನು ಹಬ್ಬಕ್ಕೆ ಕರೆದುಕೊಂಡು ಬರಲು ತಿಳಿಸುತ್ತಾಳೆ. ನಾಗಪ್ಪ ಹಾವಿನಂತೆ ಹೊರಳಿಕೊಂಡು ಹೋಗಿ ತನ್ನ ಅಕ್ಕನನ್ನು ಹಬ್ಬಕ್ಕೆ ಬರಬೇಕೆಂದು ತಿಳಿಸುತ್ತಾನೆ. ಆ ಸಂದರ್ಭದಲ್ಲಿ ಆಕೆಯ ಗಂಡ ಊರಿನಲ್ಲಿ ಇರುವುದಿಲ್ಲ. ಹಾಗಾಗಿ ತಾನು ಇಲ್ಲೇ ಹಬ್ಬ ಮಾಡುತ್ತೇನೆ ನೀನು ಹೋಗು ಎಂದು ತಿಳಿಸುತ್ತಾಳೆ. ಕೊನೆಗೆ ನಾಗಪ್ಪ ಮನೆಗೆ ಹಿಂತಿರುಗಿದಾಗ ಆತನ ತಾಯಿ ಸ್ನಾನಕ್ಕೆ ಹೋಗಿರುತ್ತಾಳೆ. ನಾಗಪ್ಪ ಒಲೆಯ ಹತ್ತಿರ ಸುತ್ತಿಕೊಂಡು ಮಲಗಿರುತ್ತಾನೆ. ಕೊನೆಗೆ ಸ್ನಾನ ಮುಗಿಸಿ ಬಂದು ಕತ್ತಲೆಯಲ್ಲಿ ಪಾಯಸದ ಗಡಿಗೆಯನ್ನು ನವಣೆಯಂತೆ ಕಂಡ ನಾಗಪ್ಪನ ಸುರುಳಿ ಸುತ್ತಿದ ಮೈಯ ಮೇಲೆ ಆ ಬಿಸಿಬಿಸಿ ಪಾತ್ರೆಯನ್ನು ಮುಚ್ಚಿಟ್ಟು ಅವನ ನೆನಪೇ ಇಲ್ಲದಂತೆ ಹೊರಗೆ ಹೋದಳು. ಕೊನೆಗೆ ಆತ ಬಿಸಿಯಿಂದ ಸುಟ್ಟು ಸತ್ತು ಹೋದನು. ಆಗ ಆತ ಇಪ್ಪತ್ತೆರಡನೆಯ ತಲೆಮಾರಿಗೆ ಮತ್ತೆ ಇಪ್ಪತ್ತೆರಡನೆಯ ಮಗನಾಗಿ ಹುಟ್ಟುತ್ತೇನೆ. ಇನ್ನು ಮುಂದೆ ಕೌಂಶ ಗೋತ್ರದ ಈ ಕುಟುಂಬದ ಯಾವುದೇ ಮನೆಯಲ್ಲಿ ನಾಗರ ಪಂಚಮಿಯ ದಿನ ಮಾಡಿದ ಹಾಲಿನ ಖೀರು ನೀಲಿಗಟ್ಟಿಹೋಗಲಿ ಎಂದು ಶಾಪ ನೀಡುತ್ತಾನೆ.

ಈ ಶಾಪದ ಕಥೆಯನ್ನು ರಾಮಚಂದ್ರ ಪೈ ತನ್ನ ತಾತರಿಂದ ತಿಳಿದು ತನ್ನ ಮೊಮ್ಮಕ್ಕಳಿಗೂ ಈ ನಾಗಶಾಪದ ಬಗ್ಗೆ ತಿಳಿಸುತ್ತಾನೆ. ಮುಂದೆ ವಿಟ್ಟು ಪೈ ಗೋವೆಯನ್ನು ಬಿಟ್ಟ ಸಂದರ್ಭದಲ್ಲಿಯೂ ನಾಗಶಾಪದ ಬಗ್ಗೆ ನಗ್ನ ಬೇತಾಳ ಎಚ್ಚರಿಸುತ್ತಾನೆ. ಮುಂದೆ ವಿಟ್ಠು ಪೈ ಸತ್ತ ನಂತರ ಕುಂಬಳೆಯಲ್ಲಿ ನೆಲೆನಿಂತ ರಾಮಚಂದ್ರ ಪೈಗೆ ನಾಗಶಾಪದ ಕುರುಹುಗಳು ಕಾಣಿಸುತ್ತವೆ. ಅಂದರೆ ಅವನ ಮೈಯ ಮೇಲೆಲ್ಲಾ ಸಣ್ಣ ಸಣ್ಣ ಗುಳ್ಳೆಗಳಾಗಿ ಇವನನ್ನು ಹಿಂಸಿಸುತ್ತದೆ. ಈ ಸಂದರ್ಭದಲ್ಲಿ ಆತನಿಗೆ ನಾಗಶಾಪದ ಮನವರಿಕೆಯಾಗುತ್ತದೆ. ಕಂಗಿಲದ ಕೃಷ್ಣ ಭಟ್ಟರು ಇವನನ್ನು ಉಪಚರಿಸುತ್ತಾರೆ. ಬಾದಾರಾಯಣ ಭಟ್ಟರು ಕಾರ್ಕಳದಲ್ಲಿ ಜ್ಯೋತಿಷ್ಯ ವೇದಾಭ್ಯಾಸ ಮಾಡಿ ಕೊಂಡಿರುತ್ತಾರೆ. ಅವರು ನಿಮ್ಮ ಜಾತಕದಲ್ಲಿ ನಾಗದೋಷವಿದೆ ಈ

ಮನೆಯ ಸುತ್ತ ಎಲ್ಲೋ ನೀರು ಸಿಕ್ಕದೆ ಇರುವ ನಾಗನ ಮೂರ್ತಿಯಿದೆ. ಅದು ಜೈನ ಬಲ್ಲಾಳರ ಕಾಲದಲ್ಲಿ ಸುಖವಾಗಿದ್ದ ದೇವರು, ಆದರೆ ಈಗ ಅದು ನಿಮಗೆ ಶಾಪವಾಗಿ ಪರಿಣಮಿಸಿದೆ. ಅದಕ್ಕೆ ಅಂತಿಂಥ ಪೂಜೆ ಸಾಕಾಗುವುದಿಲ್ಲ, ನಾಗಮಂಡಲ ಪೂಜೆ ಮಾಡಿಸಬೇಕು ಎನ್ನುತ್ತಾರೆ. ಅದಕ್ಕೆ ರಾಮಚಂದ್ರ ಪೈ ಒಪ್ಪಿಕೊಳ್ಳುತ್ತಾನೆ.

ಇಲ್ಲಿ ನಾಗಮಂಡಲ ಪೂಜೆ ಎಂಬುದು ಇವರ ಮೂಲ ನೆಲೆಯಲ್ಲಿ ಕಾಣುವುದಿಲ್ಲ. ಅದು ತುಳುನಾಡಿಗೆ ಬಂದು ನೆಲೆಸಿದ ಮೇಲೆ ಅವರು ನಾಗಮಂಡಲ ಪೂಜೆಗೆ ಒಪ್ಪಿಕೊಳ್ಳುವುದು. ಕೊನೆಗೆ ಅಂಜನ ಹಾಕಿ ನಾಗಮೂರ್ತಿ ಇರುವ ಜಾಗ ನೋಡಿ ಅದಕ್ಕೆ ಪೂಜೆ ಸಲ್ಲಿಸುವುದು. ತಮ್ಮ ಶಾಪ ಕಳೆಯಲು ನಾಗಮಂಡಲ ಪೂಜೆಯನ್ನು ನೆರವೇರಿಸುವುದು. ಇವೆಲ್ಲಾ ಸ್ಥಳೀಯ ಸಂಸ್ಕೃತಿಗೆ ಇವರು ತಮ್ಮನ್ನು ತಾವು ತೆರೆದುಕೊಳ್ಳುವಿಕೆಯೇ ಆಗಿದೆ. ಜೊತೆಗೆ ತಂಬಿಲವನ್ನು ರಾಮಚಂದ್ರ ಪೈ ನಡೆಸುತ್ತಾರೆ. ತಂಬಿಲ ಎಂದರೆ ತನು ಹಾಕುವುದು ಎಂದರ್ಥ. ಅಂದರೆ ಇದು ಹೂ, ಹಣ್ಣು, ಹಾಲು, ತಾಂಬೂಲ, ಎಳನೀರುಗಳನ್ನು ನಾಗನಿಗೆ ಅರ್ಪಿಸಿ ನಡೆಸುವ ಸರಳ ಸಾತ್ವಿಕ ಪೂಜೆ. ಇದನ್ನು ಸಾಮಾನ್ಯವಾಗಿ ಬ್ರಾಹ್ಮಣರು ನಿರ್ವಹಿಸುತ್ತಾರೆ. ನಾಗರ ಪಂಚಮಿಯಂದು ಸಾಮಾನ್ಯವಾಗಿ ಈ ವಿಧಿ ನಡೆಯುತ್ತದೆ.

ಇಲ್ಲಿ ರಾಮಚಂದ್ರ ಪೈ ನಾಗನ ಶಾಪ ತನ್ನ ಪೂರ್ವಿಕರಿಂದ ಬಂದಂತದ್ದು, ಅದನ್ನು ತುಳುನಾಡಿನಲ್ಲಿ ನೆಲೆಸಿದ ಮೇಲೆ ಆ ಶಾಪವನ್ನು ಕಳೆದುಕೊಳ್ಳುತ್ತಾನೆ. ತುಳುನಾಡಿನಲ್ಲಿ ನಾಗಾರಾಧನೆ ತುಳು ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಇಲ್ಲಿ ಸಾರಸ್ವತರು ತುಳುನಾಡಿನಲ್ಲಿ ನೆಲೆಸಿದ ನಂತರ ನಾಗನ ಪೂಜೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡರು. ಆ ಮುಖಾಂತರ ತುಳು ಸಂಸ್ಕೃತಿಯನ್ನು ತಮ್ಮ ಸಂಸ್ಕೃತಿಯೊಂದಿಗೆ ಮಿಳಿತಕ್ಕೆ ಎಡೆ ಮಾಡಿಕೊಟ್ಟರು. ಮುಂದೆ ಆ ನಾಗಬನಕ್ಕೆ ರಾಮಚಂದ್ರ ಪೈ ವಿಧೇಯರಾಗಿ ನಡೆದುಕೊಳ್ಳುವುದು ನಾಗಾರಾಧನೆಯ ಆಚರಣೆಯನ್ನು ರೂಢಿಸಿಕೊಂಡು ಬರುವುದು ಕೂಡಾ ಸ್ಥಳೀಯ ಸಂಸ್ಕೃತಿಗೆ ತಮ್ಮನ್ನು ತಾವು ತೆರೆದುಕೊಳ್ಳುವುದು ಆಗಿದೆ.

ನಾಗಾರಾಧನೆ ವಿಶ್ವದ ಅನೇಕ ದೇಶಗಳಲ್ಲಿ ರೂಢಿಯಾಗಿದ್ದು ಆಯಾ ಪ್ರದೇಶದ ಸಂಸ್ಕೃತಿಯಲ್ಲಿ ವಿಶೇಷವಾದ ಸಂಬಂಧವನ್ನು ಪಡೆದ ವಿಚಾರವಾಗಿದೆ. "ಭಾರತದಲ್ಲಿ ಮಾತ್ರವಲ್ಲದೆ ಸುಮೇರಿಯಾ, ಬೆಬಿಲೋನಿಯಾ, ಇರಾನ್, ಚೀನಾ, ಆಫ್ರಿಕಾ ಮುಂತಾದ ದೇಶಗಳಲ್ಲಿ ನಾಗಾರಾಧನೆ ಬೇರೆ ಬೇರೆ ರೂಪದಲ್ಲಿ ಪ್ರಚಲಿತವಾಗಿತ್ತು. ಈಜಿಪ್ಟಿನ ಸೆಬ್ ದೇವತೆ ನಾಗಗಳ ರಾಜ. ಗ್ರೀಸ್ ದೇಶದಲ್ಲಿ ಜೀವಂತ ನಾಗಗಳನ್ನು ಭೂಮಿಪುತ್ರರೆಂದು ನಂಬಿದ್ದರು. ಈ ಆರಾಧನೆಯ ಮೂಲವೆಲ್ಲಿ ಎಂಬುದು ಖಚಿತವಾಗಿ ತಿಳಿಯದಿದ್ದರೂ ಈ ದೇಶಗಳೊಂದಿಗೆ ಒಂದಲ್ಲ ಒಂದು ಕಾಲದಲ್ಲಿ ಭಾರತಕ್ಕೆ ಸಂಪರ್ಕವಿದ್ದದ್ದನ್ನು ಅಲ್ಲಗಳೆಯುವಂತಿಲ್ಲ. ಬಹು ಪ್ರಾಚೀನ ಕಾಲದಿಂದಲೂ ಈ ಎಲ್ಲಾ ದೇಶಗಳಲ್ಲಿ ನಾಗನನ್ನು ಫಲ ಸಮೃದ್ಧಿಯ ಸಂಕೇತವೆಂದು ನಂಬಿಕೊಂಡು ಬಂದಿದ್ದಾರೆ ಎಂತಲೇ ನಾಗ ಮನಸ್ಸಿನ ಕಾಮನೆಯ ಪ್ರತೀಕವೂ ಹೌದು"[೨೬].

ಭಾರತದ ಉದ್ದಗಲಕ್ಕೂ ಸರ್ಪಾರಾಧನೆಯ ವಿವಿಧ ಪ್ರಕಾರಗಳು ಇಂದಿಗೂ ಕಾಣಸಿಗುತ್ತವೆ. ಈ ದೇಶದಲ್ಲಿ ನಾಗಾರಾಧನೆಗೆ ಇರುವಷ್ಟು ಪ್ರಾಶಸ್ತ್ಯ ಇನ್ನಾವ ದೇಶದಲ್ಲೂ ಇರಲಾರದು. ಇಂದಿಗೂ ವೈವಿಧ್ಯಪೂರ್ಣವಾದ ನಾಗಾರಾಧನಾ ಸಂಪ್ರದಾಯಗಳು ಬಹುವಾಗಿ ಜೀವಂತವಿರುವ ಮುಖ ಪ್ರದೇಶವೆಂದರೆ ತುಳುನಾಡು ಅಥವಾ ಅವಿಭಜಿತ ದಕ್ಷಿಣ ಕನ್ನಡ ಮತ್ತು ಅದರ ದಕ್ಷಿಣಕ್ಕಿರುವ ಕೇರಳ. ತುಳುನಾಡು ನಾಗಲೋಕವಾಗಿತ್ತೆಂದು, ಇಲ್ಲಿಗೆ ನಾಗಬ್ರಹ್ಮವೆಂಬ ದೈವವೇ ಸೃಷ್ಟಿಕರ್ತ ಸ್ಥಾನದಲ್ಲಿರುವುದಾಗಿಯೂ ಜನಪದ ಪ್ರತೀತಿಯಿದೆ. ನಾಗಬ್ರಹ್ಮ, ನಾಗಲಿಂಗ, ಬ್ರಹ್ಮಲಿಂಗ, ನಾಗಬ್ರಹ್ಮಲಿಂಗೇಶ್ವರ, ಶೇಷನಾಗ, ಅನಂತಪದ್ಮನಾಭ, ಸುಬ್ರಮಣ್ಯ ಮೊದಲಾದ ಬೇರೆ ಬೇರೆ ನಾಮರೂಪಗಳಿಂದ ಆತನನ್ನು ತುಳುನಾಡಿನಲ್ಲಿ ಆರಾಧಿಸುತ್ತಾರೆ. "ತುಳುನಾಡಿಗೆ 'ಆಲುಕ' ಪ್ರಾಚೀನ ಹೆಸರುಗಳಲ್ಲಿ ಒಂದು. 'ಆಲುಕ' ಎಂದರೆ ಸರ್ಪರಾಜನೆಂಬ ಹೇಳಿಕೆ ಇದೆ. ಶಂಖಕುಲದ ನಾಗವಂಶೀಯರು ತುಳುನಾಡಿನಲ್ಲಿದ್ದರೆಂದು ಗೋವಿಂದ ಪೈಗಳು ಅಭಿಪ್ರಾಯ ಪಡುತ್ತಾರೆ"[೨೭].

ತುಳುನಾಡಿನಲ್ಲಿ ಪ್ರತಿಯೊಂದು ಮನೆತನದ ಪೂರ್ವಾರ್ಜಿತ ಸ್ಥಳದಲ್ಲಿ ನಾಗಬನವಾಗಲೀ ನಾಗಾಲಯವಾಗಲೀ ಇಲ್ಲದಿರುವುದಿಲ್ಲ. ಸಂತಾನಪ್ರದವೆನಿಸಿ ಆರೋಗ್ಯ ಭಾಗ್ಯದಾತನಾದ ಈ ದೈವದ ಅನುಗ್ರಹವನ್ನು ಅಂದಿನವರು ಬಯಸಿದ್ದರು. ಇಂದೂ ಈ ನಂಬಿಕೆ ಸಾಕಷ್ಟು ಊರ್ಜಿತವಾಗಿಯೇ ಇದೆ. ಪ್ರತಿಯೊಂದು ದೇವಸ್ಥಾನ ಭೂತಸ್ಥಾನಕ್ಕೂ ಸಂಬಂಧಪಟ್ಟಂತೆ ಪ್ರತ್ಯೇಕ ನಾಗಬನ ಅಥವಾ ನಾಗಪ್ರತಿಷ್ಠೆಗಳು ಇದ್ದೇ ಇರುತ್ತವೆ. ಯಾವುದೇ ಆರಾಧನೆಯ ಸಂಕೀರ್ಣವಾದರೂ ನಾಗನಿಗೆ ನೆಲದ ಒಡೆತನವನ್ನು ನೀಡಲಾಗುತ್ತದೆ. ಹಾಗಾಗಿ ನಾಗ ಕ್ಷೇತ್ರಪಾಲನಾಗಿ ಮನ್ನಣೆ ಪಡೆಯುತ್ತಾನೆ.

ದಕ್ಷಿಣಕನ್ನಡದಲ್ಲಿ ಕುಕ್ಕೆ ಸುಬ್ರಮಣ್ಯ, ಕಾಳಾವರ, ಕುಡುಪು, ಮಂಜೇಶ್ವರ, ಪಡುಬಿದ್ರಿ ಮೊದಲಾದೆಡೆಗಳಲ್ಲಿ ಪ್ರಸಿದ್ಧ ನಾಗಾರಾಧನಾ ಕ್ಷೇತ್ರಗಳಿವೆ. ತುಳುನಾಡಿನಲ್ಲಿ ನಾಗನನ್ನು ಸುಬ್ರಾಯ ಅಥವಾ ಸುಬ್ರಮಣ್ಯ ಎಂದು ಕರೆಯುವುದು ವಾಡಿಕೆ. "ತುಳುನಾಡಿನ 'ಆಲಡೆ' ಅಥವಾ ಬ್ರಹ್ಮಸ್ಥಾನ ಎಂದು ಕರೆಯಲ್ಪಡುವ ವಿಶಿಷ್ಟ ಆರಾಧನಾ ಸ್ಥಳಗಳಲ್ಲಿ ಮುಖ್ಯವಾಗಿ ನಾಗ, ಬ್ರಹ್ಮ, ರಕ್ತೇಶ್ವರಿ, ಹಾಗೂ ಕ್ಷೇತ್ರಪಾಲ ಎಂಬ ಶಕ್ತಿಗಳನ್ನು ಸಮಷ್ಟಿಯಾಗಿ ಪೂಜಿಸುವ ಸಂಪ್ರದಾಯವಿದೆ"[೨೮]. ಇವಲ್ಲದೆ ಬೇರೆಯೂ ಕೆಲವು ದೈವಗಳು ಆಲಡೆಯ ಸಂಕೀರ್ಣದಲ್ಲಿರಬಹುದು ಆದರೆ ನಾಗನ ಉಪಸ್ಥಿತಿಯಂತೂ ಅನಿವಾರ್ಯ. ಗುಳಿಗ ದೈವದ ಬನದಲ್ಲಿಯೂ ನಾಗನಿಗೆ ಎಡೆಯಿದೆ. "ಗುಳಿಗನ ವಾಹನವೂ ನಾಗ ಎನ್ನಲಾಗಿದೆ. ಅಷ್ಟ ನಾಗರಾಜರಲ್ಲಿ ಒಬ್ಬನ ಹೆಸರು 'ಕುಳಿಕ' ಎಂದಾಗಿದೆ"[೨೯]. ಹೀಗೆ ನಾಗಾರಾಧನೆಯು ತುಳುನಾಡಿನ ವಿಶಿಷ್ಟ ಹಾಗೂ ವಿಭಿನ್ನ ಆಚರಣೆಗಳಲ್ಲಿ ಒಂದಾಗಿದೆ.

ಅಡಿ ಟಿಪ್ಪಣಿ

೧. ಗೋಪಾಲಕೃಷ್ಣ ಪೈ, ಸ್ವಪ್ನ ಸಾರಸ್ವತ, ಪುಟ ೮.

೨. ಅದೇ, ಪುಟ ೮.

೩. ಅದೇ, ಪುಟ ೧೧.

೪. ಅದೇ, ಪುಟ ೧೧.

೫. ಅದೇ, ಪುಟ ೧೨.

೬. ಅದೇ, ಪುಟ ೨೦.

೭. ಅದೇ, ಪುಟ ೪೦.

೮. ಅದೇ, ಪುಟ ೮.

೯. ಅದೇ, ಪುಟ ೪೦.

೧೦. ಅದೇ, ಪುಟ ೪೧.

೧೧. ಅದೇ, ಪುಟ ೬೧.

೧೨. ಅದೇ, ಪುಟ ೮೯.

೧೩. ಅದೇ, ಪುಟ ೧೩೦.

೧೪. ಅದೇ, ಪುಟ ೧೫೬.

೧೫. ಅದೇ, ಪುಟ ೧೭೯.

೧೬. ಅದೇ, ಪುಟ ೧೮೨.

೧೭. ಅದೇ, ಪುಟ ೧೯೩.

೧೮. ಅದೇ, ಪುಟ ೧೯೫.

೧೯. ಅದೇ, ಪುಟ ೨೦೯.

೨೦. ಅದೇ, ಪುಟ ೧೯೭.

೨೧. ಅದೇ, ಪುಟ ೧೯೭.

೨೨. ಅದೇ, ಪುಟ ೨೮೮.

೨೩. ಅದೇ, ಪುಟ ೨೯೫.

೨೪. ಡಾ। ಪುರುಷೋತ್ತಮ ಬಿಳಿಮಲೆ, ಕರಾವಳಿ ಜಾನಪದ, ಪುಟ ೩೯.

೨೫. ಅದೇ, ಪುಟ ೪೦.

೨೬. ಅಮೃತ ಸೋಮೇಶ್ವರ, ತುಳುವ ಜಾನಪದ ಲೋಕ ಕೆಲವು ನೋಟಗಳು, ಪುಟ ೧೬.

೨೭. ಅದೇ, ಪುಟ ೧೭.

೨೮. ಅದೇ, ಪುಟ ೧೯.

೨೯. ಅದೇ, ಪುಟ ೧೯.

ಅಧ್ಯಾಯ ೫

ಉಪಸಂಹಾರ

೫.೧ ಉಪಸಂಹಾರ

೫.೨ ಪರಾಮರ್ಶನ ಗ್ರಂಥಗಳು

ಅಧ್ಯಾಯ ೫

ಉಪಸಂಹಾರ

೫.೧ ಉಪಸಂಹಾರ

ಕನ್ನಡ ಸಾಹಿತ್ಯದಲ್ಲಿ ಎಲೆಮರೆಯ ಕಾಯಿಯ ಹಾಗೆ ಅದೆಷ್ಟೋ ಸಾಹಿತಿಗಳನ್ನು ನಾವು ಕಾಣಬಹುದು. ಅವರಲ್ಲಿ ಗೋಪಾಲಕೃಷ್ಣ ಪೈಯವರು ಕೂಡಾ ಒಬ್ಬರು. ಕನ್ನಡ ಸಾಹಿತ್ಯ ಲೋಕಕ್ಕೆ ಅವರ ಕೊಡುಗೆ ಅಪಾರ. ಅವರ ಜೀವನದ ವಿವಿಧ ಮುಖಗಳನ್ನು ಏರುಪೇರುಗಳನ್ನು ತಮ್ಮ ಸಾಹಿತ್ಯದಲಿ ಪ್ರತಿಬಿಂಬಿಸಿದ್ದಾರೆ. ಸಾಮಾಜಿಕ ಪ್ರಜ್ಞೆ, ಇತಿಹಾಸ, ರಾಷ್ಟ್ರ ಪ್ರಜ್ಞೆ, ಮೊದಲಾದ ಅಂಶಗಳು ಅವರ ಬರವಣಿಗೆಯಲ್ಲಿ ಪ್ರತಿಫಲಿಸಿವೆ, ಪ್ರತಿಬಿಂಬಿಸಿವೆ. ಬದುಕಿನ ಎಲ್ಲಾ ಪರಿಯ ಸ್ತರಗಳು ಧ್ವನಿಸಿವೆ.

ಪೈಯವರು ಸತತ ಅಭ್ಯಾಸದ ಮೂಲಕ ತಮ್ಮದೇ ಆದ ಅನುಭವವನ್ನು, ಅಸಾಧಾರಣ ವ್ಯಕ್ತಿತ್ವವನ್ನು ಹೊಂದಿದವರು. ಆಧುನಿಕ ಸಾಹಿತ್ಯ ಲೋಕದಲ್ಲಿ ಕಥೆಗಾರರಾಗಿ, ಚಿಂತನಶೀಲರಾಗಿ, ಕಾದಂಬರಿಕಾರರಾಗಿ, ಅನುವಾದಕರಾಗಿ, ಹೀಗೆ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದವರು.

ಗೋಪಾಲಕೃಷ್ಣ ಪೈಯವರ ಸ್ವಪ್ನ ಸಾರಸ್ವತ ಕಾದಂಬರಿಯಲ್ಲಿ ವಲಸೆ ಪ್ರಕ್ರಿಯೆ ಎಂಬ ಶೀರ್ಷಿಕೆಯನ್ನು ಒಳಗೊಂಡ ಈ ನಿಬಂಧವು ಐದು ಅಧ್ಯಾಯಗಳನ್ನು ಒಳಗೊಂಡಿದೆ.

ಮೊದಲನೆಯ ಅಧ್ಯಾಯದಲ್ಲಿ ಪ್ರಸ್ತಾವನೆ, ಅಧ್ಯಯನದ ಉದ್ದೇಶ, ಮತು ವ್ಯಾಪ್ತಿ ಹಾಗೂ ಅಧ್ಯಯನದ ಸ್ವರೂಪ ಮತ್ತು ಈವರೆಗಿನ ಸಮೀಕ್ಷೆಯನ್ನು ಕುರಿತಂತೆ ತಿಳಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಪ್ರಮುಖವಾಗಿ ಗೋಪಾಲಕೃಷ್ಣ ಪೈಯವರ ಬದುಕಿನ ಹಿನ್ನೆಲೆಯನ್ನು ಹಾಗೂ ಅವರ ಬರಹಗಳಾದ ಸಣ್ಣ ಕಥೆ, ಕಾದಂಬರಿ, ಅನುವಾದ ಸಾಹಿತ್ಯ, ಚಲನಚಿತ್ರ ಕ್ಷೇತ್ರ ಹಾಗೂ ಅವರಿಗೆ ಲಭಿಸಿದ ಪ್ರಶಸ್ತಿಗಳನ್ನು ಕುರಿತಂತೆ ತಿಳಿಸಲಾಗಿದೆ ಹಾಗೂ ಪ್ರಮುಖವಾಗಿ ಸ್ವಪ್ನ ಸಾರಸ್ವತ ಕಾದಂಬರಿ ರೂಪುಗೊಂಡ ಬಗೆಯನ್ನು ತಿಳಿಸಲಾಗಿದೆ.

ಅಧ್ಯಾಯ ಮೂರರಲ್ಲಿ ವಲಸೆಗೆ ಸಂಬಂಧಿಸಿದಂತೆ ವಲಸೆಯ ಅರ್ಥ, ಬಗೆಗಳು, ವಲಸೆಗೆ ಕಾರಣಗಳನ್ನು ಹಾಗೂ ಕರ್ನಾಟಕ ಕರಾವಳಿಯಲ್ಲಿ ವಲಸೆಯ ಬಗ್ಗೆ, ಸ್ವಲ್ಪ ಮಟ್ಟಿಗೆ ಬೆಳಕನ್ನು ಚೆಲ್ಲಲಾಗಿದೆ. ಹಾಗೂ ಈ ಕಾದಂಬರಿಯ ವಿಷಯಕ್ಕೆ ಸಂಬಂಧಿಸಿದಂತೆ ಗೌಡ ಸಾರಸ್ವತರ ಐತಿಹಾಸಿಕ ಹಿನ್ನೆಲೆಯ ಬಗ್ಗೆ ತಿಳಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಪ್ರಮುಖವಾಗಿ ಸಂಪ್ರಬಂಧದ ಮುಖ್ಯ ವಿಷಯವಾದ 'ಸ್ವಪ್ನ ಸಾರಸ್ವತ' ಕಾದಂಬರಿಯಲ್ಲಿ ವಲಸೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ವ್ಯಕ್ತವಾಗಿರುವ ಕಾರಣಗಳು, ವಲಸೆ ಪ್ರಕ್ರಿಯೆಯಿಂದ ಉಂಟಾದ ಇಕ್ಕಟ್ಟು, ಬಿಕ್ಕಟ್ಟು ಮತ್ತು ಸಾಂಸ್ಕೃತಿಕ ಪಲ್ಲಟದ ಕುರಿತಂತೆ

ತಿಳಿಸಲಾಗಿದೆ. ಮುಖ್ಯವಾಗಿ ಗೌಡ ಸಾರಸ್ವತರ ವಲಸೆಯ ಯಾಂತ್ರಿಕ ವಿವರಗಳನ್ನು ನೀಡುವ ಬದಲು ಕಾದಂಬರಿಯು ಅವರ ಸಂಸ್ಕೃತಿಯು ಇತರ ಸಂಸ್ಕೃತಿಗಳೊಡನೆ ಮಾಡಿಕೊಂಡ ಅನುಸಂಧಾನ, ಕೊಡುಕೊಳ್ಳುವಿಕೆ, ಇತ್ಯಾದಿ ಅಂಶಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದೆ.

ಅಧ್ಯಾಯ ಐದರಲ್ಲಿ ಪ್ರಮುಖವಾಗಿ ಉಪಸಂಹಾರ, ಗ್ರಂಥಋಣ ಅಥವಾ ಪರಾಮರ್ಶನ ಗ್ರಂಥಗಳನ್ನು ಸೂಚಿಸಲಾಗಿದೆ ಹಾಗೂ ಅನುಬಂಧವನ್ನು ಒಳಗೊಂಡ ಈ ಅಧ್ಯಾಯದಲ್ಲಿ ಗೋಪಾಲ ಕೃಷ್ಣ ಪೈಯವರ ಸಂದರ್ಶನ, ಅವರ ಭಾವಚಿತ್ರ ಹಾಗೂ ಕಾದಂಬರಿಯ ಛಾಯಾರೂಪಗಳನ್ನು ಒಳಗೊಂಡಿದೆ.

ಈ ಮೇಲ್ಕಂಡ ಎಲ್ಲಾ ಅಧ್ಯಾಯಗಳ ಮುಖಾಂತರ ವಿಷಯಕ್ಕೆ ಅನುಗುಣವಾಗಿ ಈ ನಿಬಂಧವನ್ನು ರಚಿಸಲಾಗಿದೆ.

ಪರಾಮರ್ಶನ ಗ್ರಂಥಗಳು/ಲೇಖನಗಳು

೧.	ಅಮೃತ ಸೋಮೇಶ್ವರ	೨೦೦೭, ತುಳುವ ಜಾನಪದ ಲೋಕ ಕೆಲವು ನೋಟಗಳು, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨.	ಜೋಶಿ ಜಿ. ವಿ., ನೋರ್ಬರ್ಟ್ ಲೋಬೊ	ಎಪ್ರಿಲ್ ೨೦೦೯, ಕರಾವಳಿ ಕರ್ನಾಟಕದ ಅರ್ಥ ವ್ಯವಸ್ಥೆ: ಹಿಂದಿನಿಂದ ಇಂದಿನವರೆಗೆ, ಮಂಗಳ ಪ್ರಕಾಶನ, ಮಂಗಳೂರು – ೪.
೩.	ಜೋಶಿ ಜಿ. ವಿ.	೨೦೦೮, ಕರಾವಳಿ, "ನಗರೀಕರಣದ ಸ್ವರೂಪಗಳು ಮತ್ತು ಸೆಳೆತಗಳು", ಉದಯವಾಣಿ, ೦೭.೦೨.೨೦೦೮, ಪುಟ ೬.
೪.	ಪಿಯುಸ್ ಫೆಡಲಿಸ್ ಪಿಂಟೊ	೧೯೯೪, ಕರಾವಳಿ ಕರ್ನಾಟಕದ ಕ್ರೈಸ್ತರ ಇತಿಹಾಸ (ಕ್ರಿ. ಶ. ೧೫೦೦–೧೭೬೩), ಸಮನ್ವಯ ಪ್ರಕಾಶನ, ಮಂಗಳೂರು.
೫.	ಪುರುಷೋತ್ತಮ ಬಿಳಿಮಲೆ	೧೯೯೦, ಕರಾವಳಿ ಜಾನಪದ, ಪ್ರಸಾರಂಗ, ಮಂಗಳ ಗಂಗೋತ್ರಿ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.
೬.	ಮಹಾಲಿಂಗ	"ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಪಡೆದ ಎರಡು ಕೃತಿಗಳ ಕುರಿತು", ಉದಯವಾಣಿ, ಡಿಸೆಂಬರ್ ೨೮, ೨೦೧೧, ಮಂಗಳೂರು.
೭.	ಮಾಲತಿ ಎಸ್.	"ಕೊಂಕಣಿ ಸಮಾಜಕ್ಕೆ ಅಸ್ಮಿತೆ ತಂದುಕೊಟ್ಟ 'ಸ್ವಪ್ನ ಸಾರಸ್ವತ'", ಉದಯವಾಣಿ, ಡಿಸೆಂಬರ್ ೨೬, ೨೦೧೧, ಮಂಗಳೂರು.

೮.	ವಿಶ್ವನಾಥ ಕಾರ್ನಾಡ್	೧೯೯೪, ತುಳುವರ ಮುಂಬಯಿ ವಲಸೆ, ಮುಂಬಯಿ ವಿಶ್ವವಿದ್ಯಾಲಯ, ವಿದ್ಯಾನಗರಿ, ಮುಂಬಯಿ – ೯೮.
೯.	ಸಚ್ಚಿದಾನಂದ ಹೆಗ್ಡೆ ಬಿ.	೨೦೧೦, ತುಳುನಾಡವರ ಸಮಾಜ, ಕೌಸ್ತುಭ ಪ್ರಕಾಶನ, ಬಸವನಗುಡಿ, ಬೆಂಗಳೂರು – ೦೪.
೧೦.	ಸೂರ್ಯನಾಥ ಕಾಮತ್ (ಅನು), ಶಾಂತಾರಾಮ ಬಾಳಿಗಾ ಬಿ.	೨೦೦೩, ಗೌಡ ಸಾರಸ್ವತರ ಮೂಲ ಮತ್ತು ಪ್ರಸರಣ, ಕೃಷ್ಣ ವಿಟ್ಠಲ ಪ್ರಕಾಶನ, ಮಂಗಳೂರು.

ಗೋಪಾಲಕೃಷ್ಣ ಪೈಯವರ ಕೃತಿಗಳು/ಲೇಖನಗಳು

೧. ೧೯೮೬, ತಿರುವು, ಕಾವ್ಯಾಲಯ ಪ್ರಕಾಶನ, ಜಯನಗರ, ಮೈಸೂರು – ೧೪.

೨. ಅಕ್ಟೋಬರ್ ೨೦೦೯, ಸ್ವಪ್ನ ಸಾರಸ್ವತ, ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು.

೩. ೨೦೧೦, ಮೂರು ಮತ್ತಿಷ್ಟು, ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು.

೪. ಡಿಸೆಂಬರ್ ೨೫, ೨೦೧೧, "ನನ್ನ ಕಾದಂಬರಿಯ ಕಥೆ", ಪ್ರಜಾವಾಣಿ ಪುರವಣಿ, ಮಂಗಳೂರು, ಪುಟ ೩–೪.

ಅನುಬಂಧ

೧. ಪೈಯವರ ಸಂದರ್ಶನ

೨. ಪೈಯವರ ಭಾವಚಿತ್ರ

೩. 'ಸ್ವಪ್ನ ಸಾರಸ್ವತ' ಕಾದಂಬರಿಯ ಛಾಯಾರೂಪ

ಸಂದರ್ಶನ

ಸಂಶೋಧಕ: ನಿಮ್ಮ ಸಾಹಿತ್ಯ ರಚನೆಗೆ ಪ್ರೇರಣೆ ಏನು?

ಪೈ: ನಾನು ಮೂಲತಃ ವ್ಯಾಪಾರಿ, ವ್ಯವಸಾಯ ಎರಡೂ ಕುಟುಂಬದಿಂದ ಬಂದವನು. ನಮ್ಮದು ಪುಟ್ಟ ಸುಸಂಸ್ಕೃತ ಕುಟುಂಬ. ಚಿಕ್ಕ ವಯಸ್ಸಿನಿಂದಲೂ ಓದು ಮತ್ತು ಬರವಣಿಗೆಯಲ್ಲಿ ಆಸಕ್ತಿಯಿತ್ತು. ನನ್ನ ಕಾಲೇಜು ಶಿಕ್ಷಣದ ಅವಧಿಯಲ್ಲಿ ನನಗೆ ದೊರೆತ ಕನ್ನಡ ಶಿಕ್ಷಕರ ಪ್ರೇರಣೆ ನನಗೆ ಸಾಹಿತ್ಯದ ಬಗೆಗಿನ ಆಸಕ್ತಿಗೆ ಕಾರಣ.

ಸಂ: ಒಬ್ಬ ಬರಹಗಾರನಾಗಬೇಕಾದರೆ ಅವನಲ್ಲಿ ಯಾವ ಅಂಶಗಳಿರಬೇಕು?

ಪೈ: ಸತತವಾದ ಅಧ್ಯಯನಶೀಲತೆ, ಶ್ರಮ, ಸಾಮಾಜಿಕ ಕಳಕಳಿ ಇರಬೇಕು.

ಸಂ: ನಿಮಗೆ ಇಷ್ಟವಾದ ಸಾಹಿತ್ಯ ಪ್ರಕಾರ ಯಾವುದು?

ಪೈ: ನನಗೆ ಇಷ್ಟವಾದ ಸಾಹಿತ್ಯ ಪ್ರಕಾರ ಸಣ್ಣ ಕತೆ. ನನ್ನ ಆರಂಭದ ಬರವಣಿಗೆಗಳು ಪ್ರಾರಾಂಭವಾಗಿದ್ದೇ ಸಣ್ಣ ಕತೆಗಳಿಂದ. ಇತ್ತೀಚಿನ ದಿನಗಳಲ್ಲಿ ಅನುವಾದ ಸಾಹಿತ್ಯಕ್ಕೂ ಗಮನ ಕೇಂದ್ರೀಕರಿಸುತ್ತಿದ್ದೇನೆ.

ಸಂ: ನಿಮ್ಮ ಇತರ ಹವ್ಯಾಸಗಳು ಯಾವುವು?

ಪೈ: ಬಿಡುವಿನ ವೇಳೆಯಲ್ಲಿ ಪ್ರವಾಸ ಕೈಗೊಳ್ಳುವುದು. ಆ ಮೂಲಕ ಪ್ರತಿಯೊಂದು ಸ್ಥಳಗಳ ಇತಿಹಾಸವನ್ನು ಅರಿಯುವುದು ನನ್ನ ಅಭಿಲಾಷೆ, ವರ್ಷದ ಮುಕ್ಕಾಲು ಪಾಲು ಪ್ರವಾಸದಲ್ಲಿಯೇ ತೊಡಗಿರುತ್ತೇನೆ. ಆ ಮೂಲಕ ಬರವಣಿಗೆಗೆ ಆಕರಗಳನ್ನು ಸಂಗ್ರಹಿಸುತ್ತೇನೆ.

ಸಂ: ಬರೆದ ಒಂದೇ ಒಂದು ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಾಗ ನಿಮಗಾದ ಆನಂದ ಹೇಗಿತ್ತು?

ಪೈ: ಆ ಅನುಭವ ಹೇಳಲಿಕ್ಕೆ ಬರಲ್ಲ, ಅದನ್ನು ಅನುಭವಿಸಬೇಕಷ್ಟೇ. ಸತತ ಪರಿಶ್ರಮಕ್ಕೆ ಇಷ್ಟು ಬೇಗ ಫಲ ಸಿಗುತ್ತದೆ ಎಂದು ಭಾವಿಸಿರಲಿಲ್ಲ.

ಸಂ: ನಿಮ್ಮ ಮಾತೃಭಾಷೆ ಕೊಂಕಣಿ. ಆದರೆ ನೀವು ಬರೆದಿದ್ದು ಕನ್ನಡದಲ್ಲಿ. ಮಾತೃಭಾಷೆಯಲ್ಲಿ ಏಕೆ ಬರೆಯಲಿಲ್ಲ?

ಪೈ: ನನ್ನ ತಾಯಿ ಭಾಷೆ ಕೊಂಕಣಿಯೇ ಆಗಿದ್ದರೂ ನನಗೆ ಕನ್ನಡ ನೆಲ, ಕನ್ನಡ ಭಾಷೆ ಮಾತೃಭಾಷೆಯಷ್ಟೇ ಶ್ರೇಷ್ಠ. ನಾವು ಕೊಂಕಣಿಗಳು ಎನ್ನುವುದಕ್ಕಿಂತ ಕನ್ನಡಿಗರು ಎಂಬ ಹೆಮ್ಮೆ. ಹಾಗಾಗಿ ಕನ್ನಡದಲ್ಲಿಯೇ ಸಾಹಿತ್ಯ ಕೃಷಿ ಕೈಗೊಂಡೆನು.

ಸಂ: ನಿಮ್ಮ ಮುಂದಿನ ಬರವಣಿಗೆಯು ಕಾದಂಬರಿಯೇ ಆಗಿರುತ್ತದೆಯೇ?

ಪೈ: ಸಣ್ಣ ಕತೆಯ ಜೊತೆಗೆ ಅನುವಾದ ಸಾಹಿತ್ಯದಲ್ಲಿಯೂ ನನ್ನನ್ನು ನಾನು ತೊಡಗಿಸಿಕೊಂಡಿದ್ದೆ. ಒಂದು ಕಾದಂಬರಿ ಬರೆಯಲು ಕೆಲವೊಂದು ಅದ್ಯಯನವನ್ನು ಮಾಡುತ್ತಿದ್ದೇನೆ. ಬರೆದ ನಂತರ ಆ ಕಾದಂಬರಿಯ ವಿಷಯ, ವಸ್ತು, ಹೆಸರನ್ನು ತಿಳಿಸುತ್ತೇನೆ.

ಸಂ: ನಿಮಗೆ ಅಡಿಗರ ಸಖ್ಯವಿತ್ತು ಎಂದು ಕೇಳಿದ್ದೇವೆ. ಆದರೆ ನೀವು ನವ್ಯ ಪಂಥಕ್ಕೆ ಸೇರಿದವರಲ್ಲ, ಏಕೆ?

ಪೈ: ಅಡಿಗರ ಸಖ್ಯ ಬೆಳೆದದ್ದು ನಾನು ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಬೇಕಾದರೆ. ಕನ್ನಡ ಉಪನ್ಯಾಸಕ ರಾಮದಾಸ್‌ರಿಂದಾಗಿ ಅಡಿಗರ ಪರಿಚಯವಾಯಿತು. ಆದರೆ ನಾನು ಯಾವುದೇ ಸಾಹಿತ್ಯ ಪಂಥಕ್ಕೆ ಸೇರಲಿಲ್ಲ ಕಾರಣ ನನಗೆ ಎಲ್ಲಾ ಸಾಹಿತ್ಯ ಪಂಥದ ಉತ್ತಮ ಬರವಣಿಗೆಯ ಕೃತಿಗಳು ನನ್ನ ಮೇಲೆ ಪ್ರಭಾವ ಬೀರಿತು. ಜೊತೆಗೆ ಒಂದೇ ಪಂಥಕ್ಕೆ ಸೀಮಿತವಾಗುವುದು ನನಗೆ ಸರಿಕಾಣಲಿಲ್ಲ.

ಸಂ: ಇತ್ತೀಚಿನ ದಿನಗಳಲ್ಲಿ ಚಲನಚಿತ್ರ ಕ್ಷೇತ್ರದಲ್ಲಿಯೂ ನಿಮ್ಮನ್ನು ನೀವು ತೊಡಗಿಸಿಕೊಂಡಿದ್ದೀರಿ?

ಪೈ: ಹೌದು, ನನಗೆ ಇಷ್ಟವಾದ ಮಾಧ್ಯಮ ಚಲನಚಿತ್ರ ಕ್ಷೇತ್ರ, ಹಾಗಾಗಿ 'ಕನಸೆಂಬ ಕುದುರೆಯನ್ನೇರಿ' ಎಂಬ ಚಿತ್ರಕ್ಕೆ ಗಿರೀಶ್ ಕಾಸರವಳ್ಳಿಯವರೊಂದಿಗೆ ಚಿತ್ರಕಥೆಯನ್ನು ಬರೆದಿದ್ದೇನೆ. ಹಾಗೆಯೇ ಆ ಚಿತ್ರದ ಚಿತ್ರಕಥೆಗೆ ರಾಷ್ಟ್ರ ಪ್ರಶಸ್ತಿ ಲಭಿಸಿದೆ. ಹಾಗೆಯೇ ಪಿ. ಶೇಷಾದ್ರಿಯವರ 'ಬೆಟ್ಟದ ಜೀವ' ಚಿತ್ರಕ್ಕೆ ಚಿತ್ರಕಥೆ, ಸಂಭಾಷಣೆಯನ್ನು ಬರೆದಿದ್ದೇನೆ. 'ಉಜ್ವಾಡು' ಕೊಂಕಣಿ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆಯನ್ನೂ ಬರೆದಿದ್ದೇನೆ.

ಸಂ: ನೀವು ಕಾವ್ಯ ಬರೆಯಲಿಲ್ಲ ಏಕೆ?

ಪೈ: ನನಗೆ ಸಣ್ಣ ಕಥೆಗಾರನಾಗಿ, ಕಾದಂಬರಿಕಾರನಾಗಿ, ಅನುವಾದಕಾರನಾಗಿ, ಚಲನಚಿತ್ರ ಕ್ಷೇತ್ರದಲ್ಲಿಯೂ ನನಗೆ ತೃಪ್ತಿ ತಂದಿದೆ. ಮುಂದೊಂದು ದಿನ ಕಾವ್ಯ ಬರೆಯಲು ಮನಸ್ಸು ಬಂದರೂ ಬರಬಹುದು.

ಪೈಯವರ ಭಾವಚಿತ್ರ



‘ಸ್ವಪ್ನ ಸಾರಸ್ವತ’ ಕಾದಂಬರಿಯ ಛಾಯಾರೂಪ

